ಸಂಪುಟ: 06 ಸಂಚಿಕೆ: 200 ಪುಟಗಳು: 08 ಸೋಮವಾರ 05 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮಾತಿಗೆ ಮರುಳಾಗಬೇಡ ಮನುಷ್ಯ ಇದು ಬಣ್ಣ ಬಣ್ಣಗಳಿಂದ ಕೂಡಿದ ಪ್ರಪಂಚ. ಎಲ್ಲರೂ ನಮ್ಮವರಂತೆ ಕಂಡರೂ ಯಾರು ನಮ್ಮವರಲ್ಲ. ಅವರ ಅವಶ್ಯಕತೆ ಮುಗಿದ ತಕ್ಷಣ ನೀನು ಯಾರು ಎಂಬುದೇ ಮರೆತು ಬಿಡುತ್ತಾರೆ.

## ಕರ್ನಾಟಕ, ಕೇರಳದಲ್ಲೂ ವೋಟ್ ಚೋರಿ ಆಗಿರಬೇಕು ಅಲ್ವಾ, ನಿಮ್ಮ ಸಿಎಂಗಳಿಗೆ ರಾಜೀನಾಮೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ, ಕೇರಳಗಳಲ್ಲೂ ವೋಟ್ ಚೋರಿ ಆಗಿರಬೇಕು ಅಲ್ವಾ?. ಹಾಗಾದ್ರೆ ಎರಡೂ ಕಡೆಯೂ ನಿಮ್ಮ ಸರ್ಕಾರದವರು ಇದ್ದಾರೆ, ರಾಜೀನಾಮೆ ಕೊಡಿಸಿ ನೋಡೋಣ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸವಾಲು ಹಾಕಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎಸ್ಐಆರ್ ನಂತರದ ಚುನಾವಣೆಗಳ ರದ್ದು, ಬ್ಯಾಲೆಟ್ ಪೇಪರ್ ಚುನಾವಣೆಗೆ ಒತ್ತಾಯಿಸಿ ಮಲ್ಲಿಕಾರ್ಜುನ ಖರ್ಗೆಯವರು ಚುನಾವಣಾ ಆಯೋಗಕ್ಕೆ ಪತ್ರ ಬರೆದ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಬೇಡಿಕೆಯಲ್ಲಿಯೂ ಅರ್ಥ ಇರಬೇಕು ಎಂದರು. ಕರ್ನಾಟಕ, ಕೇರಳಗಳಲ್ಲೂ ವೋಟ್ ಚೋರಿ ಆಗಿರಬೇಕು ಅಲ್ವಾ?. ಹಾಗಾದ್ರೆ ಎರಡೂ ಕಡೆಯೂ ನಿಮ್ಮ ಸರ್ಕಾರದವ್ರು ಇದ್ದಾರೆ, ರಾಜೀನಾಮೆ ಕೊಡಿಸಿ ನೋಡೋಣ. ಯುಪಿಎ ಇದ್ದಾಗ ಹಲವು ಬಾರಿ ಚುನಾವಣಾ ಆಯೋಗ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಎಸ್ಐಆರ್ ಸಂವಿಧಾನದ ಪ್ರಕಾರ ನಡೀತಿದೆ. ಕಾಂಗ್ರೆಸ್ ಇದ್ದಾಗಲೂ ಎಸ್ಐಆರ್ ನಡೆದಿದೆ, ನಾವ್ಯಾರೂ ವಿರೋಧಿಸಿಲ್ಲ. ಇದನ್ನು ವಿರೋಧಿಸುವ ಅಗತ್ಯ ಇಲ್ಲ ಎಂದಿದ್ದಾರೆ. ಚುನಾವಣಾ ಆಯೋಗಕ್ಕೆ ದೂರು ವಿಚಾರವಾಗಿ ಮಾತನಾಡಿ, ಕಾಂಗ್ರೆಸ್ ಟೂಲ್ ಕಿಟ್ ಮೂಲಕ ಎಸ್ಐಆರ್ ವಿರೋಧಿಸ್ತಿದೆ. ಎಸ್ಐಆರ್ ಗೂ ಬಿಜೆಪಿಗೂ ಕಾಂಗ್ರೆಸ್‌ಗೂ ಸಂಬಂಧ ಇಲ್ಲ. ಫಾರ್ಮ್7 ಅರ್ಜಿ ಮೂಲಕ ಸತ್ತವರು, ನಕಲಿ ಮತದಾರರ ತೆಗೆಯಬೇಕು.

## ಜೋರಾಯ್ತು ಪ್ರದೀಪ್ ಈಶ್ವರ್, ಎಂ.ಸಿ ಸುಧಾಕರ್ ಫೈಟ್



• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಅಂಗಳಕ್ಕೆ ಕೋಲಾರ, ಚಿಕ್ಕಬಳ್ಳಾಪುರ ಕಾಂಗ್ರೆಸ್ ಶಾಸಕರ ಕಿತ್ತಾಟ ತಲುಪಿದೆ. ಎರಡು ಪ್ರತ್ಯೇಕ ಕಿತ್ತಾಟಗಳು ಸಿಎಂ ಡಿಕೆಶಿಗೆ ತಲೆನೋವಾಗಿದೆ. ಒಂದ್ಕಡೆ ಕೋಲಾರದಲ್ಲಿ ರೂಪಕಲಾ ಶಶಿಧರ್ ಬಂಗಾರಪೇಟೆ ನಾರಾಣಸ್ವಾಮಿ, ಇತರರು ಆದ್ರೆ, ಇನ್ನೊಂದೆಡೆ ಚಿಕ್ಕಬಳ್ಳಾಪುರದಲ್ಲಿ ಮಾಜಿ ಸಚಿವ, ಚಿಂತಾಮಣಿ ಶಾಸಕ ಎಂ.ಸಿ ಸುಧಾಕರ್, ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಕಿತ್ತಾಟ ಜೋರಾಗಿದೆ.

ಕೋಲಾರ ಡಿಸಿಸಿ ಬ್ಯಾಂಕ್ ವಿಚಾರವಾಗಿ ಇವತ್ತು ಕೋಲಾರ ಜಿಲ್ಲೆ ಶಾಸಕರಾದ ನಂಜೇಗೌಡ, ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ, ಕೊತ್ತೂರು ಮಂಜುನಾಥ್, ಶಾಸಕಿ ರೂಪಕಲಾ ಶಶಿಧರ್, ಚಿಕ್ಕಬಳ್ಳಾಪುರ ಜಿಲ್ಲೆ ಶಾಸಕರಾದ ಎಂ.ಸಿ ಸುಧಾಕರ್, ಸುಬ್ಬಾರೆಡ್ಡಿ ಸಿಎಂ ಭೇಟಿ ಮಾಡಿ ಮಾತುಕತೆ ನಡೆಸಿದ್ರು.

ಇದೇ ವೇಳೆ ಕೋಲಾರ ಕಿತ್ತಾಟದ ಬಗ್ಗೆ ಸಿಎಂ ಸೂಕ್ಷ್ಮವಾಗಿ ಎಚ್ಚರಿಸಿದ್ದಾರೆ ಎನ್ನಲಾಗಿದೆ. ಅಂದಹಾಗೆ ಮಾಜಿ ಸಚಿವ, ಹಾಲಿ ಚಿಂತಾಮಣಿ ಶಾಸಕ ಸುಧಾಕರ್ ವಿರುದ್ಧ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಬಹಿರಂಗವಾಗಿ ಸಮರ ಸಾರಿದ್ದು, ಆಸ್ತಿ ಬಗ್ಗೆ ಸ್ಫೋಟಕ ಮಾಹಿತಿ ಹೊರಗೆ ಹಾಕ್ತೀನಿ ಅಂತಾ ನಿನ್ನೆ ಟ್ವೀಟ್ ಮಾಡಿದ್ದು, ಕಿತ್ತಾಟ ಇನ್ನಷ್ಟು ಜೋರಾಗಲು ಕಾರಣವಾಗಿದೆ.

## ಎಸೆಸ್ಸೆಲ್ಸಿ ಪರೀಕ್ಷೆಗೆ ಸಿದ್ಧತೆ ನಡೆಸಿರುವ ವಿದ್ಯಾರ್ಥಿಗಳಿಗೆ ಬಿಗ್ ಶಾಕ್

• ಉದಯವಾಹಿನಿ, ಬೆಂಗಳೂರು

2026-27ನೇ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ಪರೀಕ್ಷಾ ಶುಲ್ಕವನ್ನು ಶೇ.5ರಷ್ಟು ಹೆಚ್ಚಿಸಿ ಆದೇಶ ಹೊರಡಿಸಿದೆ. ಹೊಸದಾಗಿ ಪರೀಕ್ಷೆ ಬರೆಯುವವರು, ಖಾಸಗಿ ಹಾಗೂ ಪುನರಾವರ್ತಿತ ಅಭ್ಯರ್ಥಿಗಳ ನೋಂದಣಿ ಮತ್ತು ಪರೀಕ್ಷಾ ಶುಲ್ಕಗಳನ್ನು ಸಹ ಏರಿಕೆ ಮಾಡಲಾಗಿದೆ. ಪ್ರಥಮ ಬಾರಿಗೆ ಪರೀಕ್ಷೆ ಬರೆಯುವವರಿಗೆ ಪರೀಕ್ಷಾ ಶುಲ್ಕವನ್ನು ಶೇ.5ರಷ್ಟು ಹೆಚ್ಚಳ ಮಾಡಲಾಗಿದೆ. ಈ ಮೂಲಕ ಎಸ್ಎಸ್ಎಲ್ಸಿ ಪರೀಕ್ಷಾ ಶುಲ್ಕ 710 ರೂಪಾಯಿಗಳಿಂದ 746 ರೂಪಾಯಿಗೆ ಏರಿಕೆಯಾಗಿದೆ. ಈಗಾಗಲೇ 10ನೇ ತರಗತಿ ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿರುವ ಅಭ್ಯರ್ಥಿಗಳಿಗೂ ಹೆಚ್ಚುವರಿ ಶುಲ್ಕ ಪಾವತಿ ಮಾಡುವಂತೆ ಶಾಲಾ ಶಿಕ್ಷಣ ಮೌಲ್ಯಮಾಪನ ಮಂಡಳಿ ಆದೇಶದಲ್ಲಿ ತಿಳಿಸಿದೆ. ಹೀಗಾಗಿ ಈಗಾಗಲೇ ಎಸ್ಎಸ್ಎಲ್ಸಿ ಪರೀಕ್ಷೆ ಬರೆಯಲು ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು 76 ಹೆಚ್ಚುವರಿ ಶುಲ್ಕ ಪಾವತಿಸಬೇಕಿದೆ. ಇನ್ನು ಪುನರಾವರ್ತಿತವಾಗಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಶುಲ್ಕದಲ್ಲೂ ಏರಿಕೆಯಾಗಿದೆ. ಈ ಮೊದಲು ಒಂದು ವಿಷಯಕ್ಕೆ 448 ರೂಪಾಯಿ ಪಾವತಿಸಬೇಕಿತ್ತು. ಆದರೆ ಈ ಒಂದು ವಿಷಯಕ್ಕೆ 470 ರೂಪಾಯಿ ಪಾವತಿಸಬೇಕಿದೆ. ಇನ್ನು ಎರಡು ವಿಷಯಕ್ಕೆ 559 ರೂ,ನಿಂದ 587 ರೂಪಾಯಿಗೆ ಏರಿಕೆ ಮಾಡಲಾಗಿದೆ.

## ನೆಲಮಂಗಲ ಭಾಗದಲ್ಲಿ ಮಿತಿಮೀರಿದ ಕಳ್ಳರ ಹಾವಳಿ

• ಉದಯವಾಹಿನಿ, ಬೆಂಗಳೂರು

ನೆಲಮಂಗಲ ಭಾಗದಲ್ಲಿ ಕಳ್ಳರ ಹಾವಳಿ ಜಾಸ್ತಿಯಾಗಿದೆ. ಪೊಲೀಸರು ಎಷ್ಟೇ ಪ್ರಯತ್ನ ಪಟ್ಟರೂ ಕಳ್ಳರನ್ನ ಸದೆಬಡಿಯುವುದು ಕಷ್ಟವಾಗಿದೆ. ಮೇಲಿಂದ ಮೇಲೆ ಕಳ್ಳತನ ನಡೆಯುತ್ತಿದ್ದು, ಇದೀಗ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ. ದೇವರ ವಿಗ್ರಹದ ಮೇಲಿನ ತಾಳಿಯನ್ನೂ ಬಿಡದೆ ಎಲ್ಲವನ್ನು ಖದೀಮರು ಕದ್ದೊಯ್ದಿರುವ ಘಟನೆ ನೆಲಮಂಗಲ ತಾಲ್ಲೂಕಿನ ತ್ಯಾಗದಹಳ್ಳಿಯಲ್ಲಿ ನಡೆದಿದೆ. ಲಕ್ಷ್ಮೀ ದೇವಸ್ಥಾನದ ಬೀಗ ಮುರಿದು ಒಳ ನುಗ್ಗಿದ ಕಳ್ಳರು, ಒಂದುವರೆ ಲಕ್ಷ ರೂ ಮೌಲ್ಯದ 14 ಗ್ರಾಂ ಚಿನ್ನ ಹಾಗೂ ಬೆಳ್ಳಿಯ ಮುಖವಾಡ, ಹುಂಡಿ, ರೇಷ್ಮೆ ಸೀರೆ ಸೇರಿದಂತೆ ಸಿಕ್ಕಿದ್ದನ್ನೆಲ್ಲಾ ಕಳ್ಳತನ ಮಾಡಿ ಎಸ್ಕೇಪ್ ಆಗಿದ್ದಾರೆ. ಘಟನೆ ಸಂಬಂಧ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತವು ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಒತ್ತು ನೀಡುತ್ತಲೇ ಮಾಸ್ಕೋ ಮತ್ತು ಕೈವ್ ಎರಡರೊಂದಿಗೂ ಸಂಪರ್ಕವನ ಕಾಯ್ದುಕೊಂಡಿದೆ. ಭಾರತವು ಎರಡೂ ಕಡೆಯವರೊಂದಿಗೆ ನಿರಂತರ ಸಂಪರ್ಕದಲ್ಲಿದೆ. ಸಂಘರ್ಷವನ್ನು ತಗ್ಗಿಸಲು ಹಾಗೂ ಅಂತಿಮವಾಗಿ ಕೊನೆಗೊಳಿಸಲು ನೆರವಾಗುವ ಮಾರ್ಗಗಳನ್ನು ಪರಿಶೀಲಿಸುತ್ತಿದ್ದೇವೆ. ಭಾರತವು ಯಾವುದೇ ರೀತಿಯಲ್ಲಿ ಸಹಾಯ ಮಾಡಬಹುದಾದರೆ, ನಾವು ಅದಕ್ಕೆ ಸಿದ್ಧರಿದ್ದೇವೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಕಳೆದ ತಿಂಗಳ ಕೈವ್ ಗೆ ಭೇಟಿ ನೀಡಿದ ಸಂದರ್ಭದಲ್ಲಿ ಹೇಳಿದ್ದರು. ಆ ಭೇಟಿಯ ವೇಳೆ ಜೈಶಂಕರ್ ಅವರು ಝುಲೆನ್ಸಿ ಮತ್ತು ಸಿಬಿಹಾ ಅವರನ್ನು ಭೇಟಿಯಾಗಿದ್ದರು. ಶಾಂತಿ ಪ್ರಯತ್ನಗಳು, ದ್ವಿಪಕ್ಷೀಯ ಸಹಕಾರ, ಕಪ್ಪುಸಮುದ್ರದ ನೌಕಾಯಾನ ಮತ್ತು ಜಾಗತಿಕ ಆಹರ ಭದ್ರತೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆದಿತ್ತು.ಕಪ್ಪು ಸಮುದ್ರದಲ್ಲಿ ನೌಕಾಯಾನದ ಸ್ವಾತಂತ್ರ್ಯವನ್ನು ಪುನಃಸ್ಥಾಪಿಸುವ ಪ್ರಯತ್ನಗಳಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ಉಕ್ರೇನ್ ಗೌರವಿಸುತ್ತದೆ ಎಂದು ಸಿಬಿಹಾ ಈ ಹಿಂದೆ ಹೇಳಿದ್ದರು.'ಜಾಗತಿಕ ಆಹಾರ ಭದ್ರತೆಗೆ ನೌಕಾಯಾನದ ಸ್ವಾತಂತ್ರ್ಯವನ್ನು ಪುನಃಸ್ಥಾಪಿಸುವುದು ನಿರ್ಣಾಯಕವಾಗಿದೆ. ಉಕ್ರೇನ್ ರಚನಾತ್ಮಕ ಪಾತ್ರವಹಿಸಲು ಸಿದ್ಧವಾಗಿದೆ ಮತ್ತು ಭಾರತದ ಪಾಲ್ಗೊಳ್ಳುವಿಕೆಯನ್ನು ನಾವು ಗೌರವಿಸುತ್ತೇವೆ.

## ರಷ್ಯಾ ಜೊತೆಗಿನ ಯುದ್ಧದ ಅಂತ್ಯಕ್ಕೆ ಭಾರತದ ಶಾಂತಿ ಪ್ರಸ್ತಾಪವೇ ಅತ್ಯಂತ ಸಮಗ್ರವಾಗಿದೆ



ರಷ್ಯಾ ಮತ್ತು ಉಕ್ರೇನ್ ನಡುವಿನ ದೀರ್ಘಕಾಲದ ಯುದ್ಧವನ್ನು ಕೊನೆಗೊಳಿಸಲು ಜಾಗತಿಕ ಮಟ್ಟದಲ್ಲಿ ಮುನ್ನೆಲೆಗೆ ಬಂದಿರುವ 4 ಪ್ರಮುಖ ರಾಷ್ಟ್ರಗಳ ರಾಜತಾಂತ್ರಿಕ ಯೋಜನೆಗಳಲ್ಲಿ ಭಾರತದ ಪ್ರಸ್ತಾಪವೇ ಅತ್ಯಂತ ಸಮಗ್ರವಾಗಿದೆ ಎಂದು ಉಕ್ರೇನ್ ಹೇಳಿದೆ. ಈ ಬಗ್ಗೆ ಕೈವ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಉಕ್ರೇನ್ ವಿದೇಶಾಂಗ ಸಚಿವ ಆಯಂಡ್ರಿ ಸಿಬಿಹಾ, ಪ್ರಸ್ತುತ ಉಕ್ರೇನ್ ಮುಂದೆ 4 ಅಂತಾರಾಷ್ಟ್ರೀಯ ಶಾಂತಿ ಪ್ರಸ್ತಾಪಗಳಿವೆ. ಅವುಗಳಲ್ಲಿ ಭಾರತದ ಪ್ರಸ್ತಾಪ ನಾಲ್ಕೂ ಯೋಜನೆಗಳಲ್ಲಿ ಅತ್ಯಂತ ಸಮಗ್ರ ಯೋಜನೆಯಾಗಿದೆ ಎಂದಿದ್ದಾರೆ. ಮೊದಲ ಬಾರಿಗೆ ಭಾರತವು ಈ ಯುದ್ಧವನ್ನು ಕೊನೆಗೊಳಿಸಲು ಸಕ್ರಿಯ ಮಧ್ಯಸ್ಥಿಕೆ ವಹಿಸಲು ಆಸಕ್ತಿ ವ್ಯಕ್ತಪಡಿಸಿದೆ. ಆದರೆ, ಭಾರತದ ಪ್ರಸ್ತಾಪಗಳೇನು ಎಂಬುದರ ಬಗ್ಗೆ ಉಕ್ರೇನ್ ಪೂರ್ತಿ ಮಾಹಿತಿ ಬಹಿರಂಗಪಡಿಸಿಲ್ಲ. ರಷ್ಯಾ ಮತ್ತು ಉಕ್ರೇನ್ ನಡುವಿನ ಭೀಕರ ಯುದ್ಧವನ್ನು ಕೊನೆಗೊಳಿಸಲು ಜಾಗತಿಕ ಮಟ್ಟದಲ್ಲಿ ಸಲ್ಲಿಕೆಯಾಗಿರುವ 4 ಪ್ರಮುಖ ಶಾಂತಿ ಪ್ರಸ್ತಾಪಗಳಲ್ಲಿ ಭಾರತ ನೀಡಿರುವ ಪ್ರಸ್ತಾಪವೇ ಅತ್ಯಂತ ಸಮಗ್ರವಾಗಿದೆ ಎಂದು ಉಕ್ರೇನ್ ಬಹಿರಂಗವಾಗಿ ಪ್ರಶಂಸಿಸಿದೆ. 2022ರ ಫೆಬ್ರವರಿಯಲ್ಲಿ ಯುದ್ಧ ಪ್ರಾರಂಭವಾದ ನಂತರ ರಷ್ಯಾ-ಉಕ್ರೇನ್ ನಡುವೆ ಮಧ್ಯಸ್ಥಿಕೆ ವಹಿಸುವ ಭಾರತದ ರಾಜತಾಂತ್ರಿಕ ನಿಲುವಿನಲ್ಲಿ ಕಂಡುಬಂದಿರುವ ಅತ್ಯಂತ ಮಹತ್ವದ ಬದಲಾವಣೆ ಇದಾಗಿದೆ. ಶಾಂತಿ ಪ್ರಕ್ರಿಯೆಯಲ್ಲಿ ಸಕ್ರಿಯ ಮಧ್ಯಸ್ಥಿಕೆ ವಹಿಸಲು ಭಾರತ ಇದೇ ಮೊದಲ ಬಾರಿಗೆ ಅಧಿಕೃತವಾಗಿ ಮುಕ್ತ ಮನಸ್ಸು ತೋರಿದೆ ಎಂದು ಅವರು ಹೇಳಿದ್ದಾರೆ.



ಭಾರತ ಶಾಂತಿ ಪ್ರಕ್ರಿಯೆ

## ಅಮೆರಿಕದ ಪ್ರಸ್ತಾಪ

ಎರಡೂ ದೇಶಗಳು ಪರಸ್ಪರ ಇಂಧನ ಹಾಗೂ ವಿದ್ಯುತ್ ಮೂಲಸೌಕರ್ಯಗಳ ಮೇಲಿನ ದಾಳಿಗಳನ್ನು ನಿಲ್ಲಿಸಲು ಕದನ ವಿರಾಮ ಒಪ್ಪಂದ ರೂಪಿಸುವುದು. ಕಪ್ಪು ಸಮುದ್ರದಲ್ಲಿ ದಾಳಿಗಳನ್ನು ಸ್ಥಗಿತಗೊಳಿಸಿ, ಉಕ್ರೇನಿಯನ್ ಧಾನ್ಯ ಹಾಗೂ ಕೃಷಿ ಉತ್ಪನ್ನಗಳ ರಫ್ತಿಗೆ ಸುರಕ್ಷಿತ ನೌಕಾ ಮಾರ್ಗ ಒದಗಿಸುವುದು.



ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿ ತಡೆಯುವ ಕದನ ವಿರಾಮಕ್ಕೆ ಉಕ್ರೇನ್ ಸಮ್ಮತಿಸಬೇಕಾದರೆ, ಅದನ್ನು ಕಪ್ಪು ಸಮುದ್ರದ ಜಲಮಾರ್ಗಗಳಲ್ಲಿನ ದಾಳಿ ತಡೆಯುವ ಕದನ ವಿರಾಮಕ್ಕೂ ಕಡ್ಡಾಯವಾಗಿ ಅನ್ವಯಿಸಬೇಕು ಎಂದು ಉಕ್ರೇನ್ ವಿದೇಶಾಂಗ ಸಚಿವ ಆ್ಯಂಡ್ರಿ ಸಿಬಿಹಾ ಪ್ರಮುಖ ಷರತ್ತನ್ನು ವಿಧಿಸಿದ್ದಾರೆ. ಉಕ್ರೇನ್ ಕೇವಲ ಇಂಧನ ನೆಲೆಗಳ ಮೇಲಿನ ದಾಳಿ ನಿಲ್ಲಿಸುವ ಅಮೆರಿಕದ ಪ್ರಸ್ತಾಪವನ್ನು ಪ್ರತ್ಯೇಕವಾಗಿ ಒಪ್ಪಿಕೊಳ್ಳುವುದಿಲ್ಲ ಎಂದು ಸಚಿವ ಸಿಬಿಹಾ ಸ್ಪಷ್ಟಪಡಿಸಿದ್ದಾರೆ.

ನಾವು ಇಂಧನ ಮತ್ತು ಕಪ್ಪು ಸಮುದ್ರದ ಮೇಲಿನ ಕದನ ವಿರಾಮಕ್ಕೆ ಸಿದ್ಧರಿದ್ದೇವೆ. ಆದರೆ ಈ ಎರಡೂ ಪ್ರಸ್ತಾಪಗಳನ್ನು ಒಟ್ಟಾಗಿ ಅನುಷ್ಠಾನಗೊಳಿಸಿದರೆ ಮಾತ್ರ ಉಕ್ರೇನ್ ಇದಕ್ಕೆ ಒಪ್ಪಿಗೆ ನೀಡಲಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು, ಪ್ರಧಾನಿ ನರೇಂದ್ರ ಮೋದಿ ಯುದ್ಧ ಕೊನೆಗೊಳಿಸುವ ಕುರಿತು ಸದಾ ಪ್ರಸ್ತಾಪಿಸುತ್ತಾರೆ ಮತ್ತು ಅವರ ಬಳಿ ಅತ್ಯುತ್ತಮ ಕಲ್ಪನೆಗಳಿವೆ ಎಂದು ಹೇಳಿದ ಬೆನ್ನಲ್ಲೇ ಉಕ್ರೇನ್ ಈ ಮಾಹಿತಿಯನ್ನು ಬಹಿರಂಗಪಡಿಸಿದೆ.

# ಉಕ್ರೇನ್ ಮೇಲೆ ರಷ್ಯಾ ಡ್ರೋನ್ ದಾಳಿ

• ಉದಯವಾಹಿನಿ, ಕೈವ್

ಉಕ್ರೇನ್‌ನ ಮೇಲೆ ರಷ್ಯಾ ಡ್ರೋನ್ ದಾಳಿ ನಡೆಸಿದ ಪರಿಣಾಮ ಸುಮಿ ಪ್ರದೇಶದಲ್ಲಿರುವ ಭಾರತದ ಕುಸುಮ್ ಗ್ರೂಪ್‌ಗೆ ಸೇರಿದ ಬೃಹತ್ ಔಷಧ ತಯಾರಿಕಾ ಘಟಕ ಧ್ವಂಸಗೊಂಡಿದೆ. ದಾಳಿಯಲ್ಲಿ ಓರ್ವ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ರಷ್ಯಾ ಡ್ರೋನ್ ದಾಳಿಯಿಂದ ಫಾರ್ಮಾ ಘಟಕದ ಮುಖ್ಯ ಕಟ್ಟಡ ಬಹುತೇಕ ಸಂಪೂರ್ಣವಾಗಿ ಧ್ವಂಸಗೊಂಡಿದೆ. ಮೃತಪಟ್ಟವರು ಹಾಗೂ ಗಾಯಗೊಂಡವರ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಡ್ರೋನ್‌ಗಳು ದಾಳಿ ನಡೆಸಿದ ಪ್ರದೇಶದಿಂದ ಭಾರೀ ಪ್ರಮಾಣದಲ್ಲಿ ಹೊಗೆ ಮೇಲಕ್ಕೆ ಬರುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ಕುಸುಮ್ ಗ್ರೂಪ್ 1994ರಲ್ಲಿ ಉಕ್ರೇನ್‌ಗೆ ಭಾರತೀಯ ಔಷಧಗಳನ್ನು ರಫ್ತು ಮಾಡುವ ವಿತರಕ ಸಂಸ್ಥೆಯಾಗಿ ಕಾರ್ಯಾರಂಭ ಮಾಡಿತ್ತು.

ಪ್ರಸ್ತುತ ಭಾರತೀಯ ಮೂಲದ ರಾಜೀವ್ ಗುಪ್ತಾ ಅವರು ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. 2002ರಲ್ಲಿ ಇತರ ಕಂಪನಿಗಳ ಉತ್ಪನ್ನಗಳ ವಿತರಣೆಯನ್ನು ನಿಲ್ಲಿಸಿದ ಸಂಸ್ಥೆ, ತನ್ನದೇ ಬ್ರ್ಯಾಂಡ್‌ಗಳ ಔಷಧಗಳನ್ನು ಮಾರುಕಟ್ಟೆಗೆ ಪರಿಚಯಿಸಲು ಆರಂಭಿಸಿತು. ಬಳಿಕ ಔಷಧ ತಯಾರಿಕಾ ಕ್ಷೇತ್ರಕ್ಕೆ ಕಾಲಿಟ್ಟಿತು. 2007ರಲ್ಲಿ ಭಾರತದಲ್ಲಿ ಔಷಧ ತಯಾರಿಕಾ ಘಟಕವನ್ನು ಆರಂಭಿಸಿದ ಸಂಸ್ಥೆ, 2009ರಲ್ಲಿ ಉಕ್ರೇನ್‌ನ ಸುಮಿಯಲ್ಲಿ ಮತ್ತೊಂದು ಘಟಕವನ್ನು ಸ್ಥಾಪಿಸಿತು. ನಂತರ ಭಾರತದಲ್ಲಿ ಇನ್ನೂ ಎರಡು ತಯಾರಿಕಾ ಘಟಕಗಳನ್ನು ಆರಂಭಿಸಿತು.

**50ಕ್ಕೂ ಹೆಚ್ಚು ಜೆನೆರಿಕ್ ಔಷಧಗಳ ಉತ್ಪಾದನೆ:** ಕುಸುಮ್ ಗ್ರೂಪ್ 50ಕ್ಕೂ ಹೆಚ್ಚು, ಪ್ರಮುಖವಾಗಿ ಜೆನೆರಿಕ್ ಔಷಧಗಳನ್ನು ತಯಾರಿಸುತ್ತದೆ. ಸಂಸ್ಥೆಯ ಉತ್ಪನ್ನಗಳು 9ಕ್ಕೂ ಹೆಚ್ಚು ದೇಶಗಳಲ್ಲಿ ಮಾರಾಟವಾಗುತ್ತಿವೆ. ಉಕ್ರೇನ್, ಉಜ್ಬೇಕಿಸ್ತಾನ್, ಕಜಕಿಸ್ತಾನ್ ಮತ್ತು ಫಿಲಿಪ್ಪೀನ್ಸ್ ಸಂಸ್ಥೆಯ ಪ್ರಮುಖ ಮಾರುಕಟ್ಟೆಗಳಾಗಿವೆ. ರಷ್ಯಾ-ಉಕ್ರೇನ್ ಯುದ್ಧದ ಹಲವು ವರ್ಷಗಳ ನಡುವೆಯೂ ಸುಮಿಯಲ್ಲಿರುವ ಕುಸುಮ್ ಘಟಕ ಕಾರ್ಯನಿರ್ವಹಿಸುತ್ತಿತ್ತು. ಆದರೆ ಇದೀಗ ರಷ್ಯಾ ಡ್ರೋನ್ ದಾಳಿಯಿಂದ ಘಟಕಕ್ಕೆ ಭಾರೀ ಹಾನಿಯಾಗಿದೆ. ದಾಳಿಯಿಂದ ಉಂಟಾದ ನಷ್ಟದ ಪ್ರಮಾಣ ಕನಿಷ್ಠ 400 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

## ರಷ್ಯಾ ದಾಳಿ ಖಂಡಿಸಿದ ಝೆಲೆನ್ಸ್ಕಿ

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ರಷ್ಯಾದ ದಾಳಿಯನ್ನು ಖಂಡಿಸಿದ್ದು, ಮೃತ ವ್ಯಕ್ತಿಯ ಕುಟುಂಬ ಮತ್ತು ಆಪ್ತರಿಗೆ ಸಂತಾಪ ಸೂಚಿಸಿದ್ದಾರೆ. ರಷ್ಯಾರನ್ನ ಕೈವ್‌ನ ಪಿವ್ನಿಚ್ನಿ ಸೇತುವೆಯ ಮೇಲೆ ಮತ್ತೊಮ್ಮೆ ಡ್ರೋನ್ ಮೂಲಕ ದಾಳಿ ನಡೆಸಿದರು.

ಅವರು ಸುಮಿ ನಗರದಲ್ಲಿನ ಸಾಮಾನ್ಯ ಔಷಧೀಯ ಗೋದಾಮಿನ ಮೇಲೂ ಡ್ರೋನ್‌ಗಳ ಮೂಲಕ ದಾಳಿ ಮಾಡಿದರು. ದುರದೃಷ್ಟವಶಾತ್, ಇದರಲ್ಲಿ ಒಬ್ಬರು ಮೃತಪಟ್ಟರು. ಮೃತರ ಕುಟುಂಬ ಮತ್ತು ಆಪ್ತರಿಗೆ ನನ್ನ ಸಂತಾಪಗಳು. ರಷ್ಯಾನ್ ಸೇನೆ ಸಂವಹನ ಕೇಂದ್ರವೊಂದರ ಮೇಲೆ ದಾಳಿ ನಡೆಸಿದೆ. ಈ ದಾಳಿಗಳ ಪರಿಣಾಮವಾಗಿ ಆರು ಮಂದಿ ಗಾಯಗೊಂಡಿದ್ದಾರೆ ಎಂದು ವೊಲೊಡಿಮಿರ್ ಝೆಲೆನ್ಸ್ಕಿ ತಿಳಿಸಿದ್ದಾರೆ. ರಷ್ಯಾ-ಉಕ್ರೇನ್ ಯುದ್ಧದ ನಡುವೆಯೂ ಸುಮಿ ಘಟಕವು ಕಾರ್ಯನಿರ್ವಹಿಸುತ್ತಲೇ ಇತ್ತು. ಆದರೆ ಈಗ ಅದು ದಾಳಿಗೆ ತುತ್ತಾಗಿದ್ದು, ಕನಿಷ್ಠ 400 ಕೋಟಿ ರೂ. ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ. ಕುಸುಮ್ ಸಂಸ್ಥೆ ತನ್ನನ್ನು ಭಾರತೀಯ ಬೇರುಗಳನ್ನು ಹೊಂದಿರುವ ಉಕ್ರೇನಿಯನ್ ಕಂಪನಿ ಎಂದು ಹೇಳಿಕೊಂಡಿದೆ. ರಷ್ಯಾ ನಿರಂತರವಾಗಿ ಉಕ್ರೇನ್‌ನಲ್ಲಿ ಡಜನ್ಗಟ್ಟಲೆ ವೇಗದ ಮತ್ತು ತುಲನಾತ್ಮಕವಾಗಿ ಅಗ್ಗದ ಜೆಟ್-ಚಾಲಿತ ಶಹೆದ್ ಡ್ರೋನ್‌ಗಳನ್ನು ಉಡಾಯಿಸಿದೆ. ಇಂಟರ್‌ಸೆಪ್ಟರ್ ಡ್ರೋನ್‌ಗಳು ಅವುಗಳನ್ನು ಹಿಡಿಯಲು ವಿಫಲವಾಗುತ್ತಿದ್ದು, ಉಕ್ರೇನ್‌ನ ವಾಯು ರಕ್ಷಣಾ ತಂಡಗಳು ಈ ಡ್ರೋನ್ ದಾಳಿಗಳನ್ನು ಹಿಮ್ಮೆಟ್ಟಿಸಲು ಹರಸಾಹಸಪಡುತ್ತಿವೆ.

## ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡ ಸಿದ್ದರಾಮಯ್ಯ ಕೆ.ವೆಂಕಟೇಶ್; ಅಕ್ಕಪಕ್ಕ ಕೂತ್ರೂ ಗಪ್‌ಚುಪ್

• ಉದಯವಾಹಿನಿ, ಬೆಂಗಳೂರು

ಸಿಎಂ ಸ್ಥಾನದಿಂದ ಕೆಳಗಿಳಿದ ಬಳಿಕ ಸಿದ್ದರಾಮಯ್ಯ ಹಾಗೂ ಅವರ ಆಪ್ತರಾಗಿದ್ದ ಮಾಜಿ ಸಚಿವ ಕೆ.ವೆಂಕಟೇಶ್ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ. ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಮುನಿಸಿಕೊಂಡಿದ್ದ ಕೆ.ವೆಂಕಟೇಶ್, ಕಳೆದ ಕೆಲ ದಿನಗಳಿಂದ ಅವರಿಂದ ಅಂತರ ಕಾಯ್ದುಕೊಂಡಿದ್ದರು. ಆದರೆ ಇದೀಗ ಮೈಸೂರಿನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಇಬ್ಬರೂ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲಾ ಕಾಂಗ್ರೆಸ್ ನೂತನ ಜಿಲ್ಲಾಧ್ಯಕ್ಷ ಅಧಿಕಾರ ಸ್ವೀಕಾರ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಹಾಗೂ ಕೆ.ವೆಂಕಟೇಶ್ ಇಬ್ಬರೂ ಭಾಗಿಯಾಗಿದ್ದರು. ಅಕ್ಕಪಕ್ಕ ಕುಳಿತಿದ್ದರೂ ಮಾತಿಲ್ಲ, ಕಥೆಯಿಲ್ಲ. ಮತ್ತೊಂದೆಡೆ ಮತ್ತೊಬ್ಬ ಮಾಜಿ ಸಚಿವ, ಸಿದ್ದರಾಮಯ್ಯ ಆಪ್ತ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮಕ್ಕೆ ಗೈರಾಗಿದ್ದು, ಸಿದ್ದು ಜೊತೆಗಿನ ಮುನಿಸು ಮುಂದುವರೆಸಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಮೈಸೂರಿಗೆ ಬಂದಾಗಲೆಲ್ಲ ಅವರ ಜೊತೆ ಕಾಣಿಸಿಕೊಳ್ಳುತ್ತಿದ್ದ ಮಹದೇವಪ್ಪ, ಸಿದ್ದರಾಮಯ್ಯರಿಂದ ಅಂತರ ಕಾಯ್ದುಕೊಂಡಿದ್ದಾರೆ.



## ವಿಜಯೇಂದ್ರ ಸಮ್ಮುಖದಲ್ಲೇ ಬಿಜೆಪಿ ಕಾರ್ಯಕರ್ತರ ಕಿತ್ತಾಟ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಘಟಕದಲ್ಲಿ ಬಣ ಬಡಿದಾಟ ಜೋರಾಗಿದೆ. ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಸಮ್ಮುಖದಲ್ಲೇ ಕಾರ್ಯಕರ್ತರು ಕಿತ್ತಾಡಿಕೊಂಡಿದ್ದಾರೆ. ಗುಬ್ಬಿ ತಾಲ್ಲೂಕಿನ ಚೇಳೂರಿನಲ್ಲಿ ಬೂತ್ ಅಭಿಯಾನದ ವೇಳೆ ಗ್ಯಾಸ್ ಬಾಬು, ದಿಲೀಪ್ ಕುಮಾರ್ ಬೆಂಬಲಿಗರ ನಡುವೆ ವಾಗ್ವಾದ ನಡೆದಿದೆ. ಗ್ಯಾಸ್ ಬಾಬು ಭಾಷಣ ಮಾಡುವಾಗ ದಿಲೀಪ್ ಹೆಸರು ಹೇಳದಿದ್ದಕ್ಕೆ ಗಲಾಟೆಯಾಗಿದೆ.

ಇನ್ನು ದಿಲೀಪ್ ಕುಮಾರ್ ಕಳೆದ ಚುನಾವಣೆಯಲ್ಲಿ ಸೋತಿದ್ದರು. ಇಬ್ಬರ ಜಗಳದ ವೇಳೆ ಮಧ್ಯಪ್ರವೇಶಿಸಿ ವಿಜಯೇಂದ್ರ ಪರಿಸ್ಥಿತಿ ತಿಳಿಗೊಳಿಸಿದರು. ವೇದಿಕೆಯಲ್ಲಿ ಗ್ಯಾಸ್ ಬಾಬು ಭಾಷಣ ಮಾಡುವಾಗ ದಿಲೀಪ್ ಕುಮಾರ್ ಹೆಸರನ್ನ ಹೇಳಲಿಲ್ಲ ಅನ್ನೋ ಕಾರಣಕ್ಕೆ ಗಲಾಟೆ ಶುರುವಾಗಿದೆ. ದಿಲೀಪ್ ಕುಮಾರ್ ಹೆಸರು ಹೇಳು ಎಂದು ಬೆಂಬಲಿಗರು ಗ್ಯಾಸ್ ಬಾಬುಗೆ ತಾಕೀತು ಮಾಡಿ ಭಾಷಣಕ್ಕೆ ಅಡ್ಡಿಪಡಿಸಿದ್ದಾರೆ.



ಈ ವೇಳೆ ವೇದಿಕೆಯಿಂದ ಕೆಳಗಿಳಿದು ಬಂದ ಗ್ಯಾಸ್ ಬಾಬು, ನೇರವಾಗಿ ದಿಲೀಪ್ ಬೆಂಬಲಿಗರ ನಡುವೆ ವಾಗ್ವಾದಕ್ಕಿಳಿದಿದ್ದಾರೆ. ಕಿತ್ತಾಟ ನೋಡಿ ವೇದಿಕೆಯಲ್ಲಿದ್ದ ಬಿ.ವೈ ವಿಜಯೇಂದ್ರ ಅವರೇ ಮಧ್ಯಪ್ರವೇಶಿಸಿ ವಾತಾವರಣ ತಿಳಿಗೊಳಿಸಬೇಕಾಯ್ತು. ಕಾರ್ಯಕರ್ತರ ಕಿತ್ತಾಟಕ್ಕೆ ಕೆರಳಿ ಇನ್ನು ಮುಂದೆ ನಾನೇ ಗುಬ್ಬಿಯಲ್ಲಿ ಸ್ಪರ್ಧೆ ಮಾಡುತ್ತೇನೆ ಎಂದು ಕ್ಲಾಸ್ ತೆಗೆದುಕೊಂಡಿದ್ದಾರೆ.

# ಉದ್ಯೋಗಿಗಳಾಗದೇ ಉದ್ಯಮಿಗಳಾಗಿ, ನಿಮ್ಮ ಊರಿನಲ್ಲಿ ನೀವೇ ಉದ್ಯಮ ಆರಂಭಿಸಿ: ಸಿಎಂ ಡಿ.ಕೆ.ಶಿವಕುಮಾರ್

## ಕೊಡಗು ಜಿಲ್ಲೆ ಕರ್ನಾಟಕದ ಕಾಶ್ಮೀರ ಇಡೀ ವಿಶ್ವ ಈ ಭಾಗಕ್ಕೆ ಆಕರ್ಷಿತವಾಗಿದೆ. ನಿಮ್ಮ ಪರಂಪರೆ ಉಳಿಸಿಕೊಳ್ಳಿ. ಇದು ಮನುಷ್ಯತ್ವದ ದೊಡ್ಡ ಗುಣ

• ಉದಯವಾಹಿನಿ, ಬೆಂಗಳೂರು

ಕರಾವಳಿ ಹಾಗೂ ಮಲೆನಾಡಿನ ಜನರು ಉದ್ಯೋಗಕ್ಕಾಗಿ ಬೇರೆ ಕಡೆ ಹೋಗುವುದಕ್ಕಿಂತ, ನಿಮ್ಮಲ್ಲಿರುವ ಪ್ರಾಕೃತಿಕ ಸಂಪತ್ತನ್ನು ಬಳಸಿಕೊಂಡು ನಿಮ್ಮ ಊರುಗಳಲ್ಲೇ ಉದ್ಯಮಗಳನ್ನು ಆರಂಭಿಸಿ. ನಿಮಗೆ ಶಕ್ತಿ ತುಂಬುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಕರಾವಳಿ ಹಾಗೂ ಮಲೆನಾಡು ಪ್ರವಾಸೋದ್ಯಮ ನೀತಿ ರೂಪಿಸಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಕರೆ ನೀಡಿದರು. ಬೆಂಗಳೂರಿನ ಉಳ್ಳಾಲದಲ್ಲಿರುವ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ಭಾನುವಾರ ನಡೆದ ಕೈಲ್ ಮುಹೂರ್ತ ಜಂಬರ-2026 ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ನೀವೆಲ್ಲರೂ ಕೊಡಗಿನಿಂದ ಬಂದು ಬೆಂಗಳೂರಿನಲ್ಲಿ ವಾಸಿಸುತ್ತಿದ್ದೀರಿ. ನೀವು ನಿಮ್ಮ ಮೂಲ ಮರೆತರೆ ಯಶಸ್ಸು ಸಿಗುವುದಿಲ್ಲ. ಮರಕ್ಕೆ ಬೇರು ಎಷ್ಟು ಮುಖ್ಯವೋ, ಮನುಷ್ಯನಿಗೆ ನಂಬಿಕೆ ಮುಖ್ಯ. ನಿಮ್ಮ ಸಂಸ್ಕೃತಿ, ಊರು, ಪರಂಪರೆ, ಸಮಾಜ ಎಲ್ಲವನ್ನು ಒಗ್ಗೂಡಿಸಿ ಇಲ್ಲಿ ಇಂತಹ ಭವ್ಯ ಕಟ್ಟ ನಿರ್ಮಿಸಿ, ನೀವೆಲ್ಲರೂ ಸೇರುತ್ತಿರುವುದು ಬಹಳ ಸಂತೋಷ ತಂದಿದೆ. ಇದಕ್ಕೆ ಶ್ರಮಿಸಿ, ಪ್ರೋತ್ಸಾಹ ನೀಡುತ್ತಿರುವವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

**ಕೊಡಗು ಶೌರ್ಯ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರದಲ್ಲಿ ಇತಿಹಾಸ ಹೊಂದಿದೆ:** ಕೊಡಗು ಶೌರ್ಯ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರದಲ್ಲಿ ಇತಿಹಾಸ ಹೊಂದಿದೆ. ಪ್ರತಿ ಮನೆಯಲ್ಲಿ ವೀರರನ್ನು ತಯಾರು ಮಾಡಿರುವ ಇತಿಹಾಸವನ್ನು ಮರೆಯಲು ಸಾಧ್ಯವಿಲ್ಲ. ನಮ್ಮೆಲ್ಲರ ತಾಯಿ ಕಾವೇರಿ ಇಲ್ಲೇ ಹುಟ್ಟಿದ್ದು, ಪಾಂಡಿಚೇರಿಯವರೆಗೂ ಈ ತಾಯಿ ಮೇಲೆ ಅವಲಂಬಿತವಾಗಿದ್ದೇವೆ. ಈ ಬಾರಿ ಭೀಕರ ಬರಗಾಲವಾಗಿದೆ. ಮಲೆನಾಡಿನಲ್ಲೇ ಈ ವರ್ಷ ಮಳೆ ಇಲ್ಲವಾಗಿದೆ. ಕೆರೆ, ಕೆಆರ್‌ಎಸ್ ಅಣೆಕಟ್ಟು ತುಂಬುತ್ತದೆ ಎಂದು ಕಾತುರದಿಂದ ಕಾಯುತ್ತಿದ್ದೇನೆ ಎಂದು ತಿಳಿಸಿದರು. ನಾನು ಪ್ರತಿ ವರ್ಷ ಕಾವೇರಿ ಆರತಿ ನಡೆಸಲು ತೀರ್ಮಾನಿಸಿದ್ದು, ದಸರಾ ಸಂದರ್ಭದಲ್ಲಿ ಈ ಬಾರಿಯೂ ಆಚರಿಸಲು ನಿರ್ದೇಶನ ನೀಡಲಾಗಿದೆ. ಕೊಡಗು ಜಿಲ್ಲೆ ಕರ್ನಾಟಕದ ಕಾಶ್ಮೀರ. ಇಡೀ ವಿಶ್ವ ಈ ಭಾಗಕ್ಕೆ ಆಕರ್ಷಿತವಾಗಿದೆ. ನಿಮ್ಮ ಪರಂಪರೆ ಉಳಿಸಿಕೊಳ್ಳಿ. ಇದು ಮನುಷ್ಯತ್ವದ ದೊಡ್ಡ ಗುಣ. ನನ್ನದೇ ಆದ ಅನುಭವದಲ್ಲಿ ಹಳ್ಳಿಯಿಂದ ನಗರಕ್ಕೆ ವಲಸೆ ಬರುವವರು ಶಿಕ್ಷಣ, ವಿದ್ಯಾಭ್ಯಾಸ ಹಾಗೂ ಬದುಕಿಗೆ. ಹಳ್ಳಿಗಳಲ್ಲೇ ಶಿಕ್ಷಣ ಹಾಗೂ ಉದ್ಯೋಗ ಸಿಕ್ಕಿದ್ದರೆ ನೀವು ಇಲ್ಲಿಗೆ ಬರುತ್ತಿರಲಿಲ್ಲ. ನೀವು ಸಂಘಟಿತರಾಗಿ ಹಳ್ಳಿ ಜನರಿಗೆ ಒಳ್ಳೆಯದಾಗಬೇಕು ಎಂದು ಪ್ರಯತ್ನಿಸುತ್ತಿದ್ದು, ನನಗೆ ಅನೇಕ ಬೇಡಿಕೆ ಇಟ್ಟಿದ್ದೀರಿ ಎಂದರು. ನಿಮ್ಮ ಊರುಗಳಲ್ಲೇ



**ಉದ್ಯಮ ಕಟ್ಟಿಕೊಳ್ಳಿ:** ನಾವು ಇತ್ತೀಚೆಗೆ ಮಂಗಳೂರಿನಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಸಿದೆ. ಅಲ್ಲಿ ಮಲೆನಾಡು ಹಾಗೂ ಕರಾವಳಿ ಭಾಗದ ಪ್ರವಾಸೋದ್ಯಮಕ್ಕೆ ಪ್ರತ್ಯೇಕ ನೀತಿ ರೂಪಿಸಲಾಗಿದೆ. ಈ ಭಾಗದ ಜನರ ಪ್ರತಿಭೆ ಗುರುತಿಸುವಂತಾಗಬೇಕು. ಈ ಜಿಲ್ಲೆಯ ಜನ ಕ್ರೀಡೆ, ರಕ್ಷಣಾ ಕ್ಷೇತ್ರದಲ್ಲಿ ಹೆಜ್ಜೆಗುರುತು ಮೂಡಿಸಿದ್ದಾರೆ. ಕರಾವಳಿ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳು, ಬ್ಯಾಂಕುಗಳು ನಿರ್ಮಾಣವಾಗಿದೆ. ಈಗ ಅವುಗಳು ನಶಿಸಿವೆ. ಇವುಗಳನ್ನು ಕಾಪಾಡುವುದು ನಮ್ಮ ಕರ್ತವ್ಯ. 327 ಕಿ.ಮೀ ಉದ್ದದ ಕರಾವಳಿ ಭಾಗವನ್ನು ಗೋವಾ ಹಾಗೂ ಕೇರಳದಂತೆ ಪ್ರವಾಸೋದ್ಯಮಕ್ಕೆ ಬಳಸಿದಂತೆ ಬಳಸಲು ತೀರ್ಮಾನಿಸಲಾಗಿದೆ ಎಂದರು.

ಮಂಗಳೂರು, ಉಡುಪಿ, ಕಾರವಾರ ನೋಡಿದರೆ ಒಂದು ಪಂಚತಾರಾ ಹೋಟೆಲ್ ಇಲ್ಲ. ಇದು ಯಾಕೆ ಎಂದು ರಾಜಕಾರಣದ ಬಗ್ಗೆ ಮಾತನಾಡಲು ಬಯಸುವುದಿಲ್ಲ. ನಮ್ಮ ಅವಧಿಯಲ್ಲಿ ಏನಾದರೂ ಕೊಡುಗೆ ಬಿಟ್ಟುಹೋಗಬೇಕು ಎಂಬುದು ನಮ್ಮ ಬಯಕೆ. ನಾವು ರಾಜಕಾರಣದಲ್ಲಿ ಶಾಶ್ವತವಲ್ಲ. ದೇವರು ವರ, ಶಾಪ ನೀಡುವುದಿಲ್ಲ. ಕೇವಲ ಅವಕಾಶ ನೀಡುತ್ತಾನೆ ಎಂದರು.

## ನಿಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಿ

ನಾವು ಹೆಚ್ಚು ಬಲಿಷ್ಠವಾಗಿದ್ದರೆ, ಹೆಚ್ಚು ಶತ್ರುಗಳು, ಕಡಿಮೆ ಬಲಿಷ್ಠರಾಗಿದ್ದರೆ, ಕಡಿಮೆ ಶತ್ರುಗಳು, ಬಲಿಷ್ಟರಲ್ಲದೇ ಇದ್ದರೆ ಶತ್ರುಗಳೇ ಇರುವುದಿಲ್ಲ. ಯಾರು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಾರೆ ಅವರ ಬಗ್ಗೆ ಅಸೂಯೆ ಇರುತ್ತದೆ. ಹೀಗಾಗಿ ನೀವು ಈ ಇಬ್ಬರು ಶಾಸಕರನ್ನು ಉಳಿಸಿಕೊಳ್ಳಬೇಕು. ಅವರನ್ನು ಉಳಿಸಿಕೊಂಡರೆ ನನ್ನನ್ನು ಉಳಿಸಿಕೊಂಡಂತೆ. ನನಗೆ ಶಕ್ತಿ ನೀಡಿದಂತೆ. ನೀವು ನಿಮ್ಮ ಮತಗಳನ್ನು ಕಾಪಾಡಿಕೊಳ್ಳಿ. ನೀವೇ ನೋಡುತ್ತಿದ್ದೀರಿ. ನಿಮ್ಮ ಮತದಾನದ ಹಕ್ಕು ರಕ್ಷಿಸಲು ನಾವು ಹಗಲು ರಾತ್ರಿ ಹೋರಾಟ ಮಾಡುತ್ತಿದ್ದೇವೆ. ಈಗ ಚುನಾವಣಾ ಆಯೋಗದವರು ಅನಾವಶ್ಯಕವಾಗಿ ಯಾರ ಹೆಸರನ್ನು ಮತಪಟ್ಟಿಯಿಂದ ತೆಗೆಯಬಾರದು ಎಂದು ನಿರ್ದೇಶನ ನೀಡಿದೆ. ಒಂದಕ್ಕಿಂತ ಹೆಚ್ಚು ಮತ ಹೊಂದಿರುವವರು, ಮೃತಪಟ್ಟಿರುವವರ ಹೆಸರನ್ನು ಪರಿಷ್ಕರಣೆ ಮಾಡಲಿ. ನ್ಯಾಯಬದ್ಧವಾದ ಅರ್ಹ ಮತದಾರರ ಹಕ್ಕನ್ನು ಉಳಿಸಬೇಕು. ಮತದಾನದ ಹಕ್ಕು ಎಂದರೆ ಬದುಕಿನ ಹಕ್ಕು.

**ಈ ದಿನದ ದರ** ಪೆಟ್ರೋಲ್: 111.11₹/L | ಡೀಸೆಲ್ : 99.01₹/L | ಬಂಗಾರ: ₹ 14,918/Gram 24ct ₹ 13,675 /Gram 22ct | ಬೆಳ್ಳಿ: ₹235.00/

# ಭಜನ-ಪ್ರವಚನ-ಸಂಕೀರ್ತನ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಅಕ್ಟೋಬರ್ 6 ರಿಂದ 9ರ ವರೆಗೆ ಪ್ರಕಾಶನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಧಾರ್ಮಿಕ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

**ಸಮಯ** : ಪ್ರತಿದಿನ ಸಂಜೆ 6-00 ರಿಂದ 8-00.ದಿನಾಂಕ 6-10-2026, **ಮಂಗಳವಾರ** : ರಾಜಾಜಿನಗರದ ರುಕ್ಮಿಣಿ ಮಹಿಳಾ ಸಂಘದ ಸದಸ್ಯರಿಂದ ಭಜನೆ, ಆನಂದಾಚಾರ್ಯರಿಂದ ಗರುಡ ಪುರಾಣ ಪ್ರವಚನ. ದಿನಾಂಕ 7-10-2026, ಬುಧವಾರ : ಬಸವೇಶ್ವರನಗರದ ಶ್ರೀ ಹಯವದನ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಶ್ರೀ ಆನಂದಾಚಾರ್ಯರಿಂದ ಗರುಡ ಪುರಾಣ ಪ್ರವಚನ. ದಿನಾಂಕ 8-10-2026, ಗುರುವಾರ : ಹರಿನಾಮ ಸಂಕೀರ್ತನೆ : ಗಾಯನ :

**ಶ್ರೀ ರಾಮ್ ರಕ್ಷಿತ್, ಪಿಟೀಲು** : ವಿದ್ವಾನ್ ಎಂ.ಎಸ್. ಗೋವಿಂದಸ್ವಾಮಿ, ಮೃದಂಗ : ವಿದ್ವಾನ್ ಶ್ರೀನಿವಾಸ್ ಅನಂತರಾಮಯ್ಯ. ದಿನಾಂಕ 9-10-2026, **ಶುಕ್ರವಾರ** : ಬಸವೇಶ್ವರನಗರದ ಅಲಕನಂದ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಶ್ರೀ ಆನಂದಾಚಾರ್ಯರಿಂದ ಗರುಡ ಪುರಾಣ ಪ್ರವಚನ.

**ಕಾರ್ಯಕ್ರಮ ನಡೆಯುವ ಸ್ಥಳ** : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, ಪ್ರಕಾಶನಗರ, ಬೆಂಗಳೂರು-560021

## ಶಿಶುಪಾಲನಿಗೆ 101 ತಪ್ಪುಗಳು ಮಾಡಲು ಶ್ರೀಕೃಷ್ಣ ಅವಕಾಶ ಕೊಟ್ಟಂತೆ ರಾಜ್ಯದ ಜನರೂ ಡಿಕೆಶಿಗೆ ಕೊನೆಯ ಅವಕಾಶ ನೀಡಿದ್ದಾರೆ

• ಉದಯವಾಹಿನಿ, ಬೆಂಗಳೂರು

ಶಿಶುಪಾಲನಿಗೆ ನೂರೊಂದು ತಪ್ಪುಗಳನ್ನು ಮಾಡಲು ಶ್ರೀಕೃಷ್ಣ ಪರಮಾತ್ಮನು ಅವಕಾಶ ಕೊಟ್ಟಂತೆಯೇ ರಾಜ್ಯದ ಜನರೂ ಡಿಕೆಶಿ ತಪ್ಪುಗಳನ್ನು ಗಮನಿಸುತ್ತಲೇ ಬಂದು ಕೊನೆಯ ಅವಕಾಶ ನೀಡಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಟೀಕಿಸಿದರು. ನೈಸ್ ರಸ್ತೆಗಾಗಿ ಭೂಮಿ ಕಳೆದುಕೊಂಡ ಸಂತ್ರಸ್ತ ರೈತರನ್ನು ಭೇಟಿಯಾದ ಕೇಂದ್ರ ಸಚಿವರು ಮಾಧ್ಯಮದವರೊಂದಿಗೆ ಮಾತನಾಡಿ, ಮಿತಿ ಮೀರಿದ ದುರಾಸೆ, ಅಂಕೆ ಇಲ್ಲದ ಭೂದಾಹ, ದೇವರು ಕೊಟ್ಟಿದ್ದು ಸಾಲದು. ಇನ್ನೂ ಬೇಕು ಬೇಕು ಎನ್ನುವ ಹಪಾಹಪಿ. ಮನುಷ್ಯನನ್ನು ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡಲು ಪ್ರೇರೇಪಿಸುತ್ತದೆ. ನಮ್ಮ ರಾಜ್ಯದ ಮುಖ್ಯಮಂತ್ರಿ ಕಥೆಯೂ ಹಾಗೆ ಆಗಿದೆ. ಶಿಶುಪಾಲನಿಗೆ ನೂರೊಂದು ತಪ್ಪುಗಳನ್ನು ಮಾಡಲು ಶ್ರೀಕೃಷ್ಣ ಪರಮಾತ್ಮನು ಅವಕಾಶ ಕೊಟ್ಟಂತೆಯೇ ರಾಜ್ಯದ ಜನರೂ ಈ ವ್ಯಕ್ತಿಯ ತಪ್ಪುಗಳನ್ನು ಗಮನಿಸುತ್ತಲೇ ಬಂದು ಕೊನೆಯ ಅವಕಾಶ ನೀಡಿದ್ದಾರೆ. ಅವರ ಭೂದಾಹಕ್ಕೆ ಈಗ ಇಡೀ ನೈಸ್ ರಸ್ತೆ ಯೋಜನೆಯೇ ಸ್ವಾಹ ಆಗುವ ಅಪಾಯ ಎದುರಾಗಿದೆ. ಹೈದರಾಬಾದ್ ಉದ್ಯಮಿ ಜತೆ ಶಾಮೀಲಾಗಿ ಇಡೀ ಪ್ರಾಜೆಕ್ಟ್ ಅನ್ನು ಖರೀದಿ ಮಾಡಲು ಹೊರಟಿದ್ದಾರೆ.

ಮುಂದಿನ ವರ್ಷಕ್ಕೆ ನೈಸ್ ಒಪ್ಪಂದ ಮುಗಿಯುತ್ತದೆ. ನಂತರ ನೈಸ್ ರಸ್ತೆ ಸಂಪೂರ್ಣವಾಗಿ ಆಸ್ತಿ. ಅದಕ್ಕೂ ಮೊದಲೇ ಅದನ್ನು ನುಂಗಿಬಿಡುವ ದುಸ್ಸಾಹಸಕ್ಕೆ ಈ ಮುಖ್ಯಮಂತ್ರಿ ಕೈ ಹಾಕಿದ್ದಾರೆ ಎಂದು ಕೇಂದ್ರ ಸಚಿವರು ಆರೋಪಿಸಿದ್ದಾರೆ.ಬೆಂಗಳೂರಿನ ಹೊಸಕೆರೆಹಳ್ಳಿ ಟೋಲ್ ಬಳಿ ಇರುವ ಶೋಭಾ ಅಪಾರ್ಟ್ಮೆಂಟ್ ಯಾರದು?. ಅದಕ್ಕೆ ಹಾಲಿ ಮುಖ್ಯಮಂತ್ರಿ ಸಿಎಂ ಅವರ ಕುಟುಂಬ, ಮತ್ತು ಅವರ ಸಹೋದರ ಡಿ.ಕೆ. ಸುರೇಶ್ ಅವರಿಗೂ ಏನು ಸಂಬಂಧ ಅಮಾಸೆಗೌಡ, ಭಾಗ್ಯಲಕ್ಷ್ಮಿ, ಕೆಂಪೇಗೌಡ ಅನ್ನುವವರು ಯಾರು? ಈ ಮುಖ್ಯಮಂತ್ರಿ ತಮ್ಮ ಮತ್ತು ತಾಯಿ ಹೆಸರಿಗೆ ಆ ಭೂಮಿಯನ್ನು ಖರಿಸಿದ್ದು ಹೇಗೆ? ಒಮ್ಮೆ ಸರ್ಕಾರಿ ಯೋಜನೆಗೆ ನೋಟಿಫೈ ಆಗಿರುವ ಭೂಮಿಯನ್ನು ಇವರು ಖರೀದಿಸಲು ಹೇಗೆ ಸಾಧ್ಯವಾಯಿತು. (ನಿರಪೇಕ್ಷಣಾ ಪತ್ರ) ಹೇಗೆ ಸಿಕ್ಕಿತು.



ಅಲ್ಲಿ ಕಟ್ಟಲಾಗಿರುವ ಗಗನಚುಂಬಿ ಶೋಭಾ ಅಪಾರ್ಟ್ಮೆಂಟ್ ಮೂಲಕ ಅವರು 2000 ಕೋಟಿ ಮೌಲ್ಯದ ಆಸ್ತಿಯನ್ನು ಮಾಡಿದ್ದಾರೆ ಎಂದು ದೂರಿದರು.

## ಗಾಂಧಿ ಕೊಂದ ಗೂಡ್ಸೆ ಪೂಜಿಸುವ ಗೂಂಡಾಗಳಿದ್ದಾರೆ; ಪ್ರಕಾಶ್ ರಾಜ್

• ಉದಯವಾಹಿನಿ, ಬೆಂಗಳೂರು

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆಗಳಿಗೆ ನಟ ಪ್ರಕಾಶ್ ರಾಜ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡಿರುವ ಅವರು, ಜ್ಞಾನೇಶ್ ಕುಮಾರ್ ವಿರುದ್ಧದ ಪ್ರತಿಭಟನೆಗಳಿಗೆ ಜನರು ಬೆಂಬಲ ನೀಡುವಂತೆ ಕರೆ ನೀಡಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಹೋರಾಟಕ್ಕಿಳಿದಿರುವ ಕಾಕ್ರೋಚ್ ಜನತಾ ಪಾರ್ಟಿ'ಗೆ (ಸಿಜೆಪಿ) ಬಹುಭಾಷಾ ನಟ ಪ್ರಕಾಶ್ ರಾಜ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಹಕ್ಕುಗಳಿಗಾಗಿ ನಡೆಯುತ್ತಿರುವ ಈ ಶಾಂತಿಯುತ ಪ್ರತಿಭಟನೆಯಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದ್ದಾರೆ. ಗಾಂಧಿ ಜಯಂತಿಯ ಶುಭಾಶಯಗಳು. ಇದು ನಮ್ಮ ಬಾಪು ಅವರ ದಿನ. ಆದರೆ ನಾವು ಈ ದಿನವನ್ನು ಆಚರಿಸುವಾಗ, ನಮ್ಮ ಮಹಾತ್ಮನನ್ನು ಕೊಂದ ನಾಥೂರಾಮ್ ಗೊಡ್ಸೆಯನ್ನು ಪೂಜಿಸುವ ಕೆಲವು ಗೂಂಡಾಗಳು ಇಲ್ಲಿದ್ದಾರೆ ಎಂಬುದನ್ನು ಮರೆಯಬಾರದು ಎಂದು ಪ್ರಕಾಶ್ ರಾಜ್ ಹೇಳಿದ್ದಾರೆ.

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಮೂಲಕ ನಮ್ಮ ಪೌರತ್ವ ಮತ್ತು ಪ್ರಜಾಪ್ರಭುತ್ವವನ್ನು ಇಲ್ಲದಾಗಿಸಲು ಈ ಗೂಂಡಾಗಳು ಯತ್ನಿಸುತ್ತಿದ್ದಾರೆ. ಆದರೆ ಈ ದೇಶದ ಯುವಜನತೆ, ನಾಗರಿಕ ಸಮಾಜ ಮತ್ತು ಈ ಕಾಕ್ರೋಚ್‌ಗಳು ಇದಕ್ಕೆ ಎಂದಿಗೂ ಅವಕಾಶ ನೀಡುವುದಿಲ್ಲ ಎಂದಿದ್ದಾರೆ.

## ದೊಡ್ಡಗುಬ್ಬಿ ಕೆರೆಯಲ್ಲಿ ಮೀನುಗಳ ಮಾರಣಹೋಮ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದೊಡ್ಡಗುಬ್ಬಿ ಕೆರೆಯಲ್ಲಿ ಮೀನುಗಳ ಮಾರಣಹೋಮವಾಗಿದೆ. 125 ಎಕರೆ ವಿಸ್ತೀರ್ಣದ ಕೆರೆಯಾದ್ಯಂತ ಸಾವಿರಾರು ಮೀನುಗಳು ಸತ್ತು ಬಿದ್ದಿರುವುದು ಕಂಡುಬಂದಿದೆ. ಮೀನುಗಳ ಸಾವಿಗೆ ಈವರೆಗೆ ಯಾವುದೇ ಅಧಿಕೃತ ಕಾರಣ ನೀಡಲಾಗಿಲ್ಲ. ಒಳಚರಂಡಿ ನೀರನ್ನು ಕೆರೆಗೆ ಹರಿಸಲಾಗಿದೆ ಎಂಬ ಪರಿಸರ ಕಾರ್ಯಕರ್ತರ ಅನುಮಾನವೂ ಇನ್ನೂ ದೃಢಪಟ್ಟಿಲ್ಲ. ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಪ್ರತಿಕ್ರಿಯೆ ನೀಡಿ, ಅಧಿಕಾರಿಗಳಿಗೆ ಪರಿಶೀಲಿಸಿ, ಅಗತ್ಯ ಸರಿಪಡಿಸುವ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಆನೇಕಲ್ ಶಾಸಕ ಬಿ. ಶಿವಣ್ಣ ಅವರು ಮಾತನಾಡಿ, ಸೋಮವಾರ ಕೆರೆಗೆ ಭೇಟಿ ನೀಡಿ ಪರಿಶೀಲಿಸುವುದಾಗಿ ತಿಳಿಸಿದರು. ಕೆಎಸ್‌ಪಿಸಿಬಿ ಮಾಜಿ ಅಧ್ಯಕ್ಷ ಡಾ. ಶರತ್ ಚಂದ್ರ ಅವರು ಮಾತನಾಡಿ, ''ಕೆರೆಗಳಲ್ಲಿ ಹಠಾತ್ ಮೀನುಗಳ ಸಾವಿಗೆ ಸಾಮಾನ್ಯವಾಗಿ ಕಂಡುಬರುವ ಪ್ರಮುಖ ಕಾರಣವೆಂದರೆ ನೀರಿನಲ್ಲಿ ಕರಗಿರುವ ಆಮ್ಲಜನಕದ ಪ್ರಮಾಣ ಕುಸಿಯುವುದು. ವಿಶೇಷವಾಗಿ ಸಂಸ್ಕರಿಸದ ಅಥವಾ ಸಮರ್ಪಕವಾಗಿ ಸಂಸ್ಕರಿಸದ ಒಳಚರಂಡಿ ನೀರು ಕೆರೆಗೆ ಸೇರಿದಾಗ ಈ ಸಮಸ್ಯೆ ಉಂಟಾಗಬಹುದು ಎಂದು ಹೇಳಿದರು. ಒಳಚರಂಡಿ ನೀರಿನಲ್ಲಿರುವ ಸಾವಯವ ವಸ್ತುಗಳು ಮತ್ತು ಪಾಚಿಗಳು ಕೊಳೆಯುವಾಗ ಸೂಕ್ಷ್ಮಜೀವಿಗಳು ಹೆಚ್ಚಿನ ಪ್ರಮಾಣದಲ್ಲಿ ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ಬಳಸಿಕೊಳ್ಳುತ್ತವೆ. ಇದರಿಂದ ನೀರಿನಲ್ಲಿ ಆಮ್ಲಜನಕದ ಕೊರತೆ ಉಂಟಾಗಿ, ಕೆಲವೊಮ್ಮೆ ಆಮ್ಲಜನಕವಿಲ್ಲದ ಸ್ಥಿತಿಯೂ ನಿರ್ಮಾಣವಾಗಬಹುದು. ಇಂತಹ ಪರಿಸ್ಥಿತಿಯಲ್ಲಿ ಮೀನುಗಳು ಉಸಿರುಗಟ್ಟಿ ಸಾಯುವ ಸಾಧ್ಯತೆಯಿದೆ ಎಂದು ವಿವರಿಸಿದರು.

## ಕನ್ನಡಿಗರ ಬೇಡಿಕೆಗಳಿಗೆ ಒತ್ತಾಯಿಸಿ ಅ.8 ಪ್ರತಿಭಟನೆ

• ಉದಯವಾಹಿನಿ, ಆನೇಕಲ್

ಮೇಕೆದಾಟು ಮತ್ತು ಕಳಸಾ-ಬಂಡೂರಿ ಯೋಜನೆಗಳನ್ನು ಕೂಡಲೇ ಆರಂಭಿಸಲು, ಸರ್ಕಾರಿ ಶಾಲೆಗಳನ್ನು ಉಳಿಸಲು, ಮತ್ತು ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಶೇ. 75% ಉದ್ಯೋಗ ಮೀಸಲಾತಿಯನ್ನು ಒತ್ತಾಯಿಸಲು, ಅ. 8 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕನ್ನಡ ಜಾಗೃತಿ ವೇದಿಕೆ ವತಿಯಿಂದ ರಾಜ್ಯಮಟ್ಟದ ಬೃಹತ್ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ಕನ್ನಡ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಮಂಜುನಾಥ್ ದೇವು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈ ವರ್ಷದ ಮಳೆ ಕಡಿಮೆ ಆಗಿರುವುದರಿಂದ ರೈತರಿಗೆ ಎಕರೆಗೆ 25,000 ರೂಪಾಯಿಗಳ ಬೆಳೆ ಪರಿಹಾರ ಹಣವನ್ನು ನೀಡಬೇಕಾಗಿದೆ. ಬೆಳಗಾವಿ ಮಹಾನಗರ ಪಾಲಿಕೆಯನ್ನು ಕರ್ನಾಟಕ ರಾಜ್ಯದ ಅವಿಭಾಜ್ಯ ಭಾಗವೆಂದು ಘೋಷಿಸಬೇಕು. ಎಂ.ಇ.ಎಸ್ ಸಂಘಟನೆಯನ್ನು ನಿಷೇಧಿಸಬೇಕು. ಕನ್ನಡವನ್ನು ಕಲಿಸದ ಮತ್ತು ನಾಡಗೀತೆ ಹಾಡಿಸದ ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಬೇಕು. ಕನ್ನಡ ನಾಮಫಲಕಗಳನ್ನು ಕಡ್ಡಾಯಗೊಳಿಸಬೇಕು.

## ವಿಪಕ್ಷ ನಾಯಕರ ಧರಣಿ ಹಾಸ್ಯಾಸ್ಪದ

• ಉದಯವಾಹಿನಿ, ಬೆಂಗಳೂರು

ದೇಶದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ನೈಜಮತದಾರರ ಹೆಸರುಗಳನ್ನು ಕೈಬಿಡುತ್ತಿರುವ ಹಿನ್ನೆಲೆಯಲ್ಲಿ ಮತದಾರರಿಗೆ ತನ್ನ ಮತದಾನದ ಹಕ್ಕನ್ನ ಪಡೆಯಲು ಹಾಗೂ ಒದಗಿಸಿಕೊಡಲು ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಹೋರಾಟದ ಬಗ್ಗೆ ಬಿಜೆಪಿಯ ಅಂಧ ಭಕ್ತರು ಹಾಗೂ ಕಾನೂನಿನ ಹಾಗೂ ಪ್ರಜಾಪ್ರಭುತ್ವದ ಅರಿವಿಲ್ಲದ ವಿರೋಧ ಪಕ್ಷದ ನಾಯಕರು ಪೊಲೀಸ್ ಆಯುಕ್ತರ ಕಚೇರಿ ಮುಂದೆ ಧರಣಿ ನಡೆಸಿರುವುದು ಹಾಸ್ಯಸ್ಪದ ಹಾಗೂ ಪ್ರಜಾಪ್ರಭುತ್ವದ ವಿರೋಧಿ ಧೋರಣೆಯಾಗಿದೆ ಎಂದು ಕೆಪಿಸಿಸಿ ಪ್ರದಾನಕಾರ್ಯದರ್ಶಿ ಎಸ್ ಮನೋಹರ್ ತಿಳಿಸಿದ್ದಾರೆ.

ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಉಳಿಯಬೇಕಾದರೆ ಹಾಗೂ ಗಟ್ಟಿಯಾಗಬೇಕಾದರೆ ಒಂದು ಪ್ರಾಮಾಣಿಕ ನೈಜ ಸರ್ಕಾರ ಸ್ಥಾಪನೆಗೆ ಮತದಾರರೇ ಮೂಲ ಕಾರಣಕರ್ತರು, ದೇಶದಲ್ಲಿ ಮೋದಿಯ ಸರ್ಕಾರದಲ್ಲಿ ನಡೆಯುತ್ತಿರುವ ಪ್ರಜಾಪ್ರಭುತ್ವದ ಕಗ್ಗೊಲೆಯನ್ನು ಬಿಜೆಪಿ ಅಂಧ ಭಕ್ತರು ಕಣ್ಣಾರೆ ಕಂಡು ನಿದ್ರಿಸುತ್ತಿದ್ದಾರೆ ಅದನ್ನು ಪ್ರಶ್ನಿಸಲು ಹೋದರೆ ಹಾಗೂ ಹೋರಾಟ ನಡೆಸಿ ದೇಶದ ನಾಗರಿಕರಿಗೆ ಮತದಾನದ ಹಕ್ಕನ್ನ ನೀಡಬೇಕೆಂದು ಹೋರಾಟ ನಡೆಸಿದರೆ ಹೋರಾಟ ನಡೆಸಿದವರ ವಿರುದ್ಧವೇ ದೂರು ಸಲ್ಲಿಸುತ್ತಿರುವುದು ದೇಶದ ಇತಿಹಾಸದಲ್ಲಿ ಇದೆ ಮೊದಲು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಬೆಂಗಳೂರು ಜಾತ್ರೆಗೆ ಡೇಟ್ ಫಿಕ್ಸ್: 10 ದಿನಗಳ ಊರ ಹಬ್ಬಕ್ಕೆ ಉದ್ಯಾನ ನಗರಿ ಸಜ್ಜು

**ನಗರದ ಮೂಲಸೌಕರ್ಯಗಳನ್ನು ಸುಧಾರಿಸುವುದರ ಜೊತೆಗೆ, ಕರ್ನಾಟಕದ ಶ್ರೀಮಂತ ಕಲೆ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಸಂರಕ್ಷಿಸಿ ಉತ್ತೇಜಿಸುವುದುಆರಂಭಿಸಿವೆ**

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ಸ್ವಾತಂತ್ರ್ಯ ದಿನಾಚರಣೆ ವೇಳೆ ಫ್ರೀಡಂ ಹಬ್ಬದ ಮೂಲಕ ಸಿಲಿಕಾನ್ ಸಿಟಿ ಜನರಿಗೆ ಮನರಂಜನೆಯ ರಸದೌತಣಕ್ಕೆ ವೇದಿಕೆ ಮಾಡಿಕೊಟ್ಟಿತ್ತು. ಇದರ ಬೆನ್ನಲ್ಲೇ ಮತ್ತೊಂದು ಹಬ್ಬ, ಅಲ್ಲ ಈ ಭಾರಿ ಅದ್ದೂರಿ ಬೆಂಗಳೂರು ಜಾತ್ರೆಗೆ ರಾಜ್ಯ ಸರ್ಕಾರ ತಯಾರಿ ಮಾಡಿಕೊಂಡಿದೆ.ಮುಂಬರುವ ಡಿಸೆಂಬರ್‌ನಲ್ಲಿ ಊರ ಹಬ್ಬ, ಬೆಂಗಳೂರು ಜಾತ್ರೆ ಆಯೋಜಿಸುವುದಾಗಿ ಬೆಂಗಳೂರ ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಘೋಷಿಸಿದ್ದಾರೆ.

1 ಫ್ರೀಡಂ ಹಬ್ಬ ಈಗಾಗಲೇ ಜನರ ಮನಸು ಗೆದ್ದಿತ್ತು

2 ಡಿಸೆಂಬರ್ 4ರಿಂದ ಡಿಸೆಂಬರ್ 13ರವರೆಗೆ 'ಜಾತ್ರೆ

3 ಒಗ್ಗೂಡಿ ಆಚರಿಸುವ ಕರ್ನಾಟಕದ ಸಾಂಪ್ರದಾಯಿಕ

ಈ ಸಂಬಂಧ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೃಷ್ಣ ಬೈರೇಗೌಡ ಅವರು, ಫ್ರೀಡಂ ಹಬ್ಬ ಈಗಾಗಲೇ ಜನರ ಮನಸು ಗೆದ್ದಿತ್ತು.

ಬೆಂಗಳೂರು ಜನರಿಗಾಗಿ ಊರ ಹಬ್ಬ ಮಾಡಬೇಕು ಎಂದು ಮುಖ್ಯಮಂತ್ರಿಗಳು ಕೂಡ ಹೇಳಿದ್ದರು. ಬೆಂಗಳೂರು ಉತ್ಸವದ ಘೋಷಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 4ರಿಂದ ಡಿಸೆಂಬರ್ 13ರವರೆಗೆ 'ಬೆಂಗಳೂರು ಜಾತ್ರೆ? ಆಯೋಜನೆ ಮಾಡುತ್ತಿದ್ದೇವೆ ಎಂದರು.

ನಗರದ ಮೂಲಸೌಕರ್ಯಗಳನ್ನು ಸುಧಾರಿಸುವುದರ ಜೊತೆಗೆ, ಕರ್ನಾಟಕದ ಶ್ರೀಮಂತ ಕಲೆ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಸಂರಕ್ಷಿಸಿ ಉತ್ತೇಜಿಸುವುದು ಹಾಗೂ ಯಾಂತ್ರಿಕ ಮತ್ತು ವೇಗದ ಜೀವನಶೈಲಿಯ ನಗರದಲ್ಲಿ ವಾಸಿಸುವ ಜನರ ಜೀವನವನ್ನು ಶ್ರೀಮಂತಗೊಳಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.ನಗರದ ವಿವಿಧ ಬಡಾವಣೆಗಳು, ಸಮುದಾಯಗಳು, ಸಾಂಸ್ಕೃತಿಕ ಸಂಸ್ಥೆಗಳು, ಶಾಲೆ-ಕಾಲೇಜುಗಳು, ವಾಣಿಜ್ಯ ಸಂಸ್ಥೆಗಳು, ಕಲಾವಿದರು ಮತ್ತು ಸರ್ಕಾರಿ ಏಜೆನ್ಸಿಗಳು ನಗರದಾದ್ಯಂತ ತಮ್ಮದೇ ಆದ ಕಾರ್ಯಕ್ರಮಗಳನ್ನು ಆಯೋಜಿಸಲು ಒಂದು ಸಾಮಾನ್ಯ ವೇದಿಕೆಯನ್ನು ಕಲ್ಪಿಸುವ ಮೂಲಕ ಆ 'ಜಾತ್ರೆಯ ಭಾವನೆ'ಯನ್ನು ಬೆಂಗಳೂರಿಗೆ ತರುವುದು ಇದರ ಉದ್ದೇಶವಾಗಿದೆ. ಬೀದಿಗಳು, ಉದ್ಯಾನವನಗಳು, ಸಾರ್ವಜನಿಕ ಸ್ಥಳಗಳು, ಶಿಕ್ಷಣ ಸಂಸ್ಥೆಗಳು, ವಸ್ತುಸಂಗ್ರಹಾಲಯಗಳು, ಸಾಂಸ್ಕೃತಿಕ ಕೇಂದ್ರಗಳು ಮತ್ತು ಇತರ ಸ್ಥಳಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದರು.ಇನ್ನು 10 ದಿನಗಳ ಕಾಲ ನಡೆಯುವ ಈ ಬೆಂಗಳೂರು ಜಾತ್ರೆಯಲ್ಲಿ ವಿವಿಧ ಕಾರ್ಯಕ್ರಮಗಳು ಇರಲಿವೆ. ಬೆಂಗಳೂರು ಮೆಟ್ರೋ, ಪೊಲೀಸ್ ಇಲಾಖೆ, ಬೆಸ್ಕಾಂ ಸೇರಿದಂತೆ ಎಲ್ಲಾ ಅಂಗ ಸಂಸ್ಥೆಗಳು ಸೇರಿ ಈ ಬೆಂಗಳೂರು ಜಾತ್ರೆ ಮಾಡುತ್ತೇವೆ. ಎಲ್ಲಾ ಸಂಸ್ಥೆಗಳಿಗೂ ಪತ್ರ ಬರೆದಿದ್ದೇವೆ. ಐಟಿ ಹಬ್‌ಗಳಿದ್ದಾವೆ, ಖಾಸಗಿ ಶಿಕ್ಷಣ ಸಂಸ್ಥೆಗಳು, ಕೇಂದ್ರದಡಿ ಬರುವ ಇಲಾಖೆಗಳಿದ್ದಾವೆ, ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್ ಹೀಗಾಗಿ ಅವರಿಗೂ ಕಾರ್ಯಕ್ರಮ ಮಾಡುವಂತೆ ಆಹ್ವಾನ ನೀಡಲಿದ್ದೇವೆ. ಹೋಟೆಲ್, ರೆಸ್ಟೋರೆಂಟ್‌ಗಳಿಗೂ ಆಹ್ವಾನ ನೀಡಿದ್ದು, ಆಯೋಜಕರಾಗಿ ಭಾಗಿಯಾಗುವಂತೆ ಮನವಿ ಮಾಡಿದ್ದೇವೆ ಎಂದು ಮಾಹಿತಿ ನೀಡಿದರು.



ಉದಯವಾಹಿನಿ ಚಿತ್ರ

ಬೆಂಗಳೂರಿನ ಐದು ಮಹಾನಗರ ಪಾಲಿಕೆಗಳಲ್ಲೂ ಕಾರ್ಯಕ್ರಮಗಳು ನಡೆಯಲಿವೆ. ಸರ್ಕಾರಿ ಕಚೇರಿ, ಶಿಕ್ಷಣ ಸಂಸ್ಥೆ, ಉದ್ಯಾನ, ರಸ್ತೆಗಳಲ್ಲಿ ಕಾರ್ಯಕ್ರಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಜಾನಪದ ಕಲೆಗಳ ಪ್ರದರ್ಶನ, ನಮ್ಮ ರಸ್ತೆ, ನಮ್ಮ ಬಡಾವಣೆ, ನಮ್ಮ ಸಂಸ್ಥೆ, ನಮ್ಮ ಕಲೆ ಹೀಗೆ ಎಲ್ಲರ ಜಾತ್ರೆ. ಜಿಬಿಎ, ಬಿಡಿಎ, ಕನ್ನಡ-ಸಂಸ್ಕೃತಿ ಇಲಾಖೆ ಸೇರಿ ಹಣ ಹಾಕಿ ಮಾಡಲಾಗುತ್ತೆ. ಕನ್ನಡ-ಸಾಂಸ್ಕೃತಿಕ ಇಲಾಖೆಯಿಂದಲೇ 5 ಕೋಟಿ ಹಣ ಮೀಸಲಿದೆ. ಈ ರೀತಿ ಕಾರ್ಯಕ್ರಮದಿಂದ ಬೆಂಗಳೂರಿಗೆ ಹೆಚ್ಚು ಪ್ರವಾಸಿಗರು ಬರುತ್ತಾರೆ. ಇದು ಬೆಂಗಳೂರಿನ ಆರ್ಥಿಕ ಪ್ರಗತಿಗೂ ಸಹಕಾರವಾಗುತ್ತೆ. ಖಾಸಗಿ ಸಂಸ್ಥೆ ಬೆಂಗಳೂರು ಹಬ್ಬ ಆಯೋಜನೆ ಮಾಡುತ್ತಾ ಇತ್ತು. ಇದೀಗ ರಾಜ್ಯ ಸರ್ಕಾರವೇ ಕಾರ್ಯಕ್ರಮ ಮಾಡಲು ಮುಂದಾಗಿದೆ. 15 ರಿಂದ 20 ಕೋಟಿ ರೂ. ವೆಚ್ಚದಲ್ಲಿ 'ಬೆಂಗಳೂರು ಜಾತ್ರೆ' ಆಚರಣೆಗೆ ನಿರ್ಧರಿಸಲಾಗಿದೆ. ಫಾರಂ7 ಅರ್ಜಿಗಳ ವಿಚಾರವಾಗಿ ಈಗಾಗಲೇ ಹಲವು ಕಡೆ ಎಫ್ಐಆರ್‌ಗಳು ದಾಖಲಾಗಿವೆ. ಫಾರಂ7 ಅರ್ಜಿಗಳನ್ನು ಒಟ್ಟಾಗಿ ಸಂಗ್ರಹಿಸಿ, ಸಹಿ ಮಾಡಿ ಬಂಡಲ್‌ಗಳ ರೂಪದಲ್ಲಿ ಸಲ್ಲಿಸಿರುವವರ ವಿರುದ್ಧ ಕೆಲವು ಕಡೆ ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್ಐಆರ್ ದಾಖಲಿಸುವಂತೆ ಚುನಾವಣಾ ಆಯೋಗವನ್ನು ಕೋರಿದ್ದೇವೆ. ಏಳು ದಿನಗಳ ಕಾಲ ನೋಟಿಸ್ ನೀಡಿ ಕಾಯ್ದು, ನಂತರ ಎಫ್ಐಆರ್ ದಾಖಲಿಸುವುದಾಗಿ ಚುನಾವಣಾ ಆಯೋಗವು ಪತ್ರದ ಮೂಲಕ ತಿಳಿಸಿದೆ. ಅದರಂತೆ ಮುಂದಿನ ಕ್ರಮ ಕೈಗೊಳ್ಳಬೇಕಿದೆ. ಎಫ್ಐಆರ್ ದಾಖಲಾದ ನಂತರ ಪ್ರಕರಣದಲ್ಲಿ ಬೇರೆ ರೀತಿಯ ಬೆಳವಣಿಗೆಗಳು ನಡೆಯಲಿವೆ ಎಂದು ಹೇಳಿದರು.

> ಇದಕ್ಕಾಗಿ ಯಾವುದೇ ಒಂದು ನಿರ್ದಿಷ್ಟ 'ಜಾತ್ರಾ ಮೈದಾನ' ಅಥವಾ ಕೇಂದ್ರೀಯ ವೇದಿಕೆ ಇರುವುದಿಲ್ಲ. ಒಂದೇ ಸ್ಥಳಕ್ಕೆ ಸೀಮಿತವಾಗದೆ ನಗರದ ಹಲವೆಡೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಚಿವರು ತಿಳಿಸಿದ್ದಾರೆ.-ಸಚಿವ ಕೃಷ್ಣ ಬೈರೇಗೌಡ

**ಊರು ಹಬ್ಬಜಾತ್ರೆ**

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹೇಳಿಕೆಯ ಪ್ರಕಾರ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಮತ್ತು ಸಚಿವ ಕೃಷ್ಣ ಬೈರೇಗೌಡ ಮಾರ್ಗದರ್ಶನದಲ್ಲಿ ನಡೆಯಲಿರುವ ಈ ಜಾತ್ರೆಯು, ಇಡೀ ಸಮುದಾಯವೇ ಒಗ್ಗೂಡಿ ಆಚರಿಸುವ ಕರ್ನಾಟಕದ ಸಾಂಪ್ರದಾಯಿಕ 'ಊರು ಹಬ್ಬಜಾತ್ರೆ'ಯಿಂದ ಸ್ಫೂರ್ತಿ ಪಡೆದಿದೆ.

## 4 IAS ಅಧಿಕಾರಿಗಳ ವರ್ಗಾವಣೆ ಮಾಡಿ ಸರ್ಕಾರ ಆದೇಶ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರವು 4 ಹಿರಿಯ ಐಎಎಸ್ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ ಮತ್ತು ಹೆಚ್ಚುವರಿ ಹೊಣೆಗಾರಿಕೆ ನೀಡಿ ಅಧಿಕೃತ ಆದೇಶ ಹೊರಡಿಸಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಟಿ. ಮಹಾಂತೇಶ್ ಅಧಿಸೂಚನೆ ಹೊರಡಿಸಿದ್ದಾರೆ. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರಾಗಿದ್ದ ಆಮ್ಲನ್ ಆದಿತ್ಯ ಬಿಸ್ವಾಸ್ ಅವರನ್ನು ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದ್ದು, ಕ್ಯಾಪ್ಟನ್ ಡಾ. ರಾಜೇಂದ್ರ ಕೆ. ಅವರಿಗೆ ಬೆಂಗಳೂರು ವಿಭಾಗದ ನೂತನ ಪ್ರಾದೇಶಿಕ ಆಯುಕ್ತರ ಹೊಣೆ ನೀಡಲಾಗಿದೆ.ಗುಪ್ತಚರ ವಿಭಾಗದ ನೂತನ ಮುಖ್ಯಸ್ಥರಾಗಿ ಚಂದ್ರಗುಪ್ತ ನೇಮಕ ಪಂಕಜ್ ಕುಮಾರ್ ಪಾಂಡೆ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ ಜೊತೆಗೆ ಇ-ಆಡಳಿತ ಇಲಾಖೆಯ ಹೆಚ್ಚುವರಿ ಜವಾಬ್ದಾರಿಯನ್ನು ನೀಡಲಾಗಿದೆ. ಅಲ್ಪಸಂಖ್ಯಾತ ಇಲಾಖೆಯ ಕಾರ್ಯದರ್ಶಿಯಾಗಿ ಸಲ್ಮಾ ಕೆ ಫಹೀಮ್ ಅವರನ್ನು ನೇಮಕ ಮಾಡಲಾಗಿದೆ.

## ಎಸ್‌ಸಿ, ಅಲ್ಪಸಂಖ್ಯಾತರ ಮತದಾನ ಹಕ್ಕು ಕಸಿಯಲಾಗುತ್ತಿದೆ: ಪ್ರಿಯಾಂಕ್ ಖರ್ಗೆ

• ಉದಯವಾಹಿನಿ, ಬೆಂಗಳೂರು

ಚುನಾವಣಾ ಮತದಾರರ ಪಟ್ಟಿಯ ಪರಿಷ್ಕರಣೆಗೆ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು 'ಸಂಘ್ ಇಂಟೆನ್ಸಿವ್ ರಿವಿಷನ್' ಆಗಿ ಪರಿವರ್ತಿಸಲಾಗಿದ್ದು, ಚುನಾವಣಾ ಆಯೋಗದ ಮೌನ ಸಮ್ಮತಿಯೊಂದಿಗೆ ಪರಿಶಿಷ್ಟ ಜಾತಿ ಹಾಗೂ ಅಲ್ಪಸಂಖ್ಯಾತ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಪ್ರಯತ್ನ ನಡೆಯುತ್ತಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ.

ಚುನಾವಣಾ ಆಯೋಗದ ವಕ್ತಾರರಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ವರ್ತಿಸುತ್ತಿವೆ ಎಂದು ಆರೋಪಿಸಿದ ಖರ್ಗೆ, ತೀವ್ರ ವಾಗ್ದಾಳಿ ನಡೆಸಿದರು. ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರ ಚುನಾವಣಾ ಅಧಿಕಾರಿಗಳಿಗೆ ಅಗತ್ಯವಿರುವ ಎಲ್ಲ ಸಾಂಸ್ಥಿಕ ಹಾಗೂ ಪ್ರಚಾರಾತ್ಮಕ ಬೆಂಬಲ ನೀಡಿದ್ದರೂ, ಈ ಪ್ರಕ್ರಿಯೆಯನ್ನು ದುರುದ್ದೇಶದಿಂದ ನಡೆಸಲಾಗುತ್ತಿದೆ ಎಂದು ಹೇಳಿದರು.

ಎಸ್‌ಐಆರ್‌ನಲ್ಲಿ ಸಂಪೂರ್ಣ ಪಾರದರ್ಶಕತೆ ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲ ಪ್ರಯತ್ನಗಳಲ್ಲಿ ರಾಜ್ಯ ಚುನಾವಣಾ ಆಯೋಗ ಮತ್ತು ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗೆ ನಾವು ಸಂಪೂರ್ಣ ಬೆಂಬಲ ನೀಡಿದ್ದೇವೆ. ಪ್ರಕ್ರಿಯೆ ಕುರಿತು ಜನರಿಗೆ ಅರಿವು ಮೂಡಿಸಲು ಅವರೊಂದಿಗೆ ಜಾಹೀರಾತುಗಳನ್ನೂ ಪ್ರಕಟಿಸಿದ್ದೇವೆ.

ಆದರೂ, ಇದೆಲ್ಲವೂ ದುರುದ್ದೇಶದಿಂದ ಹಾಗೂ ಭಾರತೀಯ ಚುನಾವಣಾ ಆಯೋಗದ ಸಂಪೂರ್ಣ ಗಮನಕ್ಕೆ ಬರುವ ರೀತಿಯಲ್ಲಿ ನಡೆಯುತ್ತಿದೆ ಎಂದು ಹೇಳಿದರು. ಮತದಾರರ ಪಟ್ಟಿಯಿಂದ ಹೊರಗುಳಿದವರ ಸಂಖ್ಯೆಯ ಪ್ರಮಾಣವನ್ನು ಉಲ್ಲೇಖಿಸಿದ ಖರ್ಗೆ, ಕರ್ನಾಟಕದಲ್ಲಿ 1.08 ಕೋಟಿಗೂ ಹೆಚ್ಚು ಮಂದಿಯ ಹೆಸರುಗಳು ಮತದಾರರ ಪಟ್ಟಿಯಿಂದ ಹೊರಗುಳಿದಿವೆ ಎಂದು ಹೇಳಿದರು. ಅಲ್ಲದೆ, ಪ್ರಸ್ತುತ ಪಟ್ಟಿಯಲ್ಲಿರುವ 43.8 ಲಕ್ಷ ಮಂದಿಗೆ 'ತಾರ್ಕಿಕ ವ್ಯತ್ಯಾಸ'ಗಳಿರುವುದಾಗಿ ಹೇಳಿ ನೋಟಿಸ್ ಜಾರಿ ಮಾಡಲಾಗಿದೆ ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

> ಇದು ವಿಶೇಷ ತೀವ್ರ ಪರಿಷ್ಕರಣೆಯಲ್ಲ ಇದು ಆರ್‌ಎಸ್‌ಎಸ್ ನಡೆಸುತ್ತಿರುವ 'ಸಂಘ್ ಇಂಟೆನ್ಸಿವ್ ರಿವಿಷನ್'. ಪರಿಶಿಷ್ಟ ಜಾತಿ ಮತ್ತು ಅಲ್ಪಸಂಖ್ಯಾತರ ಮತಗಳನ್ನೇ ಏಕೆ ಅಳಿಸಲಾಗುತ್ತಿದೆ ಎಂದು ಅವರು ಪ್ರಶ್ನಿಸಿದರು.-ಪ್ರಿಯಾಂಕ್ ಖರ್ಗೆ

## ಪತ್ನಿ ಜೊತೆಗಿದ್ದ ವಿಡಿಯೋ ಕಳುಹಿಸಿದ ಪ್ರಿಯಕರ; ಆಟೋ ಚಾಲಕ ಆತ್ಮಹತ್ಯೆ!

• ಉದಯವಾಹಿನಿ, ಬೆಂಗಳೂರು

ತನ್ನ ಪತ್ನಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಆರೋಪಿಯಿಂದ ಮಾನಸಿಕ ಕಿರುಕುಳಕ್ಕೊಳಗಾದ 35 ವರ್ಷದ ಆಟೋ ಚಾಲಕ ಮನೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತ ವ್ಯಕ್ತಿಯ ಸಹೋದರ ಅಂಬರೀಶ್ ಅವರು ನೀಡಿರುವ ದೂರಿನ ಪ್ರಕಾರ, ಮುನಿಕೃಷ್ಣ ಅವರಿಗೆ ಸುಮಾರು 10 ವರ್ಷಗಳ ಹಿಂದೆ ವಿವಾಹವಾಗಿತ್ತು. ಅವರ ಪತ್ನಿ ನಾಗದೇವನಹಳ್ಳಿಯವರು. ದಂಪತಿಗೆ ಆರು ವರ್ಷದ ಮಗನಿದ್ದು, ಪತ್ನಿ ಈಗ ಮತ್ತೆ ಗರ್ಭಿಣಿಯಾಗಿದ್ದಾರೆ. ಮುನಿಕೃಷ್ಣ ಪತ್ನಿ ಕುಮಾರ್ ಎಂಬಾತನೊಂದಿಗೆ ಸುಮಾರು ಒಂದು ವರ್ಷದಿಂದ ಸಂಬಂಧ ಹೊಂದಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಕುಮಾರ್, ಮುನಿಕೃಷ್ಣ ಅವರ ಫೋನ್‌ಗೆ ಖಾಸಗಿ ಫೋಟೋಗಳು ಮತ್ತು ವೀಡಿಯೊಗಳನ್ನು ಕಳುಹಿಸುತ್ತಿದ್ದ ಎನ್ನಲಾಗಿದೆ.

ಸೆಪ್ಟೆಂಬರ್ 27 ರಂದು ಸಂಜೆ 4 ಗಂಟೆ ಸುಮಾರಿಗೆ, ಕುಮಾರ್ ದೇವಾಲಯವೊಂದರ ಬಳಿ ಮುನಿಕೃಷ್ಣ ಅವರನ್ನು ತಡೆದು ನಿಲ್ಲಿಸಿ ನಿಂದಿಸಿದ್ದಾನೆ. ತನ್ನ ಪತ್ನಿ ಗರ್ಭ ಧರಿಸಿರುವ ಮಗು ತನ್ನದು ಎಂದು ಹೇಳಿಕೊಂಡ ಕುಮಾರ್, ಖಾಸಗಿ ಫೋಟೋ ಮತ್ತು ವೀಡಿಯೊಗಳನ್ನು ನೋಡಿದ ನಂತರವೂ ಇನ್ನೂ ಏಕೆ ಬದುಕಿದ್ದೀಯಾ ಎಂದು ವ್ಯಂಗ್ಯವಾಡಿದ್ದನು. ಈ ಮಾತುಗಳು ಮುನಿಕೃಷ್ಣ ಅವರಿಗೆ ತೀವ್ರ ಮಾನಸಿಕ ಒತ್ತಡವನ್ನು ಉಂಟುಮಾಡಿದವು ಎಂದು ದೂರಿನಲ್ಲಿ ತಿಳಿಸಲಾಗಿದೆ. ಮನೆಗೆ ಮರಳಿದ ನಂತರ, ಅವರು ತಮ್ಮ ಸಂಬಂಧಿಕರಿಗೆ ಕರೆ ಮಾಡಿ ಇಡೀ ಘಟನೆಯನ್ನು ವಿವರಿಸಿ ತಮಗೆ ಬದುಕುವ ಇಚ್ಛೆಯಿಲ್ಲ ಎಂದು ಹೇಳಿದ್ದರು. ಯಾವುದೇ ಕೆಟ್ಟ ನಿರ್ಧಾರ ತೆಗೆದುಕೊಳ್ಳದಂತೆ ಸಂಬಂಧಿಕರು ಸಲಹೆ ನೀಡಿದ್ದರು. ಮರುದಿನ ಬೆಳಿಗ್ಗೆ (ಸೆಪ್ಟೆಂಬರ್ 28) ಅವರು ಮುನಿಕೃಷ್ಣ ಅವರ ಮನೆಗೆ ಭೇಟಿ ನೀಡಿ ಮತ್ತೆ ಸಮಾಧಾನಪಡಿಸಿದ್ದರು.

## ಮಹಿಳೆಯ ದೇಹದ ಕುರಿತು ಲೇವಡಿ; ಐಪಿಸಿ 509 ಅಡಿಯಲ್ಲಿ ಅಪರಾಧವಲ್ಲ: ಇಬ್ಬರ ವಿರುದ್ಧದ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಮಹಿಳೆಯ ದೇಹದ ಕುರಿತು ಲೇವಡಿ ಮಾಡಲಾಗಿದೆ (ಬಾಡಿ ಶೇಮಿಂಗ್) ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸುವಂತಹ ಆರೋಪಗಳು ಐಪಿಸಿ ಕಲಂ 509ರ ಅಡಿ ಮಹಿಳೆಯ ಮಾನಕ್ಕೆ ಭಂಗ ತರುವ ಅಪರಾಧದಡಿ ಬರುವುದಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ನಗರದ 1ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್ ಗೆ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿ ರದ್ದುಪಡಿಸಬೇಕು ಎಂದು ಕೋರಿ 25 ಮತ್ತು 27 ವರ್ಷದ ಇಬ್ಬರು ಆರೋಪಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ. ಪ್ರಕರಣ ಮತ್ತು ದೋಷಾರೋಪ ಪಟ್ಟಿ ರದ್ದುಪಡಿಸಿ ಆದೇಶಿಸಿದೆ.ಇದೇ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಮೂರನೇ ಆರೋಪಿ ವಿರುದ್ಧದ ನ್ಯಾಯಿಕ ಕ್ರಮವನ್ನು 2024ರ ಜೂನ್‌ನಲ್ಲೇ ರದ್ದುಗೊಳಿಸಿದೆ. ಅಂತೆಯೇ, ಅರ್ಜಿದಾರರ ವಿರುದ್ಧದ ಆರೋಪಗಳೂ ಒಂದೇ ರೀತಿಯ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಅನ್ವಯಿಸಬಹುದಾದ ಸಮಾನತೆಯ ತತ್ವದಡಿ ಈ ಪ್ರಕರಣವನ್ನೂ ರದ್ದುಪಡಿಸಲಾಗುತ್ತಿದೆ ಎಂದು ನ್ಯಾಯಪೀಠ ಹೇಳಿದೆ.ಅಷ್ಟಕ್ಕೂ, ಐಪಿಸಿ-1860ರ ಕಲಂ 509ರ ಅಡಿಯಲ್ಲಿ ಅಪರಾಧವನ್ನು ಸಾಬೀತುಪಡಿಸಲು ಅಗತ್ಯವಿರುವ ಅಂಶಗಳು ಲಭ್ಯವಿರುವ ಸಾಕ್ಷ್ಯಾಧಾರಗಳಲ್ಲಿ ಕಂಡು ಬಂದಿಲ್ಲ ಎಂದು ಅರ್ಜಿದಾರರ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ನ್ಯಾಯಾಲಯ ರದ್ದುಪಡಿಸಿದೆ. 2026ರ ಆಗಸ್ಟ್ 9 ರಂದು ರಾತ್ರಿ ಇಬ್ಬರು ಯುವತಿಯರು ಮತ್ತು ಒಬ್ಬ ಯುವಕ ನನ್ನನ್ನು ಹಾಗೂ ನನ್ನ ಸ್ನೇಹಿತರನ್ನು ನಿಂದಿಸಿದ್ದಾರೆ. ನನ್ನ ದೇಹದ ಆಕಾರ, ತೂಕದ ಬಗ್ಗೆ ಲೇವಡಿ ಮಾಡಲಾಗಿದೆ ಮತ್ತು ಅಶ್ಲೀಲ ಭಾಷೆ ಬಳಸಿ ಜನಾಂಗೀಯ ನಿಂದನೆ ಮಾಡಲಾಗಿದೆ. ಇದರಿಂದ ನನಗೆ ಮತ್ತು ನನ್ನ ಸ್ನೇಹಿತರಿಗೆ ಮಾನಸಿಕ ಆಘಾತ ಹಾಗೂ ತೀವ್ರ ಸಂಕಟ ಉಂಟಾಗಿದೆ ಎಂದು ಆರೋಪಿಸಿ 26 ವರ್ಷದ ಯುವತಿಯೊಬ್ಬರು ನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದರ ಆಧಾರದಡಿ ಪೊಲೀಸರು ಎಫ್ ಐಆರ್ ದಾಖಲಿಸಿದ್ದರು.

ತನಿಖೆ ನಡೆಸಿ ಐಪಿಸಿ ಕಲಂ 509ರ (ಒಬ್ಬ ಮಹಿಳೆಯ ಮಾನಕ್ಕೆ ಕುಂದು ಉಂಟುಮಾಡುವ ಉದ್ದೇಶದ ಶಬ್ದ, ಸಂಜ್ಞೆ ಅಥವಾ ಕೃತ್ಯ ಎಸಗುವ ಅಪರಾಧ-ಮೂರು ವರ್ಷದ ವರೆಗೆ ಜೈಲು ಶಿಕ್ಷೆ ಮತ್ತು ದಂಡ) ಅಡಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

# ಪ್ರವಾಸಿಗರಿಗೆ ಗುಣಮಟ್ಟದ ಆಹಾರ ಹಸಿವು ನೀಗಿಸಲು ಮಾಸ್ಟರ್‌ಪ್ಲಾನ್

**ಲೈವ್ ಕಿಚನ್ ಹೊಂದಿರುವ, ವಿಶೇಷವಾಗಿ ವಿನ್ಯಾಸಗೊಳಿಸಲಾದ ವಾಹನಗಳನ್ನು ನಿರ್ವಹಿಸಲು ಈ ಕ್ಷೇತ್ರದಲ್ಲಿ ಉತ್ತಮ ಅನುಭವ ಹೊಂದಿರುವವರನ್ನು ಆಯ್ಕೆ ಮಾಡಲಾಗುತ್ತದೆ.**

• ಉದಯವಾಹಿನಿ, ಬೆಂಗಳೂರು

ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರು ಇನ್ಮುಂದೆ ಗುಣಮಟ್ಟದ ಮತ್ತು ಸ್ವಚ್ಛವಾದ ಆಹಾರಕ್ಕಾಗಿ ಪರದಾಡುವ ಚಿಂತೆ ಪಡಬೇಕಿಲ್ಲ. ಪ್ರವಾಸಿಗರಿಗೆ ಅತ್ಯುತ್ತಮ ಹಾಗೂ ಕೈಗೆಟುಕುವ ದರದಲ್ಲಿ ಆಹಾರ ಒದಗಿಸಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಮಯೂರ ರುಚಿ ಆನ್ ವೀಲ್ಸ್ ಎಂಬ ವಿನೂತನ ಸಂಚಾರಿ ಆಹಾರ ಟ್ರಕ್ ಯೋಜನೆಯನ್ನು ಜಾರಿಗೆ ತರುತ್ತಿದೆ.

1 ಅಕ್ಟೋಬರ್ 5ರಿಂದ ಟೆಂಡರ್ ಪ್ರಕ್ರಿಯೆ

2 30 ಲಕ್ಷ ರೂ, ವೆಚ್ಚವಾಗುವ ನಿರೀಕ್ಷೆಯಿದೆ

3 ಇಡ್ಲಿ, ವಡೆ, ದೋಸೆ,ಅನ್ನದ ಖಾದ್ಯಗಳು

ಸಚಿವ ಕೆ.ಜೆ. ಜಾರ್ಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಮಂಡಳಿ ಸಭೆಯಲ್ಲಿ ಈ ಯೋಜನೆಗೆ ಅನುಮೋದನೆ ನೀಡಲಾಗಿದೆ. ಅಕ್ಟೋಬರ್ 5ರಿಂದ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುತ್ತಿದ್ದು, ನವೆಂಬರ್ ಮೂರನೇ ವಾರದ ವೇಳೆಗೆ ಆಹಾರ ಟ್ರಕ್‌ಗಳನ್ನು ಕಾರ್ಯಾರಂಭಗೊಳಿಸುವ ಗುರಿ ಹೊಂದಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಿಶೇಷವಾಗಿ ವಿನ್ಯಾಸಗೊಳಿಸಲಾದ ವಾಹನಗಳನ್ನು ನಿರ್ವಹಿಸಲು ಈ ಕ್ಷೇತ್ರದಲ್ಲಿ ಉತ್ತಮ ಅನುಭವ ಹೊಂದಿರುವವರನ್ನು ಆಯ್ಕೆ ಮಾಡಲಾಗುತ್ತದೆ. ಆಹಾರ ವ್ಯರ್ಥವಾಗದಂತೆ ನೋಡಿಕೊಳ್ಳುವುದರ ಜತೆಗೆ ತ್ವರಿತ ಸೇವೆ ನೀಡುವುದು ಉದ್ದೇಶ. ಅಗತ್ಯ ವಸ್ತುಗಳಿಗಾಗಿ ಪ್ರವಾಸಿ ತಾಣಗಳ ಸುತ್ತಮುತ್ತಲಿನ ರೆಸ್ಟೋರೆಂಟ್‌ಗಳೊಂದಿಗೆ ನಿರ್ವಾಹಕರು ಸಹಭಾಗಿತ್ವ ಮಾಡಲಿದ್ದಾರೆ'' ಎಂದು ಅಧಿಕಾರಿ ಹೇಳಿದ್ದಾರೆ. ಆಹಾರ ಟ್ರಕ್‌ಗಳಲ್ಲಿ ಸ್ಯಾಂಡ್‌ವಿಚ್, ಫ್ರೈಸ್, ಬರ್ಗರ್, ಪಿಜ್ಜಾ, ಐಸ್‌ಕ್ರೀಂ ಸೇರಿದಂತೆ ದಕ್ಷಿಣ ಭಾರತದ ಉಪಾಹಾರಗಳಾದ ಇಡ್ಲಿ, ವಡೆ, ದೋಸೆ, ಕೆಲವು ಅನ್ನದ ಖಾದ್ಯಗಳು, ಚಹಾ ಮತ್ತು ಕಾಫಿ ಲಭ್ಯವಾಗಲಿವೆ ಎಂದು ತಿಳಿಸಿದ್ದಾರೆ.ಪ್ರವಾಸಿ ತಾಣ ಮತ್ತು ಅಲ್ಲಿ ಸೇರುವ ಜನರ ಸಂಖ್ಯೆಯನ್ನು ಆಧರಿಸಿ ಆಹಾರ ಪಟ್ಟಿಯನ್ನು ಬದಲಾಯಿಸಲು ಅವಕಾಶವಿರುತ್ತದೆ. ಆಹಾರ ಟ್ರಕ್‌ಗಳಲ್ಲಿ ಸಂಪೂರ್ಣ ಸಸ್ಯಾಹಾರಿ ಖಾದ್ಯಗಳನ್ನಷ್ಟೇ ನೀಡಲಾಗುವುದು. ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವುದು ಹಾಗೂ ಪ್ರಾದೇಶಿಕ ಖಾದ್ಯಗಳಿಗೆ ಆದ್ಯತೆ ನೀಡುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.ರೆಸ್ಟೋರೆಂಟ್‌ಗಳನ್ನು ಸ್ಥಾಪಿಸಲು ಸಾಧ್ಯವಾಗದ ಪ್ರವಾಸಿ ತಾಣಗಳಲ್ಲಿ ಸರ್ಕಾರಿ ಸಂಸ್ಥೆಯೇ ಆಹಾರ ಟ್ರಕ್‌ಗಳನ್ನು ನಿರ್ವಹಿಸುವ ದೇಶದ ಮೊದಲ ಯೋಜನೆ ಇದಾಗಲಿದೆ ಎಂದು ಅಧಿಕಾರಿ ಹೇಳಿದ್ದಾರೆ. ಆಹಾರ ಟ್ರಕ್‌ಗಳ ಕಾರ್ಯನಿರ್ವಹಣೆಯ ಸಮಯವೂ ಸ್ಥಳಕ್ಕೆ ಅನುಗುಣವಾಗಿ ಬದಲಾಗಲಿದೆ. ಉದಾಹರಣೆಗೆ, ನಂದಿ ಬೆಟ್ಟಕ್ಕೆ ಮುಂಜಾನೆ ತೆರಳುವ ಪ್ರವಾಸಿಗರು ಬೆಟ್ಟದ ತಪ್ಪಲಿನಲ್ಲಿ ಬೆಳಗಿನ ಜಾವದಿಂದಲೇ ಸರತಿ ಸಾಲಿನಲ್ಲಿ ನಿಲ್ಲುವುದರಿಂದ, ಅವರಿಗೆ ಬಿಸಿ ಆಹಾರ ಒದಗಿಸಲು ಕೆಲ ಟ್ರಕ್‌ಗಳು ಬೆಳಗಿನ ಜಾವ 3 ಗಂಟೆಯಿಂದಲೇ ಕಾರ್ಯನಿರ್ವಹಿಸಲಿವೆ.ಪ್ರವಾಸೋದ್ಯಮ ಕಾರ್ಯದರ್ಶಿ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ಪ್ರವಾಸೋದ್ಯಮದ ಅನುಭವದಲ್ಲಿ ಆಹಾರವೂ ಪ್ರಮುಖ ಭಾಗವಾಗಿದೆ ಎಂದು ಹೇಳಿದ್ದಾರೆ. 'ಮಯೂರ ರುಚಿ ಆನ್ ವೀಲ್ಸ್' ಮೂಲಕ ಯ ಆತಿಥ್ಯ ಸೇವೆಗಳನ್ನು ಪ್ರವಾಸಿಗರ ಬಳಿಗೆ ಇನ್ನಷ್ಟು ಹತ್ತಿರವಾಗಿ ಕೊಂಡೊಯ್ಯಲಾಗುವುದು ಎಂದು ಅವರು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

> ಬೆಂಗಳೂರು ಮತ್ತು ಮೈಸೂರಿನ ಉದಾಹರಣೆ ನೀಡಿದ ಅವರು, ಲಾಲ್‌ಬಾಗ್, ಕಬ್ಬನ್ ಪಾರ್ಕ್, ಅರಮನೆ ಮೈದಾನ, ಕಡಲೆಕಾಯಿ ಪರಿಷೆ, ಮೈಸೂರು ಅರಮನೆ ಸೇರಿದಂತೆ ಪ್ರವಾಸಿಗರ ಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಈ ಫುಡ್ ಟ್ರಕ್‌ಗಳು ಸಂಚರಿಸಲಿವೆ ಎಂದು ಹೇಳಿದ್ದಾರೆ.- ಸಚಿವ ಕೆ.ಜೆ. ಜಾರ್ಜ್

**ಪ್ರಾಯೋಗಿಕ ಯೋಜನೆ**

ಪ್ರತಿ ಆಹಾರ ಟ್ರಕ್‌ಗೆ ಸುಮಾರು 30 ಲಕ್ಷ ರೂ, ವೆಚ್ಚವಾಗುವ ನಿರೀಕ್ಷೆಯಿದೆ. ಪ್ರತಿ ಪ್ರವಾಸಿ ತಾಣದಲ್ಲಿ ಒಂದು ಆಹಾರ ಟ್ರಕ್‌ನ್ನು ನಿರ್ವಹಿಸಲಿದೆ. ಪ್ರಾಯೋಗಿಕ ಯೋಜನೆಯನ್ನು ಹಂಪಿ, ನಂದಿ ಬೆಟ್ಟ, ಬೆಂಗಳೂರು ಮತ್ತು ಮೈಸೂರಿನಲ್ಲಿ ಆರಂಭಿಸಲಾಗುವುದು. ಬಳಿಕ ಮಡಿಕೇರಿ ಹಾಗೂ ಜೋಗ ಜಲಪಾತಕ್ಕೂ ವಿಸ್ತರಿಸಲಾಗುತ್ತದೆ.

# ಗಾಂಧೀಜಿ , ಶಾಸ್ತ್ರಿ ಜಯಂತಿ ಆಚರಣೆ

• **ಉದಯವಾಹಿನಿ, ವಿಜಯಪುರ**

ಗಾಂಧೀಜಿ ಯವರ ಕನಸಿನ ರಾಮರಾಜ್ಯ ಎಂದರೆ ಸಮಾನತೆ ಮತ್ತು ಸ್ವಾತಂತ್ರ್ಯ ಇರುವ ಸಮಾಜ ಎಂದು ಪ್ರಾಂಶುಪಾಲ ಬಿ. ಪಿ. ಬೈರೇಗೌಡ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆಯಲ್ಲಿ ಅವರು ಭಾಗವಹಿಸಿ, ಮಹಾತ್ಮ ಗಾಂಧೀಯವರ ಜೀವಮಾನವೇ ಒಂದು ಸಂದೇಶವಾಗಿದ್ದು, ಇಂದಿಗೂ ಸಹ ಇವರ ಹೆಸರು ಭಾರತೀಯರ ಮನಸ್ಸಿನಲ್ಲಿ ಮಾತ್ರವಲ್ಲದೆ ವಿಶ್ವದ ಅನೇಕ ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದಿದೆ ಎಂದು ಹೇಳಿದರು. ಕನ್ನಡ ಉಪನ್ಯಾಸಕ ಚಂದ್ರಶೇಖರ್ ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಲ್ಲೂ ವರ್ಣಭೇದ ನೀತಿಯ ವಿರುದ್ಧ ಹೋರಾಡಿ ಜನಚಿರಪರಿಚಿತರಾದರು ಮತ್ತು ದಕ್ಷಿಣ ಆಫ್ರಿಕಾದ ವಿವಿಧ ಸ್ಥಳಗಳಲ್ಲಿ ಗಾಂಧೀಜಿಯವರ ಪುತ್ಥಳಿಗಳನ್ನು ನಿರ್ಮಿಸಲಾಗಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಸರ್ವಧರ್ಮ ಪ್ರಾರ್ಥನೆ, ರಾಮ ಭಜನೆ, ಸ್ವಚ್ಛತಾ ಪ್ರತಿಜ್ಞಾ ವಿಧಿ ಹಾಗೂ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಲಾಗಿತ್ತು. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳನ್ನೊಳಗೊಂಡ ವೃಂದ, ಸ್ವಯಂಸೇವಕರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

# ಎಸ್‌ಐಆರ್ ವಿರುದ್ಧ ಬೃಹತ್ ಪ್ರತಿಭಟನಾ ಮೆರವಣಿಗೆ

• **ಉದಯವಾಹಿನಿ, ಕೋಲಾರ**

ದೇಶದಲ್ಲಿ ಮತಗಳ ಪರಿಷ್ಕರಣೆ ಹೆಸರಿನಲ್ಲಿ ಜಾರಿಗೆ ತರಲಾಗಿರುವ ಎಸ್.ಐ.ಆರ್. ಅವೈಜ್ಞಾನಿಕ ಕ್ರಮಗಳು ಪ್ರಜಾಪ್ರಭುತ್ವಕ್ಕೆ ಮಾರಕವಾಗಿವೆ ಎಂಬ ಕಾರಣದಿಂದ ಅ. 5 ರಂದು ಜಿಲ್ಲಾ ಕಾಂಗ್ರೆಸ್ ಪಕ್ಷದಿಂದ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮ್ಯಾಕಲ್ ನಾರಾಯಣಸ್ವಾಮಿ ತಿಳಿಸಿದರು. ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ, ಹಿಂದೆ ಈ ವಿಷಯವನ್ನು ಕುರಿತು ವಿರೋಧ ವ್ಯಕ್ತಪಡಿಸಿದ್ದರು. ಎಸ್.ಐ.ಆರ್. ನೆಪದಲ್ಲಿ ಬಿಜೆಪಿ ಪಕ್ಷವು ಸಾಮಾನ್ಯ ಜನರ ಮತಗಳನ್ನು ಕಸಿಯುವ ಪ್ರಯತ್ನ ಮಾಡುತ್ತಿದೆ ಎಂಬ ಭವಿಷ್ಯ ನುಡಿದಿದ್ದರು ಮತ್ತು ಈಗ ಬಿಜೆಪಿ ಅಲ್ಪಸಂಖ್ಯಾತ ಹಿಂದುಳಿದ ದಲಿತರ ಮತಗಳನ್ನು ಮತಪಟ್ಟಿಯಿಂದ ಕಸಿಯುವ ತಂತ್ರವನ್ನು ರೂಪಿಸಿದೆ ಎಂಬ ಆರೋಪವನ್ನು ಮಾಡಿದರು. ರಾಹುಲ್ ಗಾಂಧಿ ಚುನಾವಣಾ ಆಯುಕ್ತರನ್ನು ಎಸ್.ಐ.ಆರ್. ಆಯುಕ್ತರನ್ನಾಗಿ ಅಥವಾ ಸುಪ್ರೀಂ ಕೋರ್ಟ್ ಜಡ್ಜ್ ಅವರನ್ನು ಒಳಗೊಂಡ ಸಮಿತಿಯನ್ನು ರಚನೆ ಮಾಡಲು ಒತ್ತಾಯಿಸಿದ್ದರೂ, ಪ್ರಧಾನಿಗಳು ಮತ್ತು ಕೇಂದ್ರ ಸಚಿವ ಅಮಿತ್ ಷಾ ತಮ್ಮ ಆಪ್ತ ಜ್ಞಾನೇಶ್ ಕುಮಾರ್ ಅವರನ್ನು ಆಯುಕ್ತರನ್ನಾಗಿ ನೇಮಕ ಮಾಡಿದ್ದಾರೆ.

ಬಿಹಾರ ರಾಜ್ಯದಲ್ಲಿ ಚುನಾವಣಾ ಆಯೋಗದಿಂದ 65 ಲಕ್ಷ ಮತದಾರರನ್ನು ಅನರ್ಹಗೊಳಿಸಿದ್ದರೆ, ಎಸ್.ಐ.ಆರ್. 95 ಲಕ್ಷ ಮತದಾರರನ್ನು ಹಿಂದಕ್ಕೆ ತೆಗೆದು, ಸಾಮಾಜಿಕ ಸಮತೋಲನವನ್ನು ಕಾಪಾಡಿದೆ ಎಂಬ ಕಾರಣವನ್ನು ಸಹ ನೀಡಿದರು. ಇದರಿಂದಾಗಿ ಜ್ಞಾನೇಶ್ ಕುಮಾರ್ ಅವರನ್ನು ಚುನಾವಣಾ ಆಯುಕ್ತ ಸ್ಥಾನದಿಂದ ತೆಗೆದುಹಾಕಬೇಕು ಎಂಬುದು ಮೇಲುಬಾಗಿದ್ದು, ಅವರ ನೇಮಕಾತಿಗೆ ಪ್ರತಿನಿಧವನ್ನು ಸೋಮವಾರ ಬಂಗಾರಪೇಟೆ ಸರ್ಕಲ್‌ನಲ್ಲಿ ನಡೆಸಲಾಗುವುದು ಎಂದು ಹೇಳಿದರು.



## ಮಿನಿ ನ್ಯೂಸ್

### ದೇಶದಲ್ಲೇ ಯಾವುದೇ ರಾಜ್ಯಗಳು ಮಾಡದ ಕೆಲಸ ನಮ್ಮ ಸರ್ಕಾರ ಮಾಡುತ್ತಿದೆ

• **ಉದಯವಾಹಿನಿ, ಮೈಸೂರು**

ಪ್ರಜಾಸೇವೆ ಇಲಾಖೆಯ ಮೂಲಕ ಜನರ ಸಮಸ್ಯೆ ಆಲಿಸಿ ಪರಿಹಾರ ಒದಗಿಸಲು ಇಡೀ ಸರ್ಕಾರ ನಿಮ್ಮ ಮುಂದಿದೆ. ನ್ಯಾಯಾಲಯಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಉಚಿತ ಸೇವೆ ಒದಗಿಸಲು ಪ್ರಜಾಸೇವೆ ಅಭಿಯಾನದಲ್ಲಿ ಪ್ರತ್ಯೇಕ ಕಾನೂನು ಕೇಂದ್ರ ಆರಂಭಿಸಲಾಗಿದೆ ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದರು. ಪಿರಿಯಾಪಟ್ಟಣದಲ್ಲಿ ನಡೆದ ಪ್ರಜಾಸೇವೆ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶಿವಕುಮಾರ್ ಅವರು ಮಾತನಾಡಿದರು. ಪ್ರಜಾಸೇವೆ ಇಲಾಖೆ ಆರಂಭಿಸಿ ರಾಜ್ಯದ ಹಿರಿಯ ಪ್ರಮಾಣಿಕ ಅಧಿಕಾರಿಗೆ ಜವಾಬ್ದಾರಿ ವಹಿಸಿದ್ದೇವೆ. ಜನರ ಸೇವೆಗಾಗಿ ಜನರ ಸಮಸ್ಯೆಗೆ ಸ್ಪಂದಿಸಲು ನನ್ನ 40 ವರ್ಷಗಳ ರಾಜಕೀಯ ಅನುಭವದಲ್ಲಿ ಈ ಹೊಸ ಇಲಾಖೆ ಆರಂಭಿಸಿದ್ದೇನೆ. ನಾನು ಶಾಸಕನಾದ ಬಳಿಕ ಪ್ರತಿ ವರ್ಷ ಪ್ರತಿ ಹಳ್ಳಿಗೆ ತೆರಳಿ ಅನುಭವ ಪಡೆದಿದ್ದೇನೆ. ಜನರ ಸಮಸ್ಯೆಗಳಿಗೆ ಮುಕ್ತಿ ನೀಡಿ, ಅವರ ಆಶಯಗಳಿಗೆ ಧ್ವನಿಯಾಗಿ, ನ್ಯಾಯ ಒದಗಿಸಲು, ಮಂತ್ರಿಗಳು ಹಾಗೂ ಸ್ಥಳೀಯ ಶಾಸಕರು ಸೇರಿದಂತೆ ಸರ್ಕಾರವು ಅಧಿಕಾರಿಗಳ ಸಮೇತ ಜನರ ಮನೆ ಬಾಗಿಲಿಗೆ ಹೋಗಲು ಈ ಇಲಾಖೆ ಆರಂಭಿಸಲಾಗಿದೆ. ಸೆ.05ರಂದು ಈ ಇಲಾಖೆ ಆರಂಭಿಸಲಾಗಿದೆ. ಈಗಾಗಲೇ 620 ಕಡೆ ಪ್ರಜಾಸೇವೆ ಅಭಿಯಾನ ಆಯೋಜಿಸಲಾಗಿದೆ. 1 ಲಕ್ಷಕ್ಕೂ ಹೆಚ್ಚು ಜನ ಅರ್ಜಿ ಸಲ್ಲಿಸಿದ್ದು, ಕಂದಾಯ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಹೆಚ್ಚು ಅರ್ಜಿಗಳು ಬರುತ್ತಿವೆ. ಪ್ರತಿ ತಾಲ್ಲೂಕಿನಲ್ಲಿ ನ್ಯಾಯಾಲಯದಲ್ಲಿ ಕಾನೂನು ನೆರವು ನೀಡುವ ಅವರನ್ನು ಕರೆಸಿ ಈ ಕಾರ್ಯಕ್ರಮದಲ್ಲಿ ಒಂದು ಕೇಂದ್ರ ಆರಂಭಿಸಲಾಗಿದೆ.

### ಸಾರ್ವಜನಿಕರ ಸಮಸ್ಯೆ ಪರಿಹಾರಕ್ಕೆ ಪ್ರಜಾಸೇವೆ ಆಂದೋಲನ ಉತ್ತಮ ವೇದಿಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹನೂರು**

ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಲು ಪ್ರಜಾಸೇವೆ ಆಂದೋಲನ ಉತ್ತಮ ವೇದಿಕೆಯಾಗಿದ್ದು, ಸಾರ್ವಜನಿಕರು ಸಲ್ಲಿಸುವ ಪ್ರತಿಯೊಂದು ಸಮಸ್ಯೆಯನ್ನು ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಶಾಸಕ ಎಂ.ಆರ್. ಮಂಜುನಾಥ್ ಹೇಳಿದರು. ಹನೂರು ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟರ ನೇತೃತ್ವದಲ್ಲಿ ನಡೆದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತೀವ್ರ ಬರಗಾಲ ಎದುರಾದ ಸಂದರ್ಭದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸಲು ಟ್ಯಾಂಕರ್ ಮೂಲಕ ನೀರು ಪೂರೈಕೆ ಹಾಗೂ ಕೊಳವೆಬಾವಿ ಕೊರೆಸಲು ಒಟ್ಟು 6.5 ಕೋಟಿ ವೆಚ್ಚ ಮಾಡಲಾಗಿದೆ. ಆದರೆ ಸರ್ಕಾರದಿಂದ ಈವರೆಗೆ 2.5 ಕೋಟಿ ಮಾತ್ರ ಅನುದಾನ ಬಿಡುಗಡೆಯಾಗಿದ್ದು, ಬಾಕಿ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ಕಳೆದ 15 ದಿನಗಳಿಂದ ಕ್ಷೇತ್ರ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಲವು ಪ್ರಮುಖ ಸೇತುವೆಗಳು ಹಾನಿಗೊಳಗಾಗಿದ್ದು, ರಸ್ತೆಗಳಲ್ಲಿಯೂ ಗುಂಡಿಗಳು ನಿರ್ಮಾಣವಾಗಿವೆ. ಹಾನಿಗೊಳಗಾದ ರಸ್ತೆ ಹಾಗೂ ಸೇತುವೆಗಳ ದುರಸ್ತಿಗೆ ಹೆಚ್ಚಿನ ಅನುದಾನ ಒದಗಿಸಬೇಕು.

### ಕಲಬುರಗಿ ನಂತರ ಮೈಸೂರಿನಲ್ಲಿ 'ಸಿದ್ದರಾಮಯ್ಯ ವೃತ್ತ' ನಾಮಫಲಕ ಅಳವಡಿಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

ಕಲಬುರಗಿಯಲ್ಲಿ ಇತ್ತೀಚೆಗೆ ನಡೆದ ಸಿದ್ದರಾಮಯ್ಯ ಪ್ರತಿಮೆ ವಿವಾದದ ಬೆನ್ನಲ್ಲೇ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಿಗರು ಮೈಸೂರು ಹುಣಸೂರು ರಸ್ತೆಯ ಲಿಂಗದೇವರಕೊಪ್ಪಲು ಗ್ರಾಮದ ಜಂಕ್ಷನ್‌ವೊಂದಕ್ಕೆ 'ಸಿದ್ದರಾಮಯ್ಯ ವೃತ್ತ' ಎಂದು ನಾಮಕರಣ ಮಾಡಿ ನಾಮಫಲಕ ಅಳವಡಿಸಿದ್ದಾರೆ.

ಕಲಬುರಗಿಯ ಹೈಕೋರ್ಟ್ ವೃತ್ತದಲ್ಲಿ ಯಾವುದೇ ಅಧಿಕೃತ ಅನುಮತಿ ಪಡೆಯದೆ ಸಿದ್ದರಾಮಯ್ಯ ಅವರ ಪ್ರತಿಮೆಯನ್ನು ರಾತ್ರೋರಾತ್ರಿ ಪ್ರತಿಷ್ಠಾಪಿಸಲಾಗಿತ್ತು. ಬಳಿಕ ನಗರ ಪಾಲಿಕೆ ಅಧಿಕಾರಿಗಳು ಪ್ರತಿಮೆಯನ್ನು ತೆರವುಗೊಳಿಸಿದ್ದರು.ಇದಾದ ಕೆಲವೇ ವಾರಗಳ ಬಳಿಕ ಇದೀಗ ಮೈಸೂರಿನಲ್ಲೂ ಸಿದ್ದರಾಮಯ್ಯ ಅವರ ಬೆಂಬಲಿಗರು ಮತ್ತೊಂದು ಸಾರ್ವಜನಿಕ ಜಂಕ್ಷನ್‌ಗೆ ಅವರ ಹೆಸರನ್ನು ಇಟ್ಟಿದ್ದಾರೆ.

# ರೈತ ಯುವಕರಿಗೆ 35-40 ವರ್ಷ ಆದ್ರೂ ಹೆಣ್ಣು ಸಿಗ್ತಿಲ್ಲ, ಬೇಡಿಕೆ ಇಟ್ಟ ವ್ಯಕ್ತಿ !

## ಬಡವರು, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ದಯವಿಟ್ಟು, ಏನಾದರೂ ಒಂದು ಯೋಜನೆ ಮಾಡಬೇಕು ಎಂದು ರೈತ ಮನವಿಸಲ್ಲಿಸಿದರು

• **ಉದಯವಾಹಿನಿ, ಮೈಸೂರು**

1 ತಾಳ್ಮೆಯಿಂದ ಸಮಸ್ಯೆ ಆಲಿಸಿದರು.

2 ಬಡವರು, ರೈತರು ಆತ್ಮಹತ್ಯೆ

3 ಜೀವನಕ್ಕೆ ಪರಿಹಾರ ದೊರೆಯುತ್ತದೆ

ಅವಿವಾಹಿತ ಪುರುಷರಿಗೆ, ಅದರಲ್ಲೂ ರೈತರಿಗೆ ವಧು ಹುಡುಕಲು ಸಹಾಯವಾಗುವಂತಹ ಯೋಜನೆಯೊಂದನ್ನು ರೂಪಿಸುವಂತೆ ರೈತರೊಬ್ಬರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿ ಗಮನ ಸೆಳೆದರು. 35ರಿಂದ 40 ವರ್ಷ ವಯಸ್ಸಿನ ಅನೇಕ ಪುರುಷರು ವಿವಾಹವಾಗದೆ ತೀವ್ರ ಹತಾಶೆಗೆ ಒಳಗಾಗಿದ್ದಾರೆ, ಅವರ ಪೋಷಕರು ಅದೇ ಕೊರಗಿನಲ್ಲಿ ಪ್ರಾಣಬಿಟ್ಟಿದ್ದಾರೆ ಎಂದು ಹಳ್ಳಿ ಪ್ರದೇಶಗಳಲ್ಲಿ ರೈತ ಯುವಕರ ಸಮಸ್ಯೆಗಳನ್ನು ಮುಂದಿಟ್ಟರು.

ಮೈಸೂರಿನ ಪಿರಿಯಾಪಟ್ಟಣದಲ್ಲಿ ನಡೆದ ಪ್ರಜಾ ಸೇವಾ ಕಾರ್ಯಕ್ರಮದಲ್ಲಿ ಡಿ ಕೆ ಶಿವಕುಮಾರ್ ಅವರನ್ನು ಭೇಟಿಯಾದ ರೈತ, 35ರಿಂದ 40 ವರ್ಷ ವಯಸ್ಸಿನ ಅನೇಕ ಪುರುಷರು ಇನ್ನೂ ಅವಿವಾಹಿತರಾಗಿದ್ದಾರೆ. ಬಡಪಾಪ, ಕೆಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಜೀವನದಲ್ಲಿ ಹತಾಶರಾಗಿದ್ದಾರೆ. ಅವರಿಗೆ ಮದುವೆಯಾಗಲು ಹೆಣ್ಣು ಸಿಗುತ್ತಿಲ್ಲ ಎಂದು ಹೇಳಿದರು. ಈ ಸಮಸ್ಯೆ ಕರ್ನಾಟಕದಾದ್ಯಂತ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಹೇಳಿದ ರೈತ, ಇದನ್ನು ಪರಿಹರಿಸಲು ಮುಖ್ಯಮಂತ್ರಿ ವಿಶೇಷ ಯೋಜನೆಯೊಂದನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ಇಂದು ಹಳ್ಳಿಗಳಲ್ಲಿ ರೈತ ಯುವಕರು ಮದುವೆ ಮಾಡಿಕೊಳ್ಳಲು, ಹೆಣ್ಣು ಹುಡುಕಲು ಸಾಕಷ್ಟು ಹಣ ಖರ್ಚು ಮಾಡುತ್ತಾರೆ. ಮನೆ ಕಟ್ಟಿಕೊಳ್ಳುತ್ತಾರೆ, ಜಮೀನು ಹೊಂದಿದ್ದಾರೆ.

**ಪೋಷಕರು ಹಿಂದೇಟು**

**ರೈತ ಕುಟುಂಬಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡಲು ಪೋಷಕರು ಹಿಂದೇಟು ಹಾಕುತ್ತಿದ್ದಾರೆ ಎಂದೂ ಅವರು ಹೇಳಿದರು.**


ಉದಯವಾಹಿನಿ ಚಿತ್ರ

ಆದರೆ ಯಾರೂ ತಮ್ಮ ಹೆಣ್ಣುಮಕ್ಕಳನ್ನು ಅವರಿಗೆ ಮದುವೆ ಮಾಡಿಕೊಡಲು ಮುಂದೆ ಬರುತ್ತಿಲ್ಲ. ಯಾವುದಾದರೂ ವ್ಯವಸ್ಥೆ ಮಾಡಿಕೊಟ್ಟರೆ ಲಕ್ಷಾಂತರ ಯುವಕರ ಜೀವನಕ್ಕೆ ಪರಿಹಾರ ದೊರೆಯುತ್ತದೆ. ಅವರಿಗಾಗಿ ಏನಾದರೂ ಮಾಡುವಂತೆ ನಾನು ವಿನಮ್ರವಾಗಿ ಮನವಿ ಮಾಡುತ್ತೇನೆ ಎಂದು ಹೇಳಿದರು.

ರೈತ ಯುವಕರ ಮದುವೆ ಸಮಸ್ಯೆಯನ್ನ ಪ್ರಸ್ತಾಪಿಸಿದ ಯುವಕ, ಇದನ್ನ ಕೇವಲ ಹಾಸ್ಯ ಅಥವಾ ತಮಾಷೆಯ ವಿಷಯವಾಗಿ ಪರಿಗಣಿಸಬಾರದು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾನೆ. ಮದುವೆಯಾಗದೆ ಉಳಿಯುತ್ತಿರುವ ಯುವಕರ ಬದುಕಿನ ಬಗ್ಗೆ ಸರ್ಕಾರ ಗಮನಹರಿಸಬೇಕು. ಲಕ್ಷಾಂತರ ಯುವಕರಿಗೆ ಅನುಕೂಲವಾಗುವಂತಹ ಯೋಜನೆಯನ್ನ ಜಾರಿಗೆ ತರಬೇಕು ಎಂದು ಆಗ್ರಹಿಸಿದ್ದಾನೆ.

> ಸರ್, ಬಡವರು, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ದಯವಿಟ್ಟು, ಏನಾದರೂ ಒಂದು ಯೋಜನೆ ಮಾಡಬೇಕು ಎಂದು ರೈತ ಮನವಿ ಮಾಡಿಕೊಂಡಾಗ ಸಿಎಂ ಡಿ ಕೆ ಶಿವಕುಮಾರ್, ಏನು? ಏನಾಗಿದೆ? ಎಂದು ತಾಳ್ಮೆಯಿಂದ ಸಮಸ್ಯೆ ಆಲಿಸಿದರು.
> –ಸಿಎಂ ಡಿ ಕೆ ಶಿವಕುಮಾರ್.

ಸಾಮಾನ್ಯವಾಗಿ ರೈತರನ್ನ ದೇಶದ ಬೆನ್ನೆಲುಬು ಎಂದು ಕರೆಯಲಾಗುತ್ತದೆ. ಆದರೆ ಕೃಷಿಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವ ಯುವಕರಿಗೆ ಮದುವೆಯ ವಿಚಾರದಲ್ಲಿ ಎದುರಾಗುತ್ತಿರುವ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರ ಮುಂದಾಗಬೇಕು ಎಂಬುದು ಯುವಕನ ಮನವಿಯ ಮುಖ್ಯ ಆಶಯವಾಗಿತ್ತು. ಯುವಕನ ಮನವಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇದು ತಮಾಷೆಯ ವಿಷಯವಲ್ಲ, ಸಾಮಾಜಿಕ ಸಮಸ್ಯೆ ಎಂಬುದನ್ನ ಒಪ್ಪಿಕೊಂಡರು. ರೈತರ ಮಕ್ಕಳಿಗೆ ಮದುವೆಯಾಗಲು ಹೆಣ್ಣು ಸಿಗುತ್ತಿಲ್ಲವೆಂಬ ಯುವಕನ ಅಳಲಿಗೆ ಪ್ರತಿಕ್ರಿಯಿಸಿದ ಅವರು, ಇಂದಿನ ಸಮಾಜದಲ್ಲಿ ಉದ್ಯೋಗ ಮತ್ತು ಜೀವನಶೈಲಿಗೆ ಹೆಚ್ಚಿನ ಆದ್ಯತೆ ನೀಡುವ ಪ್ರವೃತ್ತಿಯ ಬಗ್ಗೆಯೂ ಪ್ರಸ್ತಾಪಿಸಿದರು.

# ಕೈಸಾಲದ ಕಿರುಕುಳಕ್ಕೆ ಬೇಸತ್ತು ವಿಷ ಸೇವನೆ ಆರೋಪ: ಕಾರಣಕರ್ತರ ವಿರುದ್ಧ ಕಠಿಣ ಕ್ರಮಕ್ಕೆ ರೈತ ಸಂಘ ಒತ್ತಾಯ

• **ಉದಯವಾಹಿನಿ, ಗುಂಡ್ಲುಪೇಟೆ**

ಕೈಸಾಲ ಮಾಡಿಕೊಂಡಿದ್ದ ವ್ಯಕ್ತಿಗೆ ಸಾಲ ನೀಡಿದವರು ನಿರಂತರವಾಗಿ ಕರೆ ಮಾಡಿ ಕಿರುಕುಳ ನೀಡುತ್ತಿದ್ದರೆಂಬ ಆರೋಪ ಕೇಳಿಬಂದಿದ್ದು, ಇದರಿಂದ ಮಾನಸಿಕ ಒತ್ತಡಕ್ಕೆ ಒಳಗಾದ ಕುಮಾರ್ ಎಂಬುವವರು ವಿಷ ಸೇವಿಸಿರುವ ಘಟನೆ ತಾಲ್ಲೂಕಿನ ಮಳವಳ್ಳಿ ಗ್ರಾಮದಲ್ಲಿ ನಡೆದಿದೆ. ವಿಷ ಸೇವಿಸಿರುವ ವಿಷಯ ತಿಳಿದ ತಕ್ಷಣ ಕುಟುಂಬಸ್ಥರು ಕುಮಾರ್ ಅವರನ್ನು ಗುಂಡ್ಲುಪೇಟೆ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿದ್ದು, ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಹಾಗೂ ವಿಷ ಸೇವನೆಗೆ ನಿಖರ ಕಾರಣದ ಕುರಿತು ತನಿಖೆಯಿಂದಷ್ಟೇ ಸ್ಪಷ್ಟತೆ ಸಿಗಬೇಕಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಬರ ಪರಿಸ್ಥಿತಿಯಿಂದ ರೈತರು ಹಾಗೂ ಗ್ರಾಮೀಣ ಜನರು ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿ, ಕೈಸಾಲ ನೀಡುವವರು ಅತಿಯಾದ ಬಡ್ಡಿ ವಿಧಿಸುವುದು, ನಿರಂತರವಾಗಿ ದೂರವಾಣಿ ಕರೆ ಮಾಡಿ ಒತ್ತಡ ಹೇರುವುದು, ಬೆದರಿಕೆ ಅಥವಾ ಮಾನಸಿಕ ಕಿರುಕುಳ ನೀಡುತ್ತಿರುವ ಬಗ್ಗೆ ದೂರುಗಳು ಬಂದರೆ ಸಂಬಂಧಪಟ್ಟ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕೆಂದು ರೈತ ಸಂಘ ಒತ್ತಾಯಿಸಿದೆ. ಸಾಲದ ಹಣ ವಸೂಲಿ ಮಾಡುವ ಹೆಸರಿನಲ್ಲಿ ಕಾನೂನುಬಾಹಿರ ರೀತಿಯಲ್ಲಿ


ಉದಯವಾಹಿನಿ ಚಿತ್ರ

ಯಾರಿಗೂ ಕಿರುಕುಳ ನೀಡಲು ಅವಕಾಶವಿಲ್ಲ. ಹೀಗಾಗಿ ಪ್ರಕರಣದ ಕುರಿತು ಪೊಲೀಸರು ಸಮಗ್ರ ತನಿಖೆ ನಡೆಸಿ, ಸಾಲದ ವ್ಯವಹಾರ ನಡೆಸಿದವರ ಕಾನೂನುಬದ್ಧತೆ, ಬಡ್ಡಿ ವ್ಯವಹಾರ ಹಾಗೂ ಹಣ ವಸೂಲಿ ವಿಧಾನಗಳ ಬಗ್ಗೆ ಪರಿಶೀಲಿಸಿ, ತಪ್ಪು ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ರೈತ ಸಂಘ ಆಗ್ರಹಿಸಿದೆ. ಕುಮಾರ್ ಅವರ ಕುಟುಂಬಕ್ಕೆ ಅಗತ್ಯ ನೆರವು ಒದಗಿಸುವುದರ ಜೊತೆಗೆ, ಇಂತಹ ಘಟನೆಗಳು ಮರುಕಳಿಸದಂತೆ ಅನಧಿಕೃತ ಸಾಲ ವ್ಯವಹಾರ ಮತ್ತು ಕಿರುಕುಳದ ಬಗ್ಗೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸಂಘ ಒತ್ತಾಯಿಸಿದೆ.

# ಉರ್ದು ಹಬ್ಬದ ಆಚರಣೆ ಪ್ರಸ್ತಾಪಕ್ಕೆ ಕರವೇ ವಿರೋಧ : ಪ್ರಸ್ತಾಪ ಕೈಬಿಡದಿದ್ದರೆ ಮೈಸೂರು ಚಾಮರಾಜನಗರದಲ್ಲಿ ಉಗ್ರ ಹೋರಾಟ: ಆರ್. ಮೋಹನ್ ಎಚ್ಚರಿಕೆ

• **ಉದಯವಾಹಿನಿ, ಗುಂಡ್ಲುಪೇಟೆ**

ವಿಧಾನಸೌಧದ ಆವರಣದಲ್ಲಿ ಉರ್ದು ಹಬ್ಬ ಆಚರಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂಬ ವಿಚಾರಕ್ಕೆ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ತೀವ್ರ ವಿರೋಧ ವ್ಯಕ್ತಪಡಿಸಿದೆ. ಸರ್ಕಾರ ಕೂಡಲೇ ಪ್ರಸ್ತಾಪವನ್ನ ಕೈಬಿಡದಿದ್ದರೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಹೋರಾಟ ನಡೆಸುವುದಾಗಿ ವೇದಿಕೆಯ ಮೈಸೂರು ಚಾಮರಾಜನಗರ ಜಿಲ್ಲಾಧ್ಯಕ್ಷ ಆರ್. ಮೋಹನ್ ಎಚ್ಚರಿಕೆ ನೀಡಿದ್ದಾರೆ. ಈ ಕುರಿತು ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು. ನಾವು ಯಾವುದೇ ಭಾಷೆಯ ವಿರೋಧಿಗಳಲ್ಲ. ಆದರೆ ರಾಜ್ಯದ ಆಡಳಿತ, ಸಾರ್ವಜನಿಕ ಬದುಕು ಹಾಗೂ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕನ್ನಡದ ಸಾರ್ವಭೌಮತೆಗೆ ಧಕ್ಕೆಯಾಗಬಾರದು. 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ಆಶಯದೊಂದಿಗೆ ಸರ್ಕಾರ ಕನ್ನಡದ ಸ್ಥಾನಮಾನವನ್ನ ಎತ್ತಿಹಿಡಿಯಬೇಕು ಎಂದು ಆಗ್ರಹಿಸಿದರು. ಹಿಂದಿನ ಸರ್ಕಾರದ ಅವಧಿಯಲ್ಲಿ ಉರ್ದು ವಾರ್ತೆಗಳ ಪ್ರಸಾರಕ್ಕೆ ಕ್ರಮ ಕೈಗೊಂಡಿದ್ದ ಸಂದರ್ಭದಲ್ಲಿ ಕನ್ನಡಪರ ಸಂಘಟನೆಗಳು ತೀವ್ರವಾಗಿ ವಿರೋಧಿಸಿ ಹೋರಾಟ ನಡೆಸಿದ್ದವು. ಬಳಿಕ ಆ ಕ್ರಮವನ್ನ ಹಿಂಪಡೆಯಲಾಗಿತ್ತು ಎಂದು ನೆನಪಿಸಿದ ಮೋಹನ್, ಇಂತಹ ಬೆಳವಣಿಗೆಗಳು ಮರುಕಳಿಸದಂತೆ ಸರ್ಕಾರ ಎಚ್ಚರ ವಹಿಸಬೇಕು ಎಂದರು. ಆರೋಗ್ಯ ಸಚಿವ ಯು.ಟಿ. ಖಾದರ್ ಅವರು ಸರ್ವಜನಾಂಗದ ನಾಯಕರಾಗಿದ್ದು, ಕನ್ನಡಿಗರಲ್ಲಿ ಅವರ ಬಗ್ಗೆ ಗೌರವವಿದೆ. ಯಾವುದೇ ಸಮುದಾಯ ಅಥವಾ ಭಾಷೆಯ ವಿರುದ್ಧ ಕರವೇ ನಿಲುವು ಹೊಂದಿಲ್ಲ. ಆದರೆ ಕರ್ನಾಟಕದಲ್ಲಿ


ಉದಯವಾಹಿನಿ ಚಿತ್ರ

ಕನ್ನಡಕ್ಕೆ ಸಿಗಬೇಕಾದ ಆದ್ಯತೆಯನ್ನ ಯಾವುದೇ ಕಾರಣಕ್ಕೂ ಕಡೆಗಣಿಸಬಾರದು ಎಂದು ಹೇಳಿದರು. ವಿಧಾನಸೌಧದ ಮುಂದೆಯೇ ಉರ್ದು ಹಬ್ಬ ಆಚರಿಸುವ ಪ್ರಸ್ತಾಪವನ್ನ ಕೂಡಲೇ ಕೈಬಿಟ್ಟು, ಕನ್ನಡದ ಸಾರ್ವಭೌಮತೆಯನ್ನ ಎತ್ತಿಹಿಡಿಯುವ ನಿಲುವನ್ನ ಸರ್ಕಾರ ಪ್ರಕಟಿಸಬೇಕು. ಇಲ್ಲವಾದರೆ ಮೈಸೂರು ಚಾಮರಾಜನಗರ ಜಿಲ್ಲೆಗಳಾದ್ಯಂತ ಹೋರಾಟ ನಡೆಸಬೇಕಾಗುತ್ತದೆ ಎಂದು ಆರ್. ಮೋಹನ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ'' ಎಂಬುದು ಕನ್ನಡಪರ ಸಂಘಟನೆಗಳ ಆಶಯವಾಗಿದ್ದು, ಸರ್ಕಾರ ಈ ವಿಚಾರವನ್ನ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಸೇವ್ ಪೋಸ್ಟ್ ಆಫೀಸ್ ಆಂದೋಲನಕ್ಕೆ ಚಾಲನೆ

• **ಉದಯವಾಹಿನಿ, ಕೆಜಿಎಫ್**

ಮಾರಿಕುಪ್ಪಂನಲ್ಲಿ ಹಲವು ದಶಕಗಳಿಂದ ಸಾರ್ವಜನಿಕ ಸೇವೆ ಸಲ್ಲಿಸುತ್ತಿರುವ ಅಂಚೆ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸುವ ಸಾಧ್ಯತೆಯ ಹಿನ್ನೆಲೆ, ಕಚೇರಿಯನ್ನು ಉಳಿಸಿಕೊಳ್ಳಲು 10ನೇ ವಾರ್ಡ್‌ನ ಸಮಾಜ ಸೇವಕ ನವೀನ್ ಕುಮಾರ್ ನೇತೃತ್ವದಲ್ಲಿ ಸೇವ್ ಪೋಸ್ಟ್ ಆಫೀಸ್ ಆಂದೋಲನಕ್ಕೆ ಚಾಲನೆ ನೀಡಲಾಗಿದೆ.ಮಾರಿಕುಪ್ಪಂ ಅಂಚೆ ಕಚೇರಿಯಲ್ಲಿ ಸಾರ್ವಜನಿಕರ ವ್ಯವಹಾರ ಕಡಿಮೆ ಯಾಗಿದೆ ಎಂಬ ಕಾರಣಕ್ಕೆ ಅಂಚೆ ಇಲಾಖೆಯ ಅಧಿಕಾರಿಗಳು ಕಚೇರಿಯನ್ನು ಬೇರೆಡೆಗೆ ವಿಲೀನಗೊಳಿಸುವ ಅಥವಾ ಸ್ಥಳಾಂತರಿಸುವ ಕುರಿತು ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ. ಇದಕ್ಕೆ ಪ್ರತಿಯಾಗಿ ಸ್ಥಳೀಯ ನಿವಾಸಿಗಳು ಅಂಚೆ ಕಚೇರಿಯಲ್ಲೇ ಖಾತೆ ತೆರೆಯುವ ಮೂಲಕ ಸಾರ್ವಜನಿಕ ವ್ಯವಹಾರವನ್ನು ಹೆಚ್ಚಿಸಲು ಮುಂದಾಗಿದ್ದಾರೆ.

ಆಂದೋಲನದ ಭಾಗವಾಗಿ 500ಕ್ಕೂ ಹೆಚ್ಚು ಹೊಸ ಅಂಚೆ ಖಾತೆಗಳನ್ನು ತೆರೆಯುವ ಗುರಿಯನ್ನು ಹೊಂದಲಾಗಿದ್ದು, ಸ್ಥಳೀಯ ನಿವಾಸಿಗಳು ಅಂಚೆ ಕಚೇರಿಗೆ ಆಗಮಿಸಿ ಖಾತೆ ತೆರೆಯುವ ಪ್ರಕ್ರಿಯೆಯಲ್ಲಿ ಭಾಗವಹಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಸಮಾಜ ಸೇವಕ ನವೀನ್ ಕುಮಾರ್, ಮಾರಿಕುಪ್ಪಂನೊಂದಿಗೆ ಅಂಚೆ ಕಚೇರಿಗೆ ದಶಕಗಳ ನಂಟಿದೆ. ಚಿನ್ನದ ಗಣಿ ಕಾರ್ಯಾರಂಭಗೊಂಡ ಕಾಲದಿಂದಲೂ ಗಣಿ ಕಾರ್ಮಿಕರು ಹಾಗೂ ಅವರ ಕುಟುಂಬಗಳಿಗೆ ಅನುಕೂಲವಾಗುವಂತೆ ಅಂಚೆ ಸೇವೆ ಒದಗಿಸುವ ಉದ್ದೇಶದಿಂದ ಇಲ್ಲಿ ಅಂಚೆ ಕಚೇರಿ ಆರಂಭಿಸಲಾಗಿತ್ತು. ಹಲವು ವರ್ಷಗಳಿಂದ ಈ ಭಾಗದ ಜನರ ಅಗತ್ಯಗಳಿಗೆ ಸ್ಪಂದಿಸುತ್ತಾ ಬಂದಿರುವ ಅಂಚೆ ಕಚೇರಿಯನ್ನು ಯಾವುದೇ ಕಾರಣಕ್ಕೂ ಇಲ್ಲಿಂದ ಬೇರೆಡೆಗೆ ಸ್ಥಳಾಂತರಿಸಲು ಅವಕಾಶ ನೀಡುವುದಿಲ್ಲ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಜನರ ಸಹಕಾರ**

**ಮಾರಿಕುಪ್ಪಂ ಅಂಚೆ ಕಚೇರಿಯೊಂದಿಗೆ ಇಲ್ಲಿನ ನಿವಾಸಿಗಳಿಗೆ ಅವಿನಾಭಾವ ಸಂಬಂಧವಿದೆ. ಅಂಚೆ ಕಚೇರಿ ಬೇರೆಡೆಗೆ ಹೋದರೆ ವೃದ್ಧರು, ಕಾರ್ಮಿಕರು ಹಾಗೂ ಸಾಮಾನ್ಯ ಜನರಿಗೆ ತೊಂದರೆಯಾಗಲಿದೆ. ಆದ್ದರಿಂದ ಅಂಚೆ ಕಚೇರಿಯನ್ನು ಉಳಿಸಿಕೊಳ್ಳಲು ಜನರ ಸಹಕಾರದೊಂದಿಗೆ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.**

# ಆಶ್ರಯ ಯೋಜನೆಯ ಕೋಟ್ಯಂತರ ಮೌಲ್ಯದ: ಜಮೀನಿಗೆ ಅಕ್ರಮ ಖಾತೆ

• **ಉದಯವಾಹಿನಿ,** ಹನೂರು

ಹನೂರು ಪಟ್ಟಣದ ಹುಲ್ಲೇಪುರ ಆಶ್ರಯ ಯೋಜನೆಯ ಕೋಟ್ಯಂತರ ರೂ. ಮೌಲ್ಯದ ಸುಮಾರು 70 ರಿಂದ 80 ಮೀಸಲು ಸೈಟುಗಳು ಅಕ್ರಮವಾಗಿ ಖಾತೆಯಾಗಿದ್ದು, ಸರ್ಕಾರ ಕೂಡಲೇ ಅಕ್ರಮ ಖಾತೆಗಳನ್ನು ರದ್ದುಪಡಿಸಿ ಮೀಸಲು ಸೈಟುಗಳನ್ನು ಸರ್ಕಾರದ ಸುಪರ್ದಿಗೆ ಪಡೆದುಕೊಳ್ಳಬೇಕು ಎಂದು ಸಾಮಾಜಿಕ ಹೋರಾಟಗಾರ ಕುಮಾರ ದೊರೆ ಆಗ್ರಹಿಸಿದ್ದಾರೆ. ಹನೂರು ಪಟ್ಟಣದಲ್ಲಿ ಇಂದು ನಡೆದ ಪ್ರಜಾಸೇವಾ ಆಂದೋಲನ ಸಭೆಯಲ್ಲಿ ಸಚಿವ ಪುಟ್ಟರಂಗಶೆಟ್ಟಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಆಶ್ರಯ ಯೋಜನೆಯ ಸರ್ವೆ ನಂಬರ್ 145/ಎ ಹಳ್ಳಮತ್ತು 145/ಬಿ ಯಲ್ಲಿನ ಎಲ್.ಎಫ್ ರಸ್ತೆ ವ್ಯಾಪ್ತಿಯಲ್ಲಿ ಸುಮಾರು 35 ರಿಂದ 40 ಸೈಟು ಆಸ್ತಿಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಇದನ್ನು ಕಾನೂನಾತ್ಮಕವಾಗಿ ಇನ್ನೂ ಬಗೆಹರಿಸಿಲ್ಲ ಎಂದು ಆರೋಪಿಸಿದರು.

ಇದೇ ವೇಳೆ ಮಾತನಾಡಿದ ಶಾಸಕ ಎಂ.ಆರ್. ಮಂಜುನಾಥ್ ಅವರು, ಕೊಳ್ಳೇಗಾಲ ಉಪವಿಭಾಗದಲ್ಲಿ ಈ ಹಿಂದೆ ಇದ್ದ ಎ.ಸಿ ಮಹೇಶ್ ಅವರು ಈ ಕುರಿತು ತನಿಖೆ ಕೈಗೊಂಡಿದ್ದರು. ಅವರು ವರ್ಗಾವಣೆಯಾದ ನಂತರ ಈಗ ಇರುವ ಎ.ಸಿ ದಿನೇಶ್ ಕುಮಾರ್ ಮೀನಾ ತನಿಖೆ ಕೈಗೊಂಡು ವರದಿಯ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ದಿನಾಂಕ :- 26-11-2025 ರಂದು ನೀಡಿರುವ ವರದಿಯ ಬಗ್ಗೆ ತನಿಖೆ ಕೈಗೊಂಡಿಲ್ಲ. ಮುಂದಿನ ದಿನಗಳಲ್ಲಿ ತನಿಖಾ ತಂಡ ರಚನೆ ಮಾಡಿ, ಎಲ್.ಎಫ್ ರಸ್ತೆ ಆಶ್ರಯ ಯೋಜನೆ ಅಡಿ ಸೈಟುಗಳು ಹಂಚಿಕೆಯಾಗಿರುವ ಬಗ್ಗೆ ಕಾನೂನಾತ್ಮಕವಾಗಿ ಏನು ಮಾಡಬಹುದು ಎಂದು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.


ಉದಯವಾಹಿನಿ ಚಿತ್ರ

# ಈ ಸರ್ಕಾರದಲ್ಲಿ ನಿರೀಕ್ಷಗೆ ತಕ್ಕಂತೆ ಕೆಲಸ ಮಾಡಲು ಆಗುತ್ತಿಲ್ಲ

## ಚುನಾವಣೆಯ ಸಂದರ್ಭದಲ್ಲಿ ಮಾತ್ರ ರಾಜಕೀಯ ಮಾಡಬೇಕು. ಉಳಿದ ಸಮಯದಲ್ಲಿ ಪಕ್ಷ, ಬೇಧ ಮರೆತು ಗ್ರಾಮದ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು

• **ಉದಯವಾಹಿನಿ, ಕೆ.ಆರ್.ಪೇಟೆ**

ಗುತ್ತಿಗೆದಾರರು ಯಾವುದೇ ಕಾರಣಕ್ಕೂ ಕಾಮಗಾರಿಯಲ್ಲಿ ರಾಜಿ ಮಾಡಿಕೊಳ್ಳದೆ ಗುಣಮಟ್ಟದ ಕಾಮಗಾರಿ ಮಾಡಬೇಕು 80 ಲಕ್ಷ ಜನರ ತೆರಿಗೆ ಹಣ, ಅದನ್ನು ಗುಣಮಟ್ಟದಿಂದ ಭದ್ರವಾಗಿ, ಗಟ್ಟಿಮುಟ್ಟಾಗಿ ಸೇತುವೆಯನ್ನು ನಿರ್ಮಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

1 ಸುಮಾರು 80 ಲಕ್ಷ ರೂ ವೆಚ್ಚದ ಸೇತುವೆ ನಿರ್ಮಾಣ

2 ಮಂಜು ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು

3 ಗ್ರಾಮಸ್ಥರ ಬಹುದಿನದ ಬೇಡಿಕೆ ಈಡೇರಿದಂತಾಗಿದೆ

ಇ-ಪೇಪರ್‌ಪ್ರವೇಶ ಅವರು ತಾಲ್ಲೂಕಿನ ಶೀಳನೆರೆ ಗ್ರಾಮದಿಂದ ಕೆ.ಆರ್.ಪೇಟೆ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಬಹುನಿರೀಕ್ಷಿತ ಸಂಪರ್ಕ ರಸ್ತೆಯ ಹಳ್ಳಕ್ಕೆ ಲೋಕೋಪಯೋಗಿ ಇಲಾಖೆಯ ಅನುದಾನದಲ್ಲಿ ಸುಮಾರು 80 ಲಕ್ಷ ರೂ ವೆಚ್ಚದ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು. ಕಳೆದ ಹಲವು ವರ್ಷಗಳಿಂದ ಮಳೆಗಾಲದಲ್ಲಿ ಶೀಳನೆರೆ ಗ್ರಾಮಸ್ಥರು ಕೆ.ಆರ್.ಪೇಟೆಗೆ ಬರಲು ಹರಸಾಹಸ ಪಡುತ್ತಿದ್ದರು ಹಳ್ಳ ದಾಟಲು ಪರದಾಡುವ ಪರಿಸ್ಥಿತಿ ಇತ್ತು. ಈಗ ಈ ಸೇತುವೆ ನಿರ್ಮಾಣದಿಂದ ಗ್ರಾಮಸ್ಥರ ಬಹುದಿನದ ಬೇಡಿಕೆ ಈಡೇರಿದಂತಾಗಿದೆ


ಉದಯವಾಹಿನಿ ಚಿತ್ರ

ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ಗಳು ಪ್ರತಿದಿನ ಸ್ಥಳಕ್ಕೆ ಭೇಟಿ ನೀಡಿ ಗುಣಮಟ್ಟ ಪರಿಶೀಲಿಸಬೇಕು ಎಂದು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರ ಎನ್.ಆರ್.ರಮೇಶ್ ಅವರಿಗೆ ಸಲಹೆ ನೀಡಿದರು.

ಗ್ರಾಮಸ್ಥರು ಚುನಾವಣೆಯ ಸಂದರ್ಭದಲ್ಲಿ ಮಾತ್ರ ರಾಜಕೀಯ ಮಾಡಬೇಕು. ಉಳಿದ ಸಮಯದಲ್ಲಿ ಪಕ್ಷ, ಬೇಧ ಮರೆತು ಗ್ರಾಮದ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು. ಈ ಸೇತುವೆ ನಿಮ್ಮದು, ಇದನ್ನು ಬೇಗ ಪೂರ್ಣಗೊಳಿಸಲು ಸಹಕರಿಸಿ ಎಂದು ಮನವಿ ಮಾಡಿದರು.

ನಾನೊಬ್ಬ ಬಡ ರೈತನ ಮಗ ನಾನು ಸಾಮಾನ್ಯರಲ್ಲಿ ಒಬ್ಬ ಸದಾ ಸಾರ್ವಜನಿಕರ ಸಂಪರ್ಕದಲ್ಲಿರುವ ವ್ಯಕ್ತಿ ನಾನು ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ನನ್ನ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಆಗಲಿಲ್ಲ ಕಳೆದ ಚುನಾವಣೆಯಲ್ಲಿ ನೀವು ನನ್ನನ್ನು ದೊಡ್ಡ ಅಂತರದಿಂದ ಗೆಲ್ಲಿಸಿದ್ದೀರಿ ನಾನು ನಿಮ್ಮ ಸೇವೆ ಮಾಡುವ ಸೇವಕ ನಿಮ್ಮ ಸೇವೆಗಾಗಿ ಹಗಲಿರುಳು ಓಡಾಡಿದೆ. ಆದರೆ ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ನನ್ನ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಆಗಲಿಲ್ಲ. ನಾನು ಕೇಳಿದ ಅನುದಾನ ಸರಿಯಾಗಿ ಬರಲಿಲ್ಲ. ನಾನು ಹಾಕಿದ ಯೋಜನೆಗಳಿಗೆ ತಡೆ ಆಯಿತು. ಕ್ಷೇತ್ರದ ಅಭಿವೃದ್ಧಿಗೆ ನಾನು ಅಂದುಕೊಂಡಿದ್ದನ್ನು ಮಾಡಲು ಈ ಸರ್ಕಾರ ಬಿಡಲಿಲ್ಲ. ಈ ನೋವನ್ನು ನಾನು ಇಂದು ನಿಮ್ಮ ಮುಂದೆ ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದೇನೆ.

ನನಗೆ ರಾಜಕೀಯ ನೆಲೆ ನೀಡಿದ ಈ ಶೀಳನೆರೆಯ ಪವಿತ್ರ ನೆಲದಲ್ಲಿ ನಿಂತು ಮಾತು ಕೊಡುತ್ತಿದ್ದೇನೆ ಎಂದು ಶಾಸಕ ಹೆಚ್.ಟಿ. ಮಂಜು ಭರವಸೆ ನೀಡಿದರು. ಈ ಸಂದರ್ಭದಲ್ಲಿ ತಾ.ಪಂ. ಮಾಜಿ ಸದಸ್ಯ ಹುಲ್ಲೇಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಟಿ.ಬಲದೇವ್, ಪುರಸಭಾ ಮಾಜಿ ಸದಸ್ಯ ಹೆಚ್.ಡಿ.ಅಶೋಕ್, ವಿಜಯಕುಮಾರ್ ಸೇರಿದಂತೆ ಶೀಳನೆರೆ ಗ್ರಾಮದ ಹಿರಿಯರು, ಯುವಕರು, ಮಹಿಳೆಯರು ಹಾಜರಿದ್ದರು.

> **2028ಕ್ಕೆ ಮತ್ತೊಮ್ಮೆ ನಾನೇ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ನಿಮ್ಮ ಮುಂದೆ ಬರುವುದು ಖಚಿತ. ಇದರಲ್ಲಿ ಯಾವುದೇ ಅನುಮಾನ ಬೇಡ. ಕಳೆದ ಬಾರಿ ನೀವು ಕೊಟ್ಟ ಆಶೀರ್ವಾದಕ್ಕೆ ನಾನು ಚಿರಋಣಿಯಾಗಿದ್ದೇನೆ ಮತ್ತೊಂದು ಅವಧಿಗೆ ನೀವು ಆಶೀರ್ವಾದ ಮಾಡಿದರೆ, ನಿಮ್ಮ ಈ ಋಣವನ್ನು ತೀರಿಸಲು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.-ಶಾಸಕ ಹೆಚ್.ಟಿ.ಮಂಜು**

**ಹಮ್ಮು-ಬಿಮ್ಮು ಇಲ್ಲ.**

**ನಾನು ದೊಡ್ಡ ಶ್ರೀಮಂತರ ಮನೆತನದಿಂದ ಬಂದವನಲ್ಲ. ನಾನೊಬ್ಬ ಬಡ ರೈತನ ಮಗ. ನನಗೆ ಶಾಸಕನೆಂಬ ಯಾವುದೇ ಹಮ್ಮು-ಬಿಮ್ಮು ಇಲ್ಲ. ಶಾಸಕ ಸ್ಥಾನ ನೀವು ಕೊಟ್ಟ ಅಧಿಕಾರ ಅದು ನಿಮಗಾಗಿ ಮೀಸಲಿರುತ್ತದೆ ನೀವು ಯಾವಾಗ ಬೇಕಾದರೂ ನನ್ನನ್ನು ಬೇಟಿಯಾಗಬಹುದು.**

# ಅಂಗವಿಕಲರಿಗೆ ಸ್ಪಂದಿಸದ ಹೃದಯಹೀನ ಸರ್ಕಾರ: ಆರ್.ಅಶೋಕ ಟೀಕೆ

• **ಉದಯವಾಹಿನಿ, ರಾಮನಗರ**

ಹೃದಯಹೀನವಾಗಿರುವ ರಾಜ್ಯ ಸರ್ಕಾರಕ್ಕೆ ಅಂಗವಿಕಲರ ಅಹವಾಲು ಕೇಳುತ್ತಿಲ್ಲ. ತಮ್ಮ ನ್ಯಾಯಯುತ ಬೇಡಿಕೆಗಳು ನ್ಯಾಯಯುತವಾಗಿವೆ. ಕೂಡಲೇ ಅವರ ಸೇವೆ ಕಾಯಂ ಜೊತೆಗೆ ಮಾಸಾಶನವನ್ನು 5 ಸಾವಿರಕ್ಕೆ ಏರಿಕೆ ಮಾಡಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದರು. ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ಅಂಗವಿಕಲರನ್ನು ಭೇಟಿಯಾಗಿ ಅಹವಾಲು ಆಲಿಸಿ ಮಾತನಾಡಿದ ಅವರು, ಬಿಜೆಪಿ ಅವಧಿಯಲ್ಲಿ ನಾನು ಕಂದಾಯ ಸಚಿವನಾಗಿದ್ದಾಗ 700 ಇದ್ದ ಮಾಸಾಶನವನ್ನು 1,400ಕ್ಕೇ ಏರಿಸಿದ್ದೆ. ಆಸಿಡ್ ದಾಳಿಗೊಳಗಾದ ಹೆಣ್ಣುಮಕ್ಕಳಿಗೆ ಮಾಸಿಕ ಮಾಸಾಶನವನ್ನು 3 ಸಾವಿರದಿಂದ 10 ಸಾವಿರಕ್ಕೆ ಹೆಚ್ಚಿಸಿದ್ದೆ ಎಂದರು.

ಬಿಜೆಪಿ ಸರ್ಕಾರವಿರುವ ದೆಹಲಿ ಸರ್ಕಾರವು ಇತ್ತೀಚೆಗೆ ಅಂಗವಿಕಲರ ಮಾಸಾಶನವನ್ನು 5 ಸಾವಿರಕ್ಕೆ ಏರಿಕೆ ಮಾಡಿದೆ. ಪಕ್ಕದ ಆಂಧ್ರಪ್ರದೇಶದಲ್ಲಿ 3 ಸಾವಿರವಿದೆ. ಅದೇ ರೀತಿ ರಾಜ್ಯದಲ್ಲಿ ಏರಿಕೆ ಮಾಡುವ ಮೂಲಕ ಅವರ ಬದುಕಿಗೆ ಆರ್ಥಿಕ ಆಸರೆ ಒದಗಿಸಬೇಕು. ಮೊದಲ ಬಾರಿಗೆ ರಾಜ್ಯದಲ್ಲಿ ಅಂಗವಿಕಲರಿಂದ ದೊಡ್ಡಮಟ್ಟದ ಪ್ರತಿಭಟನೆ ನಡೆಯುತ್ತಿದೆ. ಈ ಕುರಿತು ನಾನು ಡಿ.ಸಿ ಜೊತೆ ಮಾತನಾಡಿದ್ದು, ನೀತಿ ಸಂಹಿತೆ ಇರುವುದರಿಂದ ಬರಲು ಸಾಧ್ಯವಾಗಿಲ್ಲ ಎಂದು ಹೇಳಿದ್ದಾರೆ ಎಂದು ತಿಳಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ತವರು ಜಿಲ್ಲೆಯಲ್ಲಿ ಅಂಗವಿಕಲರು ಧರಣಿ ನಡೆಸುತ್ತಿದ್ದರೂ ಸ್ಪಂದನ ಸಿಕ್ಕಿಲ್ಲ. ರಾಜ್ಯ ಸರ್ಕಾರವು ಹೃದಯ ಇಲ್ಲದ ಬಂಡೆ ಸರ್ಕಾರವಾಗಿದೆ. ಇಷ್ಟೊತ್ತಿಗಾಗಲೇ ಸಿ.ಎಂ ಧರಣಿ ನಿರತರನ್ನು ಭೇಟಿ ಮಾಡಿ ಬೇಡಿಕೆಗೆ ಸ್ಪಂದಿಸಬೇಕಿತ್ತು.

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ 05 ಅಕ್ಟೋಬರ್ 2026


ಮಿನಿ ನ್ಯೂಸ್

ಕಳೆದ ಆಗಸ್ಟ್‌ನಲ್ಲಿ ಸುಮಾರು 41 ಲಕ್ಷ ರೂಪಾಯಿ ಖರ್ಚು ಮಾಡಿ ನಗರದಲ್ಲಿ ಮೂರು ಕಡೆ ಐಟಿಎಂಎಸ್ ಅನ್ನು ಜಾರಿಗೆ ತರಲಾಗಿತ್ತು

# ಸವಾರರಿಗೆ ಬಿಸಿ ಮುಟ್ಟಿಸಿದ ಐಟಿಎಂಎಸ್ ವ್ಯವಸ್ಥೆ

**ಉದಯವಾಹಿನಿ, ಹಾವೇರಿ**

ನಗರದಲ್ಲಿ ರಸ್ತೆ ನಿಯಮಗಳ ಪಾಲನೆಗೆ ಹಾವೇರಿ ಪೊಲೀಸ್ ಇಲಾಖೆ ಜಾರಿಗೆ ತಂದ ಐಟಿಎಂಎಸ್ ವ್ಯವಸ್ಥೆ ಮೂಲಕ ಹಾವೇರಿ ನಗರದ ಮೂರು ಕಡೆ ಸುಮಾರು 6,686 ರಸ್ತೆ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ದಂಡ ಬಿದ್ದಿದೆ. ಸುಮಾರು 33 ಲಕ್ಷ ರೂಪಾಯಿ ದಂಡವನ್ನು ವಾಹನ ಸವಾರರಿಗೆ ಹಾಕಲಾಗಿದೆ. ಇದರಿಂದ ನಗರದಲ್ಲಿ ವಾಹನ ಚಾಲನೆ ಮಾಡುವವರಿಗೆ ರಸ್ತೆ ನಿಮಯಗಳ ಬಗ್ಗೆ ಸ್ವಲ್ಪ ಜಾಗ್ರತೆ ಬರಲಾರಂಭಿಸಿದೆ. ದಿನದಿಂದ ದಿನಕ್ಕೆ ರಸ್ತೆ ನಿಯಮ ಉಲ್ಲಂಘನೆ ಪ್ರಕರಣಗಳು ಕಡಿಮೆಯಾಗುತ್ತಿವೆ.

**1.** ಗಂಭೀರಗಾಯ ಪ್ರಕರಣಗಳ ಸಂಖ್ಯೆ ಇಳಿಕೆ
**2.** 33 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ
**3.** ಎಐ ತಂತ್ರಜ್ಞಾನದ ಐಟಿಎಂಎಸ್ ಕ್ಯಾಮರಾ

ಹಾವೇರಿ ನಗರದ ಹೊಸಮನಿ ಸಿದ್ದಪ್ಪ ವೃತ್ತ, ಕಾಗಿನೆಲ್ ಕ್ರಾಸ್, ಮತ್ತು ಕೆಇಬಿ ವೃತ್ತದಲ್ಲಿ ಮಾತ್ರ ಎಐ ತಂತ್ರಜ್ಞಾನದ ಕ್ಯಾಮರಾ ಅಳವಡಿಸಲಾಗಿದೆ. ಆದರೆ ನಗರದ ವಿವಿಧ ವೃತ್ತಗಳಲ್ಲಿ ಐಟಿಎಂಎಸ್ ಕ್ಯಾಮರಾ ಅಳಡಿಕೆಯಿಲ್ಲಾ. ಜೆಪಿ ವೃತ್ತ, ಮಹಾತ್ಮ ಗಾಂಧಿ ವೃತ್ತ, ಜೆ.ಹೆಚ್. ಪಟೇಲ್ ವೃತ್ತ, ಸುಭಾಸ್ ಸರ್ಕಲ್, ವಾಲ್ಮಿಕಿ ವೃತ್ತ ಸೇರಿದಂತೆ ಪ್ರಮುಖ ವೃತ್ತಗಳಲ್ಲಿ ಎಐ ತಂತ್ರಜ್ಞಾನದ ಕ್ಯಾಮರಾ ಅಳವಡಿಕೆ ಮಾಡಿಲ್ಲಾ.

ಪರಿಣಾಮ ಬೈಕ್ ಸವಾರರು ಕದ್ದುಮುಚ್ಚಿ ಎಐ ಕ್ಯಾಮರಾವಿಲ್ಲದ ಜಾಗಗಳ ಮೂಲಕ ಸಂಚರಿಸುತ್ತಿದ್ದಾರೆ. ಅಲ್ಲದೆ ಆ ಮೂಲಕ ರಸ್ತೆ ನಿಯಮ ಉಲ್ಲಂಘನೆ ಮಾಡುತ್ತಿದ್ದಾರೆ. ನಗರದ ಪ್ರಮುಖ ವೃತ್ತಗಳಲ್ಲಿ ಎಐ ತಂತ್ರಜ್ಞಾನದ ಐಟಿಎಂಎಸ್ ಕ್ಯಾಮರಾ ಅಳವಡಿಸಿದರೇ ಅತಿಹೆಚ್ಚು ಜನ ರಸ್ತೆ ನಿಮಯ ಪಾಲಿಸುವುದರಲ್ಲಿ ಎರಡು ಮಾತಿಲ್ಲಾ ಎನ್ನುತ್ತಿದ್ದಾರೆ ವಾಹನ ಸವಾರರು. ಸದ್ಯ ಎಐ ಇರುವ ಮಾರ್ಗ ಬದಲಿಸಿ ಅನ್ಯಮಾರ್ಗಗಳಲ್ಲಿ ಓಡಾಡಲು ವಾಹನ ಸವಾರರಿಗೆ ಅವಕಾಶ ಇದೆ. ಉಳಿದ ಮಾರ್ಗಗಳಲ್ಲಿ ಸಹ ಎಐ ತಂತ್ರಜ್ಞಾನದ ಐಟಿಎಂಎಸ್ ಕ್ಯಾಮರಾ ಅಳವಡಿಸಿದರೆ ವಾಹನ ಸವಾರರು ವಾಮಮಾರ್ಗ ಅನುಸರಿಸುವ ಮಾತೇ ಇಲ್ಲಾ ಎನ್ನುತ್ತಿದ್ದಾರೆ ಸ್ಥಳೀಯರು.


ಉದಯವಾಹಿನಿ ಚಿತ್ರ

218 ಪ್ರಕರಣಗಳಲ್ಲಿ ವಾಹನ ಚಾಲಕರು ಸುಮಾರು 1 ಲಕ್ಷದ ಒಂಬತ್ತು ಸಾವಿರ ರೂಪಾಯಿ ದಂಡದ ಹಣವನ್ನು ಸಂಬಂಧಪಟ್ಟ ಠಾಣೆಯಲ್ಲಿ ಕಟ್ಟಿದ್ದಾರೆ. ಆನಲೈನ್‌ನಲ್ಲಿ 1,972 ನೋಟಿಸ್‌ಗಳನ್ನು ನಾವು ನೀಡಿದ್ದೇವೆ. ಜುಲೈ ತಿಂಗಳ 22 ರಿಂದ ಐಟಿಎಂಎಸ್ ಟ್ರಯಲ್ ಕಂ ಜಾಗೃತಿ ರೂಪದಲ್ಲಿ ನಡೆಯುತ್ತಿದೆ

– ಯಶೋಧಾ ವಂಟಗೋಡಿ, ಎಸ್ಪಿ

### ಹೆಲ್ಮೆಟ್ ಧರಿಸುವವರ ಸಂಖ್ಯೆ ಏರುತ್ತಿದೆ

**ಮೊದಲು ತಲೆಗೆ ಪೆಟ್ಟು ಬಿದ್ದು ರಕ್ತಸ್ರಾವ ಅಧಿಕವಾಗಿ ಬೈಕ್ ಸವಾರರು ಗಂಭೀರವಾಗಿ ಗಾಯಗೊಳ್ಳುತ್ತಿದ್ದರು. ಎಷ್ಟು ಜನ ರಸ್ತೆ ಮಧ್ಯದಲ್ಲಿ ಚಿಕಿತ್ಸೆ ವೇಳೆ ಮೃತಪಟ್ಟಿದ್ದು ಉಂಟು. ಆದರೆ ಐಟಿಎಂಎಸ್ ಅಳವಡಿಸಿದ ನಂತರ ನಗರದಲ್ಲಿ ಹೆಲ್ಮೆಟ್ ಹಾಕಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ.**

ಹಾವೇರಿಯಲ್ಲಿ ಐಟಿಎಂಎಸ್ ಜಾರಿಗೆ ತರುವ ಮುನ್ನು ಸಾಕಷ್ಟು ಪ್ರಮಾಣ ಅಪಘಾತಗಳಾಗುತ್ತಿದ್ದವು. ಅಲ್ಲದೆ ಬೈಕ್ ಸವಾರರಿಗೆ ತಲೆಗೆ ಪೆಟ್ಟು ಬಿದ್ದು ಗಂಭೀರವಾಗಿ ಗಾಯಗೊಳ್ಳುತ್ತಿದ್ದರು. ಆದರೆ ಈಗ ಈ ರೀತಿಯ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ ಎನ್ನುತ್ತಿದ್ದಾರೆ ಹಾವೇರಿ ಜಿಲ್ಲೆಯ ಖಾಸಗಿ ಆಸ್ಪತ್ರೆಗಳ ವೈದ್ಯರು. ಅಲ್ಲದೆ ಬೈಕ್‌ನಿಂದ ಬಿದ್ದರು ತಲೆ ರಕ್ಷಣೆಗೆ ಹೆಲ್ಮೆಟ್ ಇರುವ ಕಾರಣ ಗಂಭೀರ ಗಾಯಗಳಾಗುವ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ ಎನ್ನುತ್ತಾರೆ ವೈದ್ಯರು. ಈ ಮಧ್ಯೆ ಹಾವೇರಿ ನಗರದಲ್ಲಿ ಸರಗಳ್ಳತನ ಮನೆಕಳ್ಳತನ ಸೇರಿದಂತೆ ವಿವಿಧ ಅಪರಾಧ ಪ್ರಕರಣಗಳಲ್ಲಿ ಭೇದಿಸಲು ಪತ್ತೆಹಚ್ಚಲು ಐಟಿಎಂಎಸ್ ಸಹಾಯಕಾರಿಯಾಗಿದೆ.

ಈ ಕುರಿತಂತೆ ಮಾತನಾಡಿದ ಹಾವೇರಿ ಎಸ್ಪಿ ಯಶೋಧಾ ವಂಟಗೋಡಿ, "ಜಿಲ್ಲೆಯಲ್ಲಿ ಇತ್ತೀಚಿನ ಅಂಕಿಅಂಶಗಳ ಪ್ರಕಾರ ಐಟಿಎಂಎಸ್ ಅಳವಡಿಸಿದ ನಂತರ ಸುಮಾರು 6,686 ಪ್ರಕರಣಗಳಲ್ಲಿ ವಾಹನ ಚಾಲಕರಿಗೆ ದಂಡ ಹಾಕಲಾಗಿದೆ. ಈ 6,686 ಪ್ರಕರಣಗಳಲ್ಲಿ ವಾಹನ ಚಾಲಕರಿಗೆ 33 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ.


ಉದಯವಾಹಿನಿ ಚಿತ್ರ

## ಜಂಗಳಿಕೇರಿ ಕೆರೆಯಿಂದ ಹೊಲದ ರಸ್ತೆ ನಿರ್ಮಿಸಲು ಆಗ್ರಹ

**ಉದಯವಾಹಿನಿ, ಲಕ್ಷ್ಮೇಶ್ವರ**

ಪಟ್ಟಣದ ಜಂಗಳಿಕೇರಿ ಕೆರೆಯಿಂದ ಓದುನವರ ಹೊಲದವರೆಗಿನ ರಸ್ತೆಯನ್ನು ದುರಸ್ತಿ ಕಾರ್ಯ ಮಾಡಬೇಕು. ಎಂದು ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘದ ಜಿಲ್ಲಾ ಘಟಕದ ಗೌರವಾಧ್ಯಕ್ಷ ಟಾಕಪ್ಪ ಸಾತಪುತೆ ಅವರ ನೇತೃತ್ವದಲ್ಲಿ ರೈತರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಂಜುಳಾ ಹಕಾರಿ ಅವರಿಗೆ ಮನವಿ ಸಲ್ಲಿಸಿದರು. ರೈತರು ಪ್ರತಿದಿನ ಜಂಗಳಕೇರಿ ಕೆರೆಯ ರಸ್ತೆ ಮೂಲಕ ಎತ್ತು, ಚಕ್ಕಡಿ, ಟ್ರಾಕ್ಟರ್ ಹಾಗೂ ಕೃಷಿ ಸಲಕರಣೆಗಳನ್ನು ಸಾಗಿಸುತ್ತಾರೆ. ಈ ರಸ್ತೆಯು ಸಂಪೂರ್ಣ ಹಾಳಾಗಿದ್ದು, ಎಲ್ಲೆಂದರಲ್ಲಿ ದೊಡ್ಡ ಗಾತ್ರದ ಗುಂಡಿಗಳು ಬಿದ್ದಿವೆ. ಇಡೀ ರಸ್ತೆ ಕಲ್ಲು ಮಣ್ಣುಗಳಿಂದ ಕೂಡಿದ್ದು, ರೈತರು ತಮ್ಮ ಬೆಳೆಗಳನ್ನೂ ಹೊಲದಿಂದ ಸಾಗಿಸಲು ಹರಸಾಹಸ ಪಡುವಂತಾಗಿದೆ. ರಸ್ತೆ ನಿರ್ಮಿಸುವಂತೆ ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಅಧಿಕಾರಿಗಳು ಕ್ರಮ ವಹಿಸುತ್ತಿಲ್ಲ ಎಂದು ಆರೋಪಿಸಿದರು. ಮಳೆಗಾಲದಲ್ಲಿ ಮಳೆಯ ನೀರು ರಸ್ತೆಯ ಮೇಲೆ ಹರಿಯುವ ಕಾರಣ ಕಚ್ಚಾ ರಸ್ತೆ ಮತ್ತಷ್ಟು ಹದಗೆಡುತ್ತದೆ. ರಸ್ತೆಯ ಎರಡೂ ಬದಿಗೆ ಚರಂಡಿ ನಿರ್ಮಿಸಬೇಕು. ಕಚ್ಚಾ ರಸ್ತೆಯನ್ನು ಮೆಟ್ಲಿಂಗ್ ಮಾಡಿಸಬೇಕು. ಇಲ್ಲದಿದ್ದರೆ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದರು.

## ಸುಲೇಪೇಟ್ ಠಾಣೆ ಕಾನ್‌ಸ್ಟೇಬಲ್ ಲೋಕಾಯುಕ್ತ ಬಲೆಗೆ

**ಉದಯವಾಹಿನಿ, ಕಲಬುರಗಿ**

ಜಾಮೀನು ಪಡೆದ ವ್ಯಕ್ತಿಯ ಹಾಜರಾತಿ ದಾಖಲಿಸುವ ವಿಚಾರದಲ್ಲಿ 3 ಸಾವಿರ ರೂ. ಲಂಚ ಪಡೆದ ಆರೋಪದ ಮೇಲೆ ಸುಲೇಪೇಟ ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್ ಅನಿಲ್ ಕುಮಾರ್ ಲೋಕಾಯುಕ್ತ ಪೊಲೀಸರು ಬಲೆಗೆ ಬಿದ್ದಿದ್ದಾರೆ. ಚಿಂಚೋಳಿ ತಾಲ್ಲೂಕಿನ ಸುಲೇಪೇಟ ಪೊಲೀಸ್ ಠಾಣೆ ವ್ಯಾಪ್ತಿಯ ಗಡಿಕೇಶ್ವರ ಗ್ರಾಮದ ಚಂದ್ರಕಾಂತ ರಂಗನೂರು ನೀಡಿದ ದೂರಿನ ಆಧಾರದ ಮೇಲೆ ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ. ದೂರುದಾರರು ನ್ಯಾಯಾಲಯದಿಂದ ಜಾಮೀನು ಪಡೆದಿದ್ದು, ಪ್ರತಿ ತಿಂಗಳು ಸುಲೇಪೇಟ ಪೊಲೀಸ್ ಠಾಣೆಯ ತನಿಖಾಧಿಕಾರಿ ಮುಂದೆ ಹಾಜರಾಗುವಂತೆ ನ್ಯಾಯಾಲಯ ಸೂಚಿಸಿತ್ತು ಎನ್ನಲಾಗಿದೆ. ಆದರೆ, ಠಾಣೆಯ ರೈಟರ್ ಆಗಿದ್ದ ಕಾನ್‌ಸ್ಟೇಬಲ್ ಅನಿಲ್ ಕುಮಾರ್ ಅವರು ಪ್ರತಿ ರವಿವಾರ ಠಾಣೆಗೆ ಬಂದು ಹಾಜರಾತಿ ದಾಖಲಿಸಿಕೊಳ್ಳುವಂತೆ ಒತ್ತಾಯಿಸುತ್ತಿದ್ದರು. ಅಲ್ಲದೆ, ಹಾಜರಾಗದಿದ್ದರೆ ಜಾಮೀನು ರದ್ದುಪಡಿಸಿ ಮತ್ತೆ ಜೈಲಿಗೆ ಕಳುಹಿಸುವುದಾಗಿ ಬೆದರಿಕೆ ಹಾಕಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

## ಸಿಇಸಿ ಜ್ಞಾನೇಶ್ ಕುಮಾರ್ ಗಡೀಪಾರಿಗೆ ಕಾಂಗ್ರೆಸ್ ಒತ್ತಾಯ

**ಉದಯವಾಹಿನಿ, ಗದಗ**

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದು, ಅವರನ್ನು ಬಂಧಿಸಬೇಕು ಇಲ್ಲವೇ ಗಡೀಪಾರು ಮಾಡಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.ನಗರದ ಮಹಾತ್ಮಗಾಂಧಿ ವೃತ್ತದಲ್ಲಿ ವೇದಿಕೆ ನಿರ್ಮಿಸಿ, ಸಿಇಸಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು. ಮುಖಂಡರ ಆಕ್ರೋಶಭರಿತ ಭಾಷಣದ ಬಳಿಕ, ಜ್ಞಾನೇಶ ಕುಮಾರ್ ಅವರ ಪ್ರತಿಕೃತಿ ದಹಿಸಲಾಯಿತು.

'ಅಧಿಕಾರಿಗಳನ್ನು ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಕೇಂದ್ರ ಸರ್ಕಾರವು, ಅಲ್ಪಸಂಖ್ಯಾತರು, ಪರಿಶಿಷ್ಟರು, ಹಿಂದುಳಿದವ ಮತದಾನದ ಹಕ್ಕು ಕಸಿಯಲು ಯತ್ನಿಸುತ್ತಿದೆ. ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಮೂಲಕ ಈ ಹುನ್ನಾರವು ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿದೆ' ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದರು.

'ಎಸ್‌ಐಆರ್ ಪ್ರಕ್ರಿಯೆ ಮೂಲಕ ಈಗಾಗಲೇ ಮತದಾರರಪಟ್ಟಿ ಪರಿಷ್ಕರಿಸಲಾಗಿದೆ. ಮತದಾರರ ಪಟ್ಟಿಯಲ್ಲಿರುವ ದೋಷಗಳ ತಿದ್ದುಪಡಿಯೂ ನಡೆಯುತ್ತಿದೆ. ಹೀಗಿದ್ದರೂ, ನಮೂನೆ 7ರ ಅಗತ್ಯವೇನಿತ್ತು ಎಂಬ ಪ್ರಶ್ನೆ ಮೂಡಿದೆ. ಈ ನಮೂನೆಯನ್ನು ಯಾರಾದರೂ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಈ ಅವಕಾಶವನ್ನು ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ವ್ಯಕ್ತಿ ಮೃತಪಟ್ಟಿದ್ದರೆ, ದೇಶ ಬಿಟ್ಟುಹೋಗಿದ್ದರೆ ಅಂತಹವರ ಪರವಾಗಿ ನಮೂನೆ 7 ಸಲ್ಲಿಸಬಹುದಾಗಿದೆ. ಆದರೆ, ಕೆಲವು ವರ್ಗಗಳ ಮತದಾನದ ಹಕ್ಕು ಕಸಿಯಲು ಇದನ್ನು ಬಳಸಿಕೊಳ್ಳಲಾಗುತ್ತಿದೆ. ಇದರಲ್ಲಿನ ಲೋಪ ಸರಿಪಡಿಸುವುದಾಗಿ ಹೇಳಲಾಗುತ್ತಿದ್ದರೂ, ಕೇಂದ್ರ ಸರ್ಕಾರ ಈ ವಿಚಾರದಲ್ಲಿ ನಂಬಿಕೆ ಉಳಿಸಿಕೊಂಡಿಲ್ಲ. ಹಾಗಾಗಿ, ನಮ್ಮ ಮತವನ್ನು ನಾವೇ ರಕ್ಷಿಸಿಕೊಳ್ಳಬೇಕು' ಎಂದು ಕರೆ ನೀಡಿದರು.


ಉದಯವಾಹಿನಿ ಚಿತ್ರ

## ಭಕ್ತ ಸಾಗರದ ನಡುವೆ ಜರುಗಿದ ಜಗದ್ಗುರು ರಥೋತ್ಸವ

**ಉದಯವಾಹಿನಿ, ಬಳ್ಳಾರಿ**

ನಗರದ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದಿಂದ ನಿನ್ನೆ ನಗರದ ಬ್ರೂಸ್ ಪೇಟೆ ಸರ್ಕಲ್ ನ ಬಸವಣ್ಣನ ದೇವಸ್ಥಾನದಿಂದ ಮಠದ ವರೆಗೆ ಹಮ್ಮಿಕೊಂಡಿದ್ದ ಜಗದ್ಗುರು ಕೊಟ್ಟೂರೇಶ್ವರ ರಥೋತ್ಸವ ಭಕ್ತ ಸಾಗರದ ನಡುವೆ ಸಾಗಿಬಂತು.

ಕಾರಣಿಕ ಯುಗಪುರುಷ ಹಾನಗಲ್ಲ ಕುಮಾರ ಶಿವಯೋಗಿಗಳ 159ನೇ, ಕಾಯಕಯೋಗಿ ಡಾ. ಸಂಗನಬಸವ ಮಹಾಸ್ವಾಮಿಗಳವರ 88ನೇ ಜಯಂತ್ಯೋತ್ಸವದ ಅಂಗವಾಗಿ ಕೊಟ್ಟೂರು ಸಂಸ್ಥಾನ ಮಠದ ಕೊಟ್ಟೂರು. ಬಸವಲಿಂಗ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಹಮ್ಮಿಕೊಂಡಿದ್ದ ರಥ ತೇರು ಬೀದಿ ಗಣೇಶಗುಡಿ ಮೂಲಕ ಮಠಕ್ಕೆ ಭಕ್ತರು ಎಳೆತಂದರು.ನಂತರ ಮಠದ ಸಭಾಂಗಣದಲ್ಲಿ ಕಳೆದ ಹತ್ತು ದಿನಗಳಿಂದ ಹಮ್ಮಿಕೊಂಡಿದ್ದ "ಜೀವನದರ್ಶನ"ಪ್ರವಚನದ ಮಂಗಲ ಮಹೋತ್ಸವ ನಡೆಯಿತು. ಇದಕ್ಕೂ ಮುನ್ನ ಕುರುಗೋಡು ತಾಲ್ಲೂಕಿನ ಸೋಮಸಮುದ್ರ ಮತ್ತು ಶ್ರೀಧರಗಡ್ಡೆಯಿಂದ ಬಳ್ಳಾರಿಯ ತಾಳೂರು ರಸ್ತೆ, ದುರ್ಗಮ್ಮ ದೇವಸ್ಥಾನ, ಗಡಗಿ ಚೆನ್ನಪ್ಪ ವೃತ್ತ, ಬೆಂಗಳೂರು ರಸ್ತೆ, ತೇರು ಬೀದಿ ಮೂಲಕ ಶ್ರೀಮಠದವರೆಗೆ ಉಭಯ ಶ್ರೀಗಳ ಭಾವಚಿತ್ರದ ಮೆರವಣಿಗೆಯ ಪಾದಯಾತ್ರೆ ವಿವಿಧ ಜನಪದ ಕಲಾ ತಂಡಗಳು, ಗೊಂಬೆ ಕುಣಿತ ಮೊದಲಾದ ಕಲಾ ತಂಡಗಳಿಂದ, ವಿವಿಧ ಮಠಾಧೀಸರು ವೀರಶೈವ ಲಿಂಗಾಯತ ಸಮಾಜದ ಮುಖಂಡರು ಸೇರಿದಂತೆ ಸಾವಿರಾರು ಭಕ್ತರ ಹೆಜ್ಜೆಯ ಮೂಲಕ ಸಾಗಿ ಬಂತು.

## ಕಣಕಿ ಬಣವಿಗೆ ಬೆಂಕಿ: ಅಪಾರ ಹಾನಿ

**ಉದಯವಾಹಿನಿ, ಚಿತ್ತಾಪುರ**

ತಾಲ್ಲೂಕಿನ ಸಾತನೂರ ಗ್ರಾಮದ ವ್ಯಾಪ್ತಿಯಲ್ಲಿ ಕಣಕಿ ಬಣವಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಅಪಾರ ಪ್ರಮಾಣದ ಹಾನಿ ಸಂಭವಿಸಿದೆ. ಬೆಂಕಿಯ ಕೆನ್ನಾಲಿಗೆಗೆ ಬಣವೆ ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ರೈತರಿಗೆ ಆರ್ಥಿಕ ನಷ್ಟ ಉಂಟಾಗಿದೆ.

ಗ್ರಾಮದ ಕೆ.ನಾಗನಾವ್ ವ್ಯಾಪ್ತಿಯ ಸರ್ವೆ ನಂಬರ್ 314/3 ರ ಉಮೇಶ್ ರಾಜೇಂದ್ರಪ್ಪ ಕರಲ್ ಎಂಬುವರ ಹೊಲದಲ್ಲಿ ಕಣಕಿಕೆ ಬಣವಿಗೆ ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಸ್ಥಳೀಯರು ಆತಂಕಗೊಂಡು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಬಣವೆ ಸುಟ್ಟು ಕರಕಲಾಗಿರುವುದರಿಂದ ರೈತರಿಗೆ ಅಪಾರ ನಷ್ಟ ಉಂಟಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾನಿಯ ಅಂದಾಜು ಕೈಗೊಂಡು ಸೂಕ್ತ ಪರಿಹಾರ ಒದಗಿಸಬೇಕು ಎಂಬುದು ರೈತರ ನಿರೀಕ್ಷೆಯಾಗಿದೆ.

## ಕಂದಕೂರು ಗ್ರಾಮ ಮದ್ಯಮುಕ್ತಗೊಳಿಸಲು ಸಂಕಲ್ಪ

**ಉದಯವಾಹಿನಿ, ಕುಷ್ಟಗಿ**

ಮದ್ಯ ವ್ಯವಸನಿಗಳ ಉಪಟಳ, ಹಾಳಾಗುತ್ತಿರುವ ಯುವಪೀಳಿಗೆ, ಹದಗೆಡುತ್ತಿರುವ ಸಾಮಾಜಿಕ, ಕೌಟುಂಬಿಕ ವ್ಯವಸ್ಥೆಯಿಂದ ರೋಸಿಹೋಗಿರುವ ತಾಲ್ಲೂಕಿನ ಕಂದಕೂರು ಗ್ರಾಮಸ್ಥರು ಇನ್ನು ಮುಂದೆ ಗ್ರಾಮವನ್ನು ಮದ್ಯ ಮುಕ್ತಗೊಳಿಸಿ ಜನರನ್ನು ಸದ್ಭಾವನೆಯತ್ತ ಕೊಂಡೊಯಲು ಸಂಕಲ್ಪಿಸಿದ್ದಾರೆ.ಸಾಮಾಜಿಕ ಕಳಕಳಿ, 'ಮಹಾತ್ಮ'ನ ಆಶಯಕ್ಕೆ ಅನುಗುಣವಾಗಿ ಸಮುದಾಯದ ಈ ನಿರ್ಣಯಕ್ಕೆ ಮನ್ನಣೆಯ ಮುದ್ರೆ ಒತ್ತುವ ನಿಟ್ಟಿನಲ್ಲಿ ಭಾನುವಾರ ಕೊಪ್ಪಳದ ಗಾಂಧಿ ಬಳಗ ಸದ್ಭಾವನೆ ಪಾದಯಾತ್ರೆ ಹಮ್ಮಿಕೊಳ್ಳುವ ಮೂಲಕ ಗ್ರಾಮದತ್ತ ಹೆಜ್ಜೆ ಇಡಲಿದೆ.

ಹಳ್ಳಿಗಳನ್ನು ವ್ಯಸನಮುಕ್ತಗೊಳಿಸುವ ಮೂಲಕ ಸಾಮಾಜಿಕ, ಕೌಟುಂಬಿಕ ವ್ಯವಸ್ಥೆಯ ಶಾಂತಿ, ನೆಮ್ಮದಿಗಾಗಿ ಮುತುವರ್ಜಿವಹಿಸಿರುವ ಗಾಂಧಿ ಬಳಗದ ಸದಾಶಯಕ್ಕೆ ಪೊಲೀಸ್ ಇಲಾಖೆ, ಗ್ರಾಮ ಪಂಚಾಯಿತಿಗಳು ಸಾಥ್ ನೀಡಿವೆ.

ಈಗಾಗಲೇ ತಾಲ್ಲೂಕಿನ ಕೆಲ ಗ್ರಾಮಗಳು ಮದ್ಯ ಮಾರಾಟದಿಂದ ಮುಕ್ತವಾಗಿ ಸರ್ಕಾರದ ಮನ್ನಣೆಗೆ ಪಾತ್ರವಾಗಿವೆ. ಸಮುದಾಯ, ಮಠಾಧೀಶರು, ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವ್ಯಸನಮುಕ್ತ ಹಳ್ಳಿಗಳ ಸಾಲಿಗೆ ತಾಲ್ಲೂಕಿನ ಇನ್ನಷ್ಟು ಗ್ರಾಮಗಳನ್ನೂ ಸೇರಿಸಲು ಇಲ್ಲಿಯ ಸಿಪಿಐ ವಿಶ್ವನಾಥ ಹಿರೇಗೌಡರ ಕಾಳಜಿ ವಹಿಸುತ್ತಿದ್ದರೆ ಈ ವಿಚಾರದಲ್ಲಿ ಚಕಾರ್ ಅಪಸ್ವರ ಎತ್ತದ ಜನಸಮುದಾಯ ಕೂಡ ಸ್ಪಂದಿಸುತ್ತಿರುವುದು ಉತ್ತಮ ಬೆಳವಣಿಗೆ ಎನ್ನಲಾಗುತ್ತಿದೆ. ಮದ್ಯವ್ಯಸನಿಗಳನ್ನು ಮನಪರಿವರ್ತಿಸುವ ಮೂಲಕ ಸರಿದಾರಿಗೆ ತರುವ ಪ್ರಯತ್ನಕ್ಕೆ ಗ್ರಾಮದ ಗೃಹಿಣಿಯರು ಟೊಂಕಕಟ್ಟಿ ನಿಂತಿದ್ದಾರೆ. ಮಹಿಳೆಯರು ಮನಸ್ಸು ಮಾಡಿದರೆ ಗ್ರಾಮಗಳನ್ನು ಹೇಗೆ ಮದ್ಯ ಮಾರಾಟ ಮುಕ್ತವಾಗಿಸಬಹುದು ಎಂಬುದಕ್ಕೆ ಜಿಲ್ಲೆಯ ಅನೇಕ ಗ್ರಾಮಗಳು ಪ್ರೇರಣೆಯಾಗಿವೆ. ಗಾಂಧಿ ಬಳಗ ಮತ್ತು ಪೊಲೀಸ್ ಇತರೆ ಇಲಾಖೆಗಳ ಅಧಿಕಾರಿಗಳು ಗ್ರಾಮದ ಹಿರಿಯರ ಆಶಯಕ್ಕೆ ಕೈಜೋಡಿಸಿದ್ದಾರೆ.


ಉದಯವಾಹಿನಿ ಚಿತ್ರ

## ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆ ಕೂಡಲೇ ನಿಲ್ಲಿಸಿ

**ಉದಯವಾಹಿನಿ, ಕಲಬುರಗಿ**

ಕರ್ನಾಟಕದಲ್ಲಿ ಎಸ್‌ಐಆರ್ ನಿಲ್ಲಿಸಿ ಫಾರ್ಮ್ 7 ದುರುಪಯೋಗದ ಬಗ್ಗೆ ನಿಷ್ಪಕ್ಷಪಾತತನಿಖೆ ನಡೆಸುವಂತೆ ಎಸ್‌ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ ಆರ್ ಕೆ ವೀರಭದ್ರಪ್ಪ ಆಗ್ರಹಿಸಿದ್ದಾರೆ.



ಅವೈಜ್ಞಾನಿಕ ಮತ್ತುಅಪ್ರಜಾತಾಂತ್ರಿಕಎಸ್ ಐ ಆರ್ ಪ್ರಕ್ರಿಯೆಯನ್ನು ಬಳಸಿಕೊಂಡು ಅರ್ಹ ಮತದಾರರನ್ನು ಅಳಿಸಿ ಹಾಕುವ ಪಿತೂರಿರಾಜ್ಯದಲ್ಲಿ ನಡೆದಿರುವುದು ಅತ್ಯಂತಆತಂಕಕಾರಿ ಬೆಳವಣಿಗೆಯಾಗಿದೆ.ಅನರ್ಹ ಮತ್ತು ಸಂಶಯಾಸ್ಪದ ಮತದಾರರನ್ನುತೆಗೆದುಹಾಕಲು ಅವಕಾಶ ನೀಡುವ ಫಾರ್ಮ್ 7ರ ಮೂಲಕ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ, ಅರ್ಹಮತದಾರರನ್ನುಗುರಿಯಾಗಿ ಸಲಾಗಿದೆ.ಮತದಾರರ ಮುದ್ರಿತ ವಿವರಗಳುಳ್ಳ ಫಾರ್ಮ್ 7ನ್ನು, ಸಾವಿರಾರು ಸಂಖ್ಯೆಯಲ್ಲಿ, ಅರ್ಜಿದಾರರಿಗೂ ಸರಿಯಾದ ಮಾಹಿತಿ ನೀಡದೆ ಬಿಜೆಪಿಯು ಸಲ್ಲಿಸಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಬಿಜೆಪಿ ಮತ್ತುಚುನಾವಣಾಆಯೋಗ ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತಿವೆ ಎಂಬ ಆರೋಪಕ್ಕೆಇದು ಸಮರ್ಥನೆ ನೀಡುವಂತಿದೆ.ಈ ಹಿನ್ನೆಲೆಯಲ್ಲಿರಾಜ್ಯದ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ಅಮಾ ನತ್ತಿನಲ್ಲಿಡಬೇಕು, ಸಲ್ಲಿಕೆಯಾದ ಫಾರ್ಮ್ 7ರ ಕುರಿತುತನಿಖೆಯಾಗಬೇಕು ಮತ್ತುತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

## ಅಭಿವೃದ್ಧಿ ನಿಗಮಗಳಿಗೆ ಬಿಡಿಗಾಸು: ರಘು ಕೌಟಿಲ್ಯ

**ಉದಯವಾಹಿನಿ, ಕಲಬುರಗಿ**

ಹಿಂದುಳಿದ ವರ್ಗಗಳ ಚಾಂಪಿಯನ್ ಎಂದು ಹೇಳಿಕೊಳ್ಳುವ ರಾಜ್ಯ ಸರ್ಕಾರ ಒಬಿಸಿ ಸಮುದಾಯದ ಅಭಿವೃದ್ಧಿಗಾಗಿ ಸ್ಥಾಪಿಸಲಾದ ವಿವಿಧ ಸಮುದಾಯಗಳ ಅಭಿವೃದ್ಧಿ ನಿಗಮಗಳಿಗೆ ಬಿಡಿಗಾಸು ನೀಡಿದೆ. ಇದರಿಂದ ಅವರ ಅಭಿವೃದ್ಧಿ ಸಾಧ್ಯವೇ?' ಎಂದು ವಿಧಾನಪರಿಷತ್ ಸದಸ್ಯ, ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಆರ್. ರಘು ಕೌಟಿಲ್ಯ ಪ್ರಶ್ನಿಸಿದರು.ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರವು ಹಿಂದುಳಿದ ವರ್ಗಗಳ ಬಗೆಗೆ ಇರುವ ಬದ್ಧತೆಯನ್ನು ಪರೀಕ್ಷಿಸಲೆಂದೇ ನಾನು ಸದನದಲ್ಲಿ ಪ್ರಶ್ನೆ ಕೇಳಿ ವಿವಿಧ ಅಭಿವೃದ್ಧಿ ನಿಗಮಗಳಿಗೆ ಎಷ್ಟು ಹಣ ಹಂಚಿಕೆ ಮಾಡಿದೆ ಎಂಬ ಬಗ್ಗೆ ಲಿಖಿತ ಮಾಹಿತಿ ಪಡೆದುಕೊಂಡಿದ್ದೇನೆ. ಹಿಂದಿನ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ನಿಗಮಗಳಿಗೆ ಹಂಚಿಕೆ ಮಾಡಿದ್ದಕ್ಕಿಂತಲೂ ಕಡಿಮೆ ಹಣವನ್ನು ರಾಜ್ಯದ ಕಾಂಗ್ರೆಸ್ ಸರ್ಕಾರ ಬಿಡುಗಡೆ ಮಾಡಿದೆ' ಎಂದರು. 'ಸುಮಾರು 150 ಜಾತಿಗಳಿರುವ ಡಿ.ದೇವರಾಜ ಅರಸು ನಿಗಮಕ್ಕೆ 129.50 ಕೋಟಿ ಹಂಚಿಕೆ ಮಾಡಲಾಗಿದೆ. ಈ ನಿಗಮಕ್ಕೆ ಕನಿಷ್ಠ 500 ಕೋಟಿ ಕೊಡಬೇಕಿತ್ತು. ಕರ್ನಾಟಕ ಉಪ್ಪಾರ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ 11 ಕೋಟಿ, ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ 17.88 ಕೋಟಿ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಕೇವಲ 6.88 ಕೋಟಿ, 46 ಸಮುದಾಯಗಳಿರುವ ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ 16.50 ಕೋಟಿ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ 82.50 ಕೋಟಿ, ಕರ್ನಾಟಕ ಒಕ್ಕಲಿಗ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ 82.50 ಕೋಟಿ, ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ 6.88 ಕೋಟಿ, ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ 12.38 ಕೋಟಿ, ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ 20.63 ಕೋಟಿ, ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ 68.75 ಕೋಟಿ, ಕುಂಬಾರ ಸಮುದಾಯ, ಗಾಣಿಗ ಅಭಿವೃದ್ಧಿ ನಿಗಮ ಹಾಗೂ ಕೊಡವ ಅಭಿವೃದ್ಧಿ ನಿಗಮಕ್ಕೆ ತಲಾ 2 ಕೋಟಿ ಹಂಚಿಕೆ ಮಾಡಲಾಗಿದೆ. ಹಡಪದ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ ಒಂದು ರೂ.ಕೂಡ ಹಂಚಿಕೆ ಮಾಡಿಲ್ಲ' ಎಂದು ವಿವರಿಸಿದರು.



## ಹೆದ್ದಾರಿಯಲ್ಲಿ ಇಲ್ಲ ನಾಮಫಲಕ; ಅಪಘಾತ ಭೀತಿ!

**ಉದಯವಾಹಿನಿ, ಬಂಟ್ವಾಳ**

ಇಲ್ಲಿನ ಬಿ.ಸಿ ರೋಡ್–ಅಡ್ಡಹೊಳೆ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದ್ದರೂ ಕೆಲವೆಡೆ ಮಾರ್ಗಸೂಚಿ ಫಲಕಗಳು ಇಲ್ಲದ ಪರಿಣಾಮ ವಾಹನ ಸವಾರರಿಗೆ ಅಪಘಾತದ ಭೀತಿ ಎದುರಾಗಿದೆ.ಮಾಣಿ ರಾಷ್ಟ್ರೀಯ ಹೆದ್ದಾರಿ ಪರಿಸರದಲ್ಲಿ ಮೈಸೂರು, ಪುತ್ತೂರು, ಸುಳ್ಯ, ಸುಬ್ರಹ್ಮಣ್ಯ ಕಡೆಗೆ ತೆರಳುವ ವಾಹನ ಸವಾರರಿಗೆ ಸರ್ವಿಸ್ ರಸ್ತೆ ಮತ್ತು ಸೂಕ್ತ ಮಾರ್ಗಸೂಚಿ ಫಲಕಗಳನ್ನು ಅಳವಡಿಸಿಲ್ಲ. ಇಲ್ಲಿನ ಬಿ.ಸಿ.ರೋಡ್ ಕಡೆಯಿಂದ ಸಾಗುವ ವಾಹನ ಸವಾರರು ಪುತ್ತೂರು, ಸುಳ್ಯ, ಮೈಸೂರು ಭಾಗಕ್ಕೆ ತೆರಳಬೇಕಾದರೆ ಮಾಣಿಯಲ್ಲಿ ಸರ್ವಿಸ್ ರಸ್ತೆಗೆ ಎಡಕ್ಕೆ ತೆರಳಿ ಬಳಿಕ ಅಂಡರ್‌ಪಾಸ್ ಮೂಲಕ ಬಲಕ್ಕೆ ಸಾಗಬೇಕು. ಇದು ವೇಗವಾಗಿ ಬರುವ ಬಹುತೇಕ ವಾಹನ ಸವಾರರಿಗೆ ಈ ತಿರುವು ಗೊತ್ತೇ ಆ ಆಗುವುದಿಲ್ಲ. ಇದರಿಂದಾಗಿ ಬಹುತೇಕ ಮಂದಿ ನೇರವಾಗಿ ಮುಂದಕ್ಕೆ ಸಾಗಿ ಬಳಿಕ ಮೇಲೇತುವೆಯಲ್ಲಿ ತೆರಳಿದಾಗ ತಪ್ಪಿನ ಬಗ್ಗೆ ಗಮನಕ್ಕೆ ಬರುತ್ತದೆ. ಹೀಗಾಗಿ ಮತ್ತೆ ಅವರು ಹೆದ್ದಾರಿಯಲ್ಲಿ ಮುಂದಕ್ಕೆ ಸಾಗಿ ಬರುವ ಬದಲಾಗಿ ಅಲ್ಲಿಂದಲೇ ವಾಹನಗಳನ್ನು ತಿರುಗಿಸಿ ವಿರುದ್ಧ ದಿಕ್ಕಿನಿಂದ ಬಂದು ಅಪಘಾತಗಳಿಗೆ ಕಾರಣವಾಗುತ್ತಿದ್ದಾರೆ ಎಂದು ವಾಹನ ಸವಾರರು ಹೇಳಿದರು. ಮೈಸೂರು ಕಡೆಗೆ ತೆರಳುತ್ತಿದ್ದ ವಾಹನವೊಂದು ಸರ್ವಿಸ್ ರಸ್ತೆ ಪ್ರವೇಶಿಸಲು ಸಾಧ್ಯವಾಗದೆ ಮುಂದೆ ಸಾಗಿ ಬಳಿಕ ವಾಪಸ್ ವಿರುದ್ಧ ದಿಕ್ಕಿನಲ್ಲಿ ಬರುತ್ತಿದ್ದ ವೇಳೆ ಪಿಕಪ್ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಈಚೆಗೆ ನಡೆದಿದೆ.


ಉದಯವಾಹಿನಿ ಚಿತ್ರ

## ಎಕರೆಗೆ 50 ಸಾವಿರ ಪರಿಹಾರಕ್ಕೆ ಆಗ್ರಹ

**ಉದಯವಾಹಿನಿ, ಧಾರವಾಡ**

ಮಳೆ ಕೊರತೆಯಿಂದ ತಾಲ್ಲೂಕಿನಲ್ಲಿ ಬರ ಆವರಿಸಿದ್ದು, ಪ್ರತಿ ಎಕರೆಗೆ 50 ಸಾವಿರ ಪರಿಹಾರ ಬಿಡುಗಡೆ ಮಾಡುವುದು ಸಹಿತ ರೈತರ ಸಂಪೂರ್ಣ ಬೆಳೆ ಸಾಲಮನ್ನಾ ಮಾಡಬೇಕು' ಎಂದು ಆಗ್ರಹಿಸಿ ರೈತ ಸಂಘಟನೆಗಳ ಒಕ್ಕೂಟ ಹಾಗೂ ಬಿಜೆಪಿ ಗ್ರಾಮೀಣ ಘಟಕದವರು ಪ್ರತಿಭಟನೆ ನಡೆಸಿದರು. ತಾಲ್ಲೂಕಿನ ಶಿವಳ್ಳಿ ದುರ್ಗಾದೇವಿ ದೇವಸ್ಥಾನದಿಂದ ಆರಂಭವಾದ ಟ್ರ್ಯಾಕ್ಟರ್ ಹಾಗೂ ಚಕ್ಕಡಿ ಪ್ರತಿಭಟನಾ ರ್‍ಯಾಲಿಯು ಹೆಬ್ಬಳ್ಳಿ, ತಲವಾಯಿ, ಕನಕೂರ, ಚಂದನಮಟ್ಟಿ, ಕವಲಗೇರಿ, ಅಮ್ಮಿನಭಾವಿ, ಮರೇವಾಡ ಕ್ರಾಸ್ ಮತ್ತು ಮುರುಘಾಮಠ ಮಾರ್ಗವಾಗಿ ಜುಬಿಲಿ ವೃತ್ತಕ್ಕೆ ಬಂದು, ಸಮಾವೇಶಗೊಂಡಿತು. ಪ್ರತಿಭಟನಕಾರರು ಕೆಲಹೊತ್ತು ರಸ್ತೆ ತಡೆ ನಡೆಸಿ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. 'ತಕ್ಷಣವೇ ಶಾಶ್ವತ ಬರ ಪರಿಹಾರ ಕಾಮಗಾರಿಗಳನ್ನು ಆರಂಭಿಸಬೇಕು, ಹಿಂಗಾರು ಹಂಗಾಮಿಗೆ ರೈತರಿಗೆ ಉಚಿತವಾಗಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಿಸಬೇಕು, ಗ್ರಾಮೀಣ ಭಾಗದ ಮನೆಗಳಿಗೆ 24 ಗಂಟೆ ನಿರಂತರ ವಿದ್ಯುತ್ ನೀಡಬೇಕು, ಲೋಡ್ ಶೆಡ್ಡಿಂಗ್ ರದ್ದುಗೊಳಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

ಈ ವರ್ಷದ ಸೆಪ್ಟೆಂಬರ್‌ನಲ್ಲಿ VISL 1.96 ಕೋಟಿ ನಿವ್ವಳ ಲಾಭವನ್ನು ದಾಖಲಿಸಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸಂತಸ ವ್ಯಕ್ತಪಡಿಸಿದ್ದಾರೆ.

# ಸತತ ಮೂರನೇ ತಿಂಗಳೂ ನಿವ್ವಳ ಲಾಭದತ್ತ VISL

**ಉದಯವಾಹಿನಿ, ಶಿವಮೊಗ್ಗ**

ನಿರಂತರ ನಷ್ಟದ ಸುಳಿಗೆ ಸಿಲುಕಿದ್ದ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಇದೀಗ ಲಾಭದ ದಿಕ್ಕಿನತ್ತ ಹೊರಳಿದೆ. ವಿಐಎಸ್‌ಎಲ್ ಸತತ ಮೂರನೇ ತಿಂಗಳು ಲಾಭದತ್ತ ಸಾಗಿದೆ. ಸೆಪ್ಟಂಬರ್ ನಲ್ಲಿ ಕಾರ್ಖಾನೆಯು 1.96 ಕೋಟಿ ರೂ. ಲಾಭ ಗಳಿಸಿದೆ ಎಂದು ಸಂತಸ ವ್ಯಕ್ತಪಡಿಸಿ ಕೇಂದ್ರದ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ.

**1.** ಲಾಭದ ದಾರಿಯಲ್ಲಿ ಸಾಗಿ ಬರುತ್ತಿದೆ
**2.** ಬದ್ಧತೆ ಮತ್ತು ಸಾಮೂಹಿಕ ಸಂಕಲ್ಪ
**3.** ಜುಲೈ 2026ರಲ್ಲಿ 0.33 ಕೋಟಿ ರೂ

ಕುಮಾರಸ್ವಾಮಿ ಅವರು ಕೇಂದ್ರದ ಉಕ್ಕು ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಕೈಗೊಂಡ ಸುಧಾರಣಾ ಕ್ರಮಗಳು ಹಾಗೂ ಕಾರ್ಖಾನೆಗೆ ನೀಡಿದ ನಿರಂತರ ಭೇಟಿಗಳ ಹಿನ್ನೆಲೆಯಲ್ಲಿ ಈ ಕಾರ್ಖಾನೆಯು ಇದೀಗ ಪುಟಿದೆದ್ದಿದ್ದು, ಕಳೆದ ಮೂರು ತಿಂಗಳಿಂದ ಸತತ ಲಾಭದ ದಾರಿಯಲ್ಲಿ ಸಾಗಿ ಬರುತ್ತಿದೆ. ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಕೇಂದ್ರ ಸಚಿವರು, ಸುಧಾರಿತ ಆರ್ಥಿಕ ಕಾರ್ಯಕ್ಷಮತೆಯು ಅಲ್ಲಿನ ಕಾರ್ಮಿಕರ ನಿರಂತರ ಪ್ರಯತ್ನ, ಬದ್ಧತೆ ಮತ್ತು ಸಾಮೂಹಿಕ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತದ ಉಕ್ಕು ವಲಯ ಮತ್ತು ಅದರ ಸಂಸ್ಥೆಗಳನ್ನು ಬಲಪಡಿಸುವತ್ತ ಕೇಂದ್ರ ಸರಕಾರ ನಿರಂತರವಾಗಿ ಗಮನಹರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕಾರ್ಖಾನೆಯು ಇತ್ತೀಚಿನ ಕಾರ್ಯಕ್ಷಮತೆಯು ಒಂದು ಉತ್ತೇಜಕ ಬೆಳವಣಿಗೆಯಾಗಿದ್ದು, ಘಟಕವು ಸತತ ಮೂರು ತಿಂಗಳುಗಳ ಕಾಲ ನಿವ್ವಳ ಲಾಭವನ್ನು ದಾಖಲಿಸಿದೆ ಎಂದು ಅವರು ತಿಳಿಸಿದ್ದಾರೆ.

ಕಾರ್ಖಾನೆಯು ಜುಲೈ 2026ರಲ್ಲಿ 0.33 ಕೋಟಿ ರೂ., ಆಗಸ್ಟ್‌ನಲ್ಲಿ 1.71 ಕೋಟಿ ರೂ. ಮತ್ತು ಸೆಪ್ಟೆಂಬರ್ 2026ರಲ್ಲಿ 1.96 ಕೋಟಿ ರೂ. ನಿವ್ವಳ ಲಾಭವನ್ನು ದಾಖಲಿಸಿದೆ. ಈ ಸತತ ತಿಂಗಳುಗಳ ಲಾಭ ಕಾರ್ಖಾನೆಯ ಆರ್ಥಿಕ ಕಾರ್ಯಕ್ಷಮತೆಯಲ್ಲಿನ ನಿರಂತರ ಸಕಾರಾತ್ಮಕ ಬೆಳವಣಿಗೆಯನ್ನು ಸೂಚಿಸುತ್ತವೆ. ಈ ಸುಧಾರಣೆಯು ವಿಶೇಷವಾಗಿ ಸೆಪ್ಟೆಂಬರ್‌ನಲ್ಲಿ ಎದ್ದು ಕಾಣುವಂತಿತ್ತು. 2025ರ ಇದೇ ಅವಧಿಯಲ್ಲಿದ್ದ 27.48 ಕೋಟಿಗೆ ಹೋಲಿಸಿದರೆ, ಸೆಪ್ಟೆಂಬರ್ 2026ರಲ್ಲಿ ಕಾರ್ಖಾನೆಯ ನಿವ್ವಳ ಆದಾಯವು 51.87 ಕೋಟಿಗೆ ಏರಿಕೆಯಾಗಿದೆ. ಅಲ್ಲದೆ, 2025ರ ಸೆಪ್ಟೆಂಬರ್‌ನಲ್ಲಿ ದಾಖಲಾಗಿದ್ದ 3.78 ಕೋಟಿ ನಷ್ಟಕ್ಕೆ ವ್ಯತಿರಿಕ್ತವಾಗಿ, ಈ ವರ್ಷದ ಸೆಪ್ಟೆಂಬರ್‌ನಲ್ಲಿ ಘಟಕವು 1.96 ಕೋಟಿ ನಿವ್ವಳ ಲಾಭವನ್ನು ದಾಖಲಿಸಿದೆ ಎಂದು ಸಚಿವರು ಸಂತಸ ವ್ಯಕ್ತಪಡಿಸಿದ್ದಾರೆ.

ಕಾರ್ಖಾನೆಯ ಸಚಿವರು, ಘಟಕದ ಕಾರ್ಯಕ್ಷಮತೆಯನ್ನು ಬಲಪಡಿಸುವಲ್ಲಿ ಕಾರ್ಮಿಕರು ಮತ್ತು ಸಂಪೂರ್ಣ ಕಾರ್ಖಾನೆಯ ತಂಡವು ತೋರಿದ ಬದ್ಧತೆ, ಶಿಸ್ತು ಹಾಗೂ ನಿರಂತರ ಪ್ರಯತ್ನಗಳಿಗಾಗಿ ಅವರನ್ನು ಅಭಿನಂದಿಸಿದ್ದಾರೆ. ಕಾರ್ಖಾನೆಯ ಕಂಡುಬಂದಿರುವ ಪ್ರಗತಿಯು ನಮ್ಮ ಕಾರ್ಯಪಡೆಯ ಬದ್ಧತೆ ಮತ್ತು ಕಠಿಣ ಪರಿಶ್ರಮವನ್ನು ಪ್ರತಿಬಿಂಬಿಸುತ್ತದೆ. ಈ ಉತ್ತೇಜಕ ಕಾರ್ಯಕ್ಷಮತೆಗಾಗಿ ನಾನು ನಮ್ಮ ಕಾರ್ಮಿಕರನ್ನು ಮತ್ತು ಕಾರ್ಖಾನೆಯ ತಂಡವನ್ನು ಅಭಿನಂದಿಸುತ್ತೇನೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿದ್ದಾರೆ.



ಉದಯವಾಹಿನಿ ಚಿತ್ರ

ಕಾರ್ಖಾನೆಯ ಕಾರ್ಯಾಚರಣೆಯ ಕಾರ್ಯಕ್ಷಮತೆಯನ್ನು ಬಲಪಡಿಸುವ, ಹೆಚ್ಚು ಬಲವಾದ ಮತ್ತು ಸುಸ್ಥಿರ ಭವಿಷ್ಯವನ್ನು ರೂಪಿಸುವ ನಿರಂತರ ಪ್ರಯತ್ನಗಳ ಮೂಲಕ ಈ ಸಕಾರಾತ್ಮಕ ವೇಗವನ್ನು ಕಾಯ್ದುಕೊಳ್ಳಬೇಕು.

– ಹೆಚ್‌ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

## 2006ರ KSTP ಯೋಜನೆ ಪ್ರಕರಣ –ಮಲೇಷ್ಯಾ ಮೂಲದ ಸಿವಿಲ್ ಇಂಜಿನಿಯರ್ ಸಾವಿನ ಪ್ರಕರಣ ಕುರಿತು ಪ್ರಾಥಮಿಕ ಭ್ರಷ್ಟಾಚಾರ ನಿಗ್ರಹ ತನಿಖೆಗೆ ಸೂಚನೆ

# CEC ಜ್ಞಾನೇಶ್ ಕುಮಾರ್ ವಿರುದ್ಧ ವಿಜಿಲೆನ್ಸ್ ತನಿಖೆಗೆ ಕೇರಳಂ ಗೃಹ ಸಚಿವ ಆದೇಶ

**ತಿರುವನಂತಪುರಂ:** ಹಾಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು 2006ರಲ್ಲಿ ಕೇರಳದ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ನಡೆದಿದ್ದ ಕೆಎಸ್‌ಟಿಪಿ ರಸ್ತೆ ಯೋಜನೆಗೆ ಸಂಬಂಧಿಸಿದ ಭ್ರಷ್ಟಾಚಾರ ಆರೋಪಗಳು ಹಾಗೂ ಈ ಯೋಜನೆಗೆ ಸಂಬಂಧಿಸಿದ್ದ ಮಲೇಷ್ಯಾ ಮೂಲದ ಸಿವಿಲ್ ಇಂಜಿನಿಯರ್ ಸಾವಿನ ಪ್ರಕರಣ ಕುರಿತು ಪ್ರಾಥಮಿಕ ಭ್ರಷ್ಟಾಚಾರ ನಿಗ್ರಹ ತನಿಖೆಗೆ ಕೇರಳ ಗೃಹ ಸಚಿವ ರಮೇಶ್ ಚೆನ್ನಿತ್ತಲ ಆದೇಶ ಹೊರಡಿಸಿದ್ದಾರೆ.

2006ರಲ್ಲಿ ಜ್ಞಾನೇಶ್ ಕುಮಾರ್ ವಿರುದ್ಧ ನಡೆದಿದ್ದ ಪ್ರಾಥಮಿಕ ವಿಜಿಲೆನ್ಸ್ ವಿಚಾರಣೆಗೆ ಸಂಬಂಧಿಸಿದ ಕಡತಗಳನ್ನು ಕೇರಳ ಗೃಹ ಇಲಾಖೆ ಇತ್ತೀಚೆಗೆ ಕೋರಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಜ್ಞಾನೇಶ್ ಕುಮಾರ್ ವಿರುದ್ಧ ಮುಂದಿನ ಕ್ರಮ ಕೈಗೊಳ್ಳುವ ಮೊದಲು ವಿಜಿಲೆನ್ಸ್ ಮತ್ತು ಭ್ರಷ್ಟಾಚಾರ ನಿಗ್ರಹ ದಳ ಪ್ರಾಥಮಿಕ ತನಿಖೆ ನಡೆಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಚೆನ್ನಿತ್ತಲ, ತಾವು ದೂರನ್ನು ಪರಿಶೀಲಿಸಿದ್ದು, ಆರೋಪಗಳಲ್ಲಿ ಮೇಲ್ನೋಟಕ್ಕೆ ಸತ್ಯಾಂಶ ಕಂಡುಬಂದಿದೆ ಎಂದು ಹೇಳಿದರು.

ವಿಸ್ತೃತ ಭ್ರಷ್ಟಾಚಾರ ನಿಗ್ರಹ ತನಿಖೆ ಅತ್ಯಗತ್ಯ ಎಂಬ ತೀರ್ಮಾನಕ್ಕೆ ಬಂದಿದ್ದು, ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರೊಂದಿಗೆ ಮಾತನಾಡಿದ ಬಳಿಕ, ಕಾನೂನುಬದ್ಧ ಕ್ರಮದಂತೆ ವಿಸ್ತೃತ ತನಿಖೆ ನಡೆಸುವಂತೆ ವಿಜಿಲೆನ್ಸ್ ನಿರ್ದೇಶಕ ಮನೋಜ್ ಅಬ್ರಹಾಂ ಅವರಿಗೆ ಸೂಚಿಸಿರುವುದಾಗಿ ತಿಳಿಸಿದರು.



ಈ ಪ್ರಕರಣವು ಕೇರಳ ರಾಜ್ಯ ಸಾರಿಗೆ ಯೋಜನೆ ಅಡಿಯಲ್ಲಿ ಎಂಸಿ ರಸ್ತೆಯ ಅಭಿವೃದ್ಧಿ ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದ PATI-BEL ಒಕ್ಕೂಟದೊಂದಿಗೆ ಕೆಲಸ ಮಾಡುತ್ತಿದ್ದ ಮಲೇಷ್ಯಾದ ಸಿವಿಲ್ ಇಂಜಿನಿಯರ್ ಲೀ ಸೀ ಬೀನ್ ಅವರ ಆತ್ಮಹತ್ಯೆಗೆ ಸಂಬಂಧಿಸಿದೆ.

2006ರಲ್ಲಿ ವಿಶ್ವಬ್ಯಾಂಕ್‌ನ ನೆರವಿನಿಂದ 215 ಕೋಟಿ ರೂ ವೆಚ್ಚದಲ್ಲಿ ಅಂಗಮಾಲಿ–ತಿರುವನಂತಪುರಂ ನಡುವಿನ ಎಂಸಿ ರಸ್ತೆಯ ಪುನರ್‌ನಿರ್ಮಾಣ ಯೋಜನೆಯನ್ನು ಕೆಎಸ್‌ಟಿಪಿ ಕೈಗೆತ್ತಿಕೊಂಡಿತ್ತು. ಮಲೇಷ್ಯಾದ ಕಂಪನಿ ಮತ್ತು ಭಾಗೀರಥ ಇಂಜಿನಿಯರಿಂಗ್‌ನ ಜಂಟಿ ಸಹಭಾಗಿತ್ವದ PATI-BEL ಸಂಸ್ಥೆ ಈ ಯೋಜನೆಯ ಕಾಮಗಾರಿಯನ್ನು ಕೈಗೊಂಡಿತ್ತು ಎಂದು ಚೆನ್ನಿತ್ತಲ ಹೇಳಿದರು.

**1.** 2006ರಲ್ಲಿ ಕೇರಳದ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿನ ಭ್ರಷ್ಟಾಚಾರಗಳು
**2.** ಜ್ಞಾನೇಶ್ ಕುಮಾರ್ ವಿರುದ್ಧ ತನಿಖೆ ನಡೆಸುವಂತೆ ಕೆಪಿಸಿಸಿ ನಾಯಕ ಮಲಯಿಂಕೀಝು ವೇಣುಗೋಪಾಲ್ ದೂರು
**3.** ತಾವು ದೂರನ್ನು ಪರಿಶೀಲಿಸಿದ್ದು, ಆರೋಪಗಳಲ್ಲಿ ಮೇಲ್ನೋಟಕ್ಕೆ ಸತ್ಯಾಂಶ ಕಂಡುಬಂದಿದೆ

### ಪಿಟಿಐ ವರದಿ ಮಾಡಿದೆ

**ಜ್ಞಾನೇಶ್ ಕುಮಾರ್ ವಿರುದ್ಧ ತನಿಖೆ ನಡೆಸುವಂತೆ ಕೆಪಿಸಿಸಿ ನಾಯಕ ಮಲಯಿಂಕೀಝು ವೇಣುಗೋಪಾಲ್ ದೂರು ಸಲ್ಲಿಸಿದ ಬಳಿಕ ಚೆನ್ನಿತ್ತಲ ಅವರು ಹೊಸದಾಗಿ ತನಿಖೆಗೆ ಆದೇಶಿಸಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ಪಿಟಿಐ ವರದಿ ಮಾಡಿದೆ.**

ಕಾಮಗಾರಿ ನಡೆಯುತ್ತಿದ್ದ ವೇಳೆ ಲೀ ಅವರು ಹಲವು ದೂರುಗಳನ್ನು ನೀಡಿದ್ದರು. ಬಳಿಕ ಮಲೇಷ್ಯಾಕ್ಕೆ ಮರಳಿದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಸಚಿವರು ತಿಳಿಸಿದರು.

ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಈ ಹಿಂದೆ ವರದಿ ಮಾಡಿದಂತೆ, ಲೀ ಅವರ ಸಾವಿನ ಬಳಿಕ 2006ರಲ್ಲಿ ಭ್ರಷ್ಟಾಚಾರ ನಿಗ್ರಹ ತನಿಖೆ ಆರಂಭವಾಗಿತ್ತು. ಕೌಲಾಲಂಪುರದಿಂದ ಬರೆಯಲಾಗಿದ್ದ ಪತ್ರದ ವಿಷಯ ಸೇರಿದಂತೆ ಪ್ರಕರಣದ ವಿವಿಧ ಅಂಶಗಳನ್ನು ತನಿಖೆ ನಡೆಸಲಾಗಿತ್ತು.

---

## ಅಮೇಥಿ ಬಿಟ್ಟು ರಾಯ್‌ಬರೇಲಿಯಿಂದ ಸ್ಪರ್ಧಿಸಲು ರಾಹುಲ್ ತೀವ್ರ ಹೆದರಿದ್ದರು

**ಲಕ್ನೋ:** 2024ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಮೇಥಿ ಕ್ಷೇತ್ರ ಬಿಟ್ಟು ರಾಯ್‌ಬರೇಲಿಯಿಂದ ಸ್ಪರ್ಧಿಸಲು ತೀವ್ರ ಹೆದರಿದ್ದರು ಎಂದು ಸಮಾಜವಾದಿ ಪಕ್ಷದ ಪ್ರತಾಪ್‌ಗಢ ಸಂಸದ ಶಿವಪಾಲ್ ಸಿಂಗ್ ಪಟೇಲ್ ಹೇಳಿದ್ದಾರೆ.

ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ಸಮಾಜವಾದಿ ಪಕ್ಷದೊಂದಿಗೆ ಮೈತ್ರಿ ಇರದಿದ್ದರೆ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ ಎಂದಿದ್ದಾರೆ.



ಒಂದು ಹಂತದಲ್ಲಿ ರಾಹುಲ್ ಗಾಂಧಿ ತಮ್ಮ ಕ್ಷೇತ್ರವನ್ನೇ ಬಿಟ್ಟುಕೊಡಲು ನಿರ್ಧರಿಸಿದ್ದರು. ಆದರೆ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಧೈರ್ಯ ತುಂಬಿ, ಸ್ಪರ್ಧಿಸದೇ ಇದ್ದರೆ ತಾವೇ ಅಭ್ಯರ್ಥಿಯನ್ನು ಕಣಕ್ಕಿಳಿಸುವುದಾಗಿ ಎಚ್ಚರಿಸಿದ ಬಳಿಕವಷ್ಟೇ ರಾಹುಲ್ ಗಾಂಧಿ ರಾಯ್‌ಬರೇಲಿಯಿಂದ ಸ್ಪರ್ಧಿಸಲು ಒಪ್ಪಿಕೊಂಡರು ಎಂದು ಪಟೇಲ್ ತಿಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಎಸ್‌ಪಿ ಕಾರ್ಯಕರ್ತರೆಲ್ಲರೂ ಕಾಂಗ್ರೆಸ್‌ಗೆ ಪೂರ್ಣ ಬೆಂಬಲ ನೀಡಿದ್ದರಿಂದಲೇ ಅವರು ಆರು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು. ಮೈತ್ರಿ ಇಲ್ಲದೆ ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಿದರೆ ಶೂನ್ಯಕ್ಕೆ ಕುಸಿಯಲಿದೆ ಎಂದು ಶಿವಪಾಲ್ ಸಿಂಗ್ ಹೇಳಿದ್ದಾರೆ. ಕಾಂಗ್ರೆಸ್‌ಗೆ ಸ್ಥಾನಗಳನ್ನು ಹಂಚಿಕೆ ಮಾಡಿದಲ್ಲೆಲ್ಲಾ, ಸಮಾಜವಾದಿ ಪಕ್ಷದ ಪ್ರತಿಯೊಂದು ಮತವೂ ಅವರಿಗೆ ಸಿಕ್ಕಿತು. ಹೀಗಾಗಿಯೇ ಅವರು ಆ ಆರು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು," ಎಂದು ಅವರು ಹೇಳಿದರು.

ನಾವು 37 ಸ್ಥಾನಗಳನ್ನು ಗೆದ್ದಿದ್ದೇವೆ. ನಾವು ಪ್ರತಿಯೊಂದು ವಿಷಯದಲ್ಲೂ ಕಾಂಗ್ರೆಸ್‌ಗಿಂತ ಬಹಳ ಮುಂದಿದ್ದೇವೆ. ಅವರು 50ಕ್ಕಿಂತ ಹೆಚ್ಚು ಸ್ಥಾನಗಳನ್ನು ಕೇಳಬಾರದು ಮತ್ತು (ಸಿಕ್ಕಿರುವುದಕ್ಕೆ) ಸಂತೋಷಪಡಬೇಕು. ಕಾಂಗ್ರೆಸ್ ರೀತಿಯ ಅಸಂಬದ್ಧ ಅಥವಾ ನಕಾರಾತ್ಮಕ ಹೇಳಿಕೆಗಳನ್ನು ನೀಡುವ ಬದಲು ಸಹಕರಿಸಬೇಕು ಎಂದು ಪಟೇಲ್ ತಿಳಿಸಿದ್ದಾರೆ.

ಇನ್ನೊಂದೆಡೆ ಶಿವಪಾಲ್ ಸಿಂಗ್ ಅವರ ಈ ಹೇಳಿಕೆಗೆ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಇಂಡಿಯಾ ಮೈತ್ರಿಕೂಟದ ಬಲದಿಂದಲೇ ಸಂಸದರಾಗಿರುವ ಶಿವಪಾಲ್ ಸಿಂಗ್ ಪಟೇಲ್ ತಮ್ಮ ಮಿತಿಯಲ್ಲಿ ಮಾತನಾಡಬೇಕು ಮತ್ತು ಎಸ್‌ಪಿ ನಾಯಕತ್ವ ಇಂತಹ ಜವಾಬ್ದಾರಿರಹಿತ ಹೇಳಿಕೆ ನೀಡುವವರನ್ನು ನಿಯಂತ್ರಿಸಬೇಕು ಎಂದು ಉತ್ತರ ಪ್ರದೇಶ ಕಾಂಗ್ರೆಸ್ ವಕ್ತಾರ ಅಂಶು ಅವಸ್ಥಿ ತಿರುಗೇಟು ನೀಡಿದ್ದಾರೆ.

---

## ಡಾ. ಶಿವರಾಜ್‌ಕುಮಾರ್ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದ ಖ್ಯಾತ ನಿರ್ದೇಶಕ ಸಿಂಗೀತಂ ಶ್ರೀನಿವಾಸ ರಾವ್ ನಿಧನ

**ಚೆನ್ನೈ(ತಮಿಳುನಾಡು):** ಭಾರತೀಯ ಚಲನಚಿತ್ರರಂಗದ ಬಹುಮುಖ ಪ್ರತಿಭೆ, ಹಿರಿಯ ಚಲನಚಿತ್ರ ನಿರ್ದೇಶಕ ಸಿಂಗೀತಂ ಶ್ರೀನಿವಾಸ ರಾವ್ ವಯೋಸಹಜ ಕಾಯಿಲೆಯಿಂದ ಅವರು ನಿಧನರಾಗಿದ್ದಾರೆ.

ಹಿರಿಯ ನಿರ್ದೇಶಕ ಶ್ರೀನಿವಾಸ ರಾವ್ (95) ಅವರು ನಿನ್ನೆ (ಅಕ್ಟೋಬರ್ 3) ಚೆನ್ನೈನಲ್ಲಿ ನಿಧನರಾದರು. ಅವರು ತಮಿಳು, ತೆಲುಗು, ಮಲಯಾಳಂ, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ 60ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿದ್ದಾರೆ.




ಕನ್ನಡ ಚಿತ್ರರಂಗಕ್ಕೆ ಅವರು ಅತ್ಯುತ್ತಮ ಕೊಡುಗೆ ನೀಡಿದ್ದಾರೆ. ಡಾ. ರಾಜ್ ಕುಟುಂಬದೊಂದಿಗೆ ನಿಕಟ ಒಡನಾಟ ಹೊಂದಿದ್ದ ಅವರು, ಹಾಲು ಜೇನು, ಚಲಿಸುವ ಮೋಡಗಳು, ಜ್ವಾಲಾಮುಖಿ, ಶ್ರುತಿ ಸೇರಿದಾಗ, ದೇವತಾ ಮನುಷ್ಯ ಮುಂತಾದ ಜನಪ್ರಿಯ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ವಿಶೇಷ ಎಂದರೆ ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್‌ಕುಮಾರ್ ಅವರನ್ನು ಆನಂದ್ ಚಿತ್ರದ ಮೂಲಕ ಚಿತ್ರರಂಗಕ್ಕೆ ಪರಿಚಯಿಸಿದ್ದರು.

ಶ್ರೀನಿವಾಸ ರಾವ್ ಅವರು ಭಾರತೀಯ ಚಲನಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಹಿರಿಯ ನಿರ್ದೇಶಕರಾಗಿದ್ದಾರೆ. ಅವರು ಚಿತ್ರರಂಗದಲ್ಲಿ ಚಿತ್ರಕಥೆಗಾರ, ನಿರ್ಮಾಪಕ ಮತ್ತು ನಟನಾಗಿಯೂ ಕೆಲಸ ಮಾಡಿದ್ದಾರೆ. 1931ರ ಸೆಪ್ಟೆಂಬರ್ 21ರಂದು ಆಂಧ್ರಪ್ರದೇಶದ ಗುಡೂರಿನಲ್ಲಿ ಜನಿಸಿದರು.

ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರವನ್ನು ಅಧ್ಯಯನ ಮಾಡಿದರು. ತಮ್ಮ ಆರಂಭಿಕ ದಿನಗಳಲ್ಲಿ, ಅವರು ಖ್ಯಾತ ನಿರ್ದೇಶಕ ಕೆ.ವಿ. ರೆಡ್ಡಿ ಅವರ ಬಳಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದರು. ಆ ಅವಧಿಯಲ್ಲಿ, ಮಾಯಾಬಜಾರ್ ಮತ್ತು ಜಗತೇಕ ವೀರುನಿ ಕಥಾ ಸೇರಿದಂತೆ ಪ್ರಮುಖ ಚಿತ್ರಗಳ ನಿರ್ಮಾಣ ಪ್ರಕ್ರಿಯೆಯನ್ನು ವೀಕ್ಷಿಸುವ ಮೂಲಕ ಅವರು ಚಿತ್ರಕಥೆ ರಚನೆಯ ಬಗ್ಗೆ ಕಲಿತರು. ನಂತರ, 1972ರಲ್ಲಿ ಬಿಡುಗಡೆಯಾದ ನೀತಿ ನಿಜಾಯಿತಿ ಎಂಬ ತೆಲುಗು ಚಿತ್ರದ ಮೂಲಕ ಅವರು ನಿರ್ದೇಶಕರಾಗಿ ಪಾದಾರ್ಪಣೆ ಮಾಡಿದ್ದರು. ನಂತರ ಅವರು ತಮಿಳು, ತೆಲುಗು, ಕನ್ನಡ, ಮಲಯಾಳಂ, ಹಿಂದಿ ಮತ್ತು ಇಂಗ್ಲಿಷ್ ಸೇರಿದಂತೆ ಅನೇಕ ಭಾಷೆಗಳಲ್ಲಿ ಚಿತ್ರಗಳನ್ನು ನಿರ್ದೇಶಿಸುವ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಅವರ ಚಲನಚಿತ್ರ ಪಯಣವು ಪ್ರಯೋಗಶೀಲತೆ ಮತ್ತು ವಿಭಿನ್ನ ಕಥಾಹಂದರಗಳಿಂದ ಕೂಡಿತ್ತು. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ 1974ರಲ್ಲಿ ಬಿಡುಗಡೆಯಾದ ಥಿಕ್ಕತ್ರ ಪಾರ್ವತಿ ಚಿತ್ರ. ಇದು ಅವರ ಮೊದಲ ತಮಿಳು ಚಿತ್ರವೂ ಆಗಿತ್ತು. ರಾಜಾಜಿ ಅವರ ಕೃತಿಯನ್ನು ಆಧರಿಸಿದ ಈ ಚಿತ್ರವು ಅತ್ಯುತ್ತಮ ತಮಿಳು ಚಿತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಗೆದ್ದುಕೊಂಡಿತು.

---

## ನಿರ್ಧಾರ ಕೈಗೊಳ್ಳಬೇಕಿದೆ, ಸುಲಭದ ದಾರಿಯೋ– ಕಠಿಣ ದಾರಿಯೋ ನೀವೇ ಆರಿಸಿಕೊಳ್ಳಿ

**ವಾಷಿಂಗ್ಟನ್:** ಅಮೆರಿಕ ಮತ್ತು ಇರಾನ್ ನಡುವಿನ ಉದ್ವಿಗ್ನತೆ ತೀವ್ರಗೊಂಡಿದ್ದು, ಇರಾನ್ ವಿರುದ್ಧದ ಮುಂದಿನ ಕಠಿಣ ಕ್ರಮಗಳ ಕುರಿತು ಅಮೆರಿಕ ಈಗ "ಅಂತಿಮ ನಿರ್ಧಾರ ಕೈಗೊಳ್ಳುವ ಹಂತದಲ್ಲಿದೆ" ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಘೋಷಿಸಿದ್ದಾರೆ. ಶ್ವೇತಭವನದ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಿಕ್ಕಟ್ಟು "ಸುಲಭದ ದಾರಿ ಅಥವಾ ಕಠಿಣ ದಾರಿಯ" ಮೂಲಕ ಬಗೆಹರಿಯಲಿದೆ ಎಂದು ಇರಾನ್‌ಗೆ ನೇರ ಎಚ್ಚರಿಕೆ ನೀಡಿದ್ದಾರೆ. ಕಳೆದ ಏಳು ತಿಂಗಳ ನಿರಂತರ ಸಂಘರ್ಷದಿಂದಾಗಿ ಇರಾನ್ ಆರ್ಥಿಕವಾಗಿ ಮತ್ತು ಮಿಲಿಟರಿ ಪರವಾಗಿ ಸಂಪೂರ್ಣವಾಗಿ "ಧ್ವಂಸಗೊಂಡಿದೆ" ಎಂದು ಪ್ರತಿಪಾದಿಸಿದ್ದಾರೆ. "ಇರಾನ್ ಕುರಿತು ನಾನು ನಿರ್ಧಾರ ಕೈಗೊಳ್ಳಬೇಕಿದೆ. ಇರಾನ್ ನಾಶವಾಗಿದೆ. ಹಾಗಾಗಿ ಈಗಿರುವ ಏಕೈಕ ಪ್ರಶ್ನೆಯೆಂದರೆ, ಅದು ಸುಲಭ ಮಾರ್ಗವಾಗಿರುತ್ತದೆಯೇ ಅಥವಾ ಕಠಿಣ ಮಾರ್ಗವಾಗಿರುತ್ತದೆಯೇ ಎಂ ಬುದು. ನಾವು ಸುಲಭ ಮಾರ್ಗ ಅಥವಾ ಕಠಿಣ ಮಾರ್ಗವನ್ನು ಆಯ್ಕೆ ಮಾಡುತ್ತೇವೆ. ಇರಾನ್ ಅಣ್ವಸ್ತ್ರ ಹೊಂದುವ ಯಾವುದೇ ಯೋಜನೆಯನ್ನು ಬಹುತೇಕ ಕೈಬಿಟ್ಟಿದೆ. ಇರಾನ್ 'ನಾಶವಾಗಿದೆ' ಎಂದು ಬಣ್ಣಿಸಿದ್ದಾರೆ. ಟ್ರಂಪ್ ಅವರ ಈ ಹೇಳಿಕೆ ಬೆನ್ನಲ್ಲೇ, ಅಮೆರಿಕ ಮತ್ತೆ ದೊಡ್ಡ ಪ್ರಮಾಣದ ದಾಳಿ ನಡೆಸಿದರೆ ಇರಾನ್ ಸೇನಾ ಪ್ರತಿಕ್ರಿಯೆಗೆ ಸಿದ್ಧತೆ ನಡೆಸುತ್ತಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ. ಮತ್ತೆ ಅಮೆರಿಕ ಸೇನಾ ಕಾರ್ಯಾಚರಣೆ ಆರಂಭವಾದರೆ, ಈ ಹಿಂದೆ ನೀಡಿದ್ದ ಪ್ರತಿಕ್ರಿಯೆಗಿಂತಲೂ ಬಲವಾದ ಪ್ರತಿಕ್ರಿಯೆ ನೀಡಬೇಕಾಗುತ್ತದೆ ಎಂಬ ನಿಲುವಿನಲ್ಲಿ ಇರಾನ್ ನಾಯಕತ್ವವಿದೆ ಎಂದು ವರದಿ ತಿಳಿಸಿದೆ.



ಇರಾನ್‌ಗೆ ಡೊನಾಲ್ಡ್ ಟ್ರಂಪ್ ಖಡಕ್ ವಾರ್ನಿಂಗ್..!

---

## Trump ಎಕನಾಮಿಕ್ ವಾರ್‌ಗೆ ಡೋಂಟ್ ಕೇರ್ ಅಂದ Iran

**ಟೆಹ್ರಾನ್:** ಅಮೆರಿಕ ವಿಧಿಸಿರುವ ಅತ್ಯಂತ ಕಠಿಣ ಆರ್ಥಿಕ ನಿರ್ಬಂಧಗಳು ಮತ್ತು ನೌಕಾಪಡೆಯ ದಿಗ್ಬಂಧನವನ್ನು ಎದುರಿಸಲು ಇರಾನ್ ಸರ್ಕಾರವು "ಹೊಸ ಆರ್ಥಿಕ ಮತ್ತು ಕಾರ್ಯತಾಂತ್ರಿಕ ವ್ಯವಸ್ಥೆಯನ್ನು" ಅಳವಡಿಸಿಕೊಂಡಿದೆ ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಶನಿವಾರ ಘೋಷಿಸಿದ್ದಾರೆ.

ಅಮೆರಿಕದ ತೀವ್ರ ಒತ್ತಡದ ನಡುವೆಯೂ ದೇಶದ ಪ್ರಮುಖ ವಾಣಿಜ್ಯ ಮತ್ತು ಇಂಧನ ಸಂಪರ್ಕಗಳು ಕಡಿತಗೊಳ್ಳದಂತೆ ಇರಾನ್ ಯಶಸ್ವಿಯಾಗಿ ತಡೆದಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, ಇರಾನ್‌ನ ಜನರ ಮೇಲೆ ಒತ್ತಡ ಹೇರಲು ದೇಶದ ಪ್ರಮುಖ ಆರ್ಥಿಕ ಜೀವನಾಡಿಗಳನ್ನು ಕಡಿತಗೊಳಿಸುವುದು ಅಮೆರಿಕ ಸೇರಿದಂತೆ ವಿರೋಧಿಗಳ ಉದ್ದೇಶವಾಗಿದೆ. ಹೆಚ್ಚುತ್ತಿರುವ ಒತ್ತಡದ ನಡುವೆಯೂ ಜನರ ಬೆಂಬಲ ಹಾಗೂ ಸರ್ಕಾರ ಕೈಗೊಂಡ ಕ್ರಮಗಳಿಂದ ಆ ಉದ್ದೇಶಗಳನ್ನು ಈಡೇರಿಸಲು ಅವಕಾಶ ನೀಡಿಲ್ಲ.

ಈ ಪರಿಸ್ಥಿತಿಯನ್ನು ನಿರ್ವಹಿಸಲು ಸರ್ಕಾರ ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಇತ್ತೀಚಿನ ತಿಂಗಳುಗಳಲ್ಲಿ ಶತ್ರುಗಳ ಯೋಜನೆ ಇರಾನ್‌ನ ಗೌರವಾನ್ವಿತ ಜನರ ಮೇಲೆ ಒತ್ತಡ ಹೇರುವ ಉದ್ದೇಶದಿಂದ ದೇಶದ ಪ್ರಮುಖ ಜೀವನಾಡಿಗಳನ್ನು ಕಡಿತಗೊಳಿಸುವುದಾಗಿತ್ತು. ಆರ್ಥಿಕ ಒತ್ತಡ ತೀವ್ರಗೊಂಡಿದೆ. ಆದರೆ, ದೇವರ ಕೃಪೆಯಿಂದ ಜನರ ಬೆಂಬಲ ಹಾಗೂ ಸರ್ಕಾರದ ಸಹೋದ್ಯೋಗಿಗಳು ಕೈಗೊಂಡ ಕ್ರಮಗಳ ನೆರವಿನಿಂದ ಆರ್ಥಿಕ ಯುದ್ಧದಲ್ಲಿ ಶತ್ರುಗಳ ಉದ್ದೇಶಗಳು ಈಡೇರುವುದಕ್ಕೆ ನಾವು ಅವಕಾಶ ನೀಡಿಲ್ಲ ಎಂದು ತಿಳಿಸಿದ್ದಾರೆ.

ಇರಾನ್‌ನ ಆರ್ಥಿಕತೆ ಹಾಗೂ ಇರಾನ್ ಆಡಳಿತ ಮತ್ತು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ಗೆ ಬೆಂಬಲ ನೀಡುತ್ತವೆ ಎಂದು ವಾಷಿಂಗ್ಟನ್ ಆರೋಪಿಸುವ ಜಾಲಗಳ ವಿರುದ್ಧ ಅಮೆರಿಕ ವ್ಯಾಪಕ ನಿರ್ಬಂಧ ಅಭಿಯಾನ ನಡೆಸುತ್ತಿರುವ ಸಂದರ್ಭದಲ್ಲೇ ಪೆಜೆಶ್ಕಿಯಾನ್ ಈ ಹೇಳಿಕೆ ನೀಡಿದ್ದಾರೆ.



---



## ಕ್ಯಾಪ್ಟನ್ ಸ್ಮಿತ್ ಮಚ್ಚರ್ ಸಾಹಸ ಹೊಗಳಿದ ಇಸ್ರೇಲ್ ಪ್ರಧಾನಿ

**ನವದೆಹಲಿ:** ಸೆಪ್ಟಂಬರ್ 30 ರಂದು ದುಬೈನಿಂದ ಟೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ವಿಮಾನದಲ್ಲಿ ಓಮನ್ ಮೂಲದ ಸಹ ಪೈಲಟ್‌ನಿಂದ ಹಲ್ಲೆಗೊಳಗಾದಾಗಲೂ ಅಸಾಧಾರಣ ಧೈರ್ಯ ಪ್ರದರ್ಶಿಸಿ ಹಾಗೂ ಪ್ರಯಾಣಿಕರ ಜೀವ ಉಳಿಸಲು ಹೋರಾಡಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರೊಂದಿಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಾತನಾಡಿದ್ದಾರೆ. ಕಾಕ್‌ಪಿಟ್‌ನೊಳಗೆ ದಾಳಿಕೋರ ಪೈಲಟ್ ಜೊತೆ ನಡೆಸಿದ ಸಂಘರ್ಷದಲ್ಲಿ ನೀವು ತೋರಿದ ತೋರಿದ ಧೈರ್ಯ ಮತ್ತು ಸಂಯಮ ಶ್ಲಾಘನೀಯ ಎಂದು ನೆತನ್ಯಾಹು ಕೊಂಡಾಡಿದ್ದಾರೆ. ಸ್ವಾತಂತ್ರ್ಯೋತ್ಸವಕ್ಕೆ ಆಹ್ವಾನ: ಇದೇ ವೇಳೆ, ಸ್ಮಿತ್ ಮಚ್ಚರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಸ್ರೇಲ್ ಸ್ವಾತಂತ್ರ್ಯೋತ್ಸವಕ್ಕೆ ಆಹ್ವಾನ ನೀಡಿದ್ದಾರೆ. ಇಸ್ರೇಲ್ ಪ್ರಯಾಣಿಕರ ಪ್ರಾಣ ಉಳಿಸಿದ ಭಾರತೀಯ ಪೈಲಟ್ ಸ್ಮಿತ್ ಅವರು, ಭಾರತ, ಇಸ್ರೇಲ್ ಮತ್ತು ವಿಶ್ವದ ಹೀರೋ ಆಗಿದ್ದಾರೆ. ನಮ್ಮ ಮುಂದಿನ ಸ್ವಾತಂತ್ರ್ಯ ದಿನದಂದು ಜ್ಯೋತಿ ಬೆಳಗಿಸಲು ನಾನು ನಿಮ್ಮನ್ನು ಮತ್ತು ನನ್ನ ಆಪ್ತ ಸ್ನೇಹಿತ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಆಹ್ವಾನಿಸಲು ಬಯಸುತ್ತೇನೆ. ನೀವು ಶೀಘ್ರವೇ ಸಂಪೂರ್ಣವಾಗಿ ಚೇತರಿಸಿಕೊಳ್ಳಬೇಕೆಂದು ಹಾರೈಸುತ್ತೇನೆ" ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ದೂರವಾಣಿ ಸಂಭಾಷಣೆ ವೇಳೆ ಹೇಳಿದ್ದಾರೆ.

## ಮಹಿಳೆಯರ ಜೊತೆ ದೆಹಲಿ ಪೊಲೀಸರು ಅನುಚಿತ ವರ್ತನೆ ಆರೋಪ: ಅಮಿತ್ ಶಾ ಉತ್ತರ ನೀಡಲಿ– ರಾಹುಲ್ ಗಾಂಧಿ

**ನವದೆಹಲಿ:** ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯ ವೇಳೆ ಮಹಿಳೆಯರೊಂದಿಗೆ ದೆಹಲಿ ಪೊಲೀಸ್ ಸಿಬ್ಬಂದಿ ಅನುಚಿತವಾಗಿ ವರ್ತಿಸಿದ್ದಾರೆ ಎಂಬ ಆರೋಪಗಳ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ನೀಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ.



ಈ ಬಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ದೆಹಲಿ ಪೊಲೀಸರು ಕೇಂದ್ರ ಗೃಹ ಸಚಿವಾಲಯದ ವ್ಯಾಪ್ತಿಗೆ ಬರುವುದರಿಂದ ಅಮಿತ್ ಶಾ ಅವರು ಇದಕ್ಕೆ ಉತ್ತರಿಸಲೇಬೇಕು ಎಂದು ಕೋರಿದ್ದಾರೆ. "ಜಂತರ್ ಮಂತರ್‌ನಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಅನುಚಿತವಾಗಿ ವರ್ತಿಸಿದ್ದಾರೆ ಎಂದು ಮಹಿಳಾ ಪತ್ರಕರ್ತೆಯೊಬ್ಬರು ಆರೋಪಿಸಿದ್ದಾರೆ. ಇದರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ನೂರಾರು ಪತ್ರಕರ್ತರು ಆಗ್ರಹಿಸಿದ್ದಾರೆ. ಆರೋಪಿಯ ವಿರುದ್ಧದ ದೂರನ್ನು ಪಡೆಯುವುದು ಪೊಲೀಸರ ಮೂಲಭೂತ ಕರ್ತವ್ಯವಲ್ಲವೇ?" ಎಂದು ವಿಪಕ್ಷ ನಾಯಕ ಪ್ರಶ್ನಿಸಿದ್ದಾರೆ.

## ಲಿಂಗ ಸಮಾನತೆಗೆ ಪುರುಷರು–ಮಹಿಳೆಯರ ನಡುವೆ ಸಮಾನ ಪಾಲುದಾರಿಕೆ ಅಗತ್ಯ: ಮಾರ್ಗದರ್ಶಿ ಎಂಡಿ ಶೈಲಜಾ ಕಿರಣ್

**ಹೈದರಾಬಾದ್:** ಲಿಂಗ ಸಮಾನತೆ ಸಾಧಿಸಲು ಸಮಾಜದಲ್ಲಿ ಪುರುಷರು ಮತ್ತು ಮಹಿಳೆಯರಿಬ್ಬರನ್ನೂ ಸಮಾನ ಪಾಲುದಾರರನ್ನಾಗಿ ಪರಿಗಣಿಸುವುದು ಅಗತ್ಯವಾಗಿದೆ. ಸಮಾಜದಲ್ಲಿನ ಪ್ರತಿಯೊಬ್ಬರ ಸಬಲೀಕರಣದಲ್ಲಿ ಶಿಕ್ಷಣ ಮಹತ್ವದ್ದಾಗಿದ್ದು, ಹೊಸ ತಂತ್ರಜ್ಞಾನಗಳನ್ನು ಬಳಸುವಾಗ ಅವುಗಳನ್ನು ಶಿಕ್ಷಕರಿಗೆ ಪರ್ಯಾಯವೆಂದು ಪರಿಗಣಿಸದಂತೆ ಮಾರ್ಗದರ್ಶಿ ಚಿಟ್ ಫಂಡ್‌ನ ವ್ಯವಸ್ಥಾಪಕ ನಿರ್ದೇಶಕಿ ಶೈಲಜಾ ಕಿರಣ್ ಅವರು ವಿದ್ಯಾರ್ಥಿಗಳು ಮತ್ತು ಮಹಿಳೆಯರಿಗೆ ಸಲಹೆ ನೀಡಿದರು. ಶನಿವಾರ ಹೈದರಾಬಾದ್‌ನ ಬಾಗ್ ಲಿಂಗಂಪಲ್ಲಿಯಲ್ಲಿರುವ ಕಾಕಾ ಅವರ ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ''Women in Leadership: Breaking Barriers, Building Legacies' ಎಂಬ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. ನಾಯಕತ್ವದ ಸ್ಥಾನಗಳಲ್ಲಿರುವ ಮಹಿಳೆಯರು ಪುರುಷರಿಗಿಂತ ಹೆಚ್ಚಾಗಿ ತ್ಯಾಗಗಳನ್ನು ಮಾಡಬೇಕಾಗುತ್ತದೆ. ಮಹಿಳೆಯರು ತಮಗೆ ಸಿಗುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದ ಅವರು, ತಮಗೆ 27ನೇ ವಯಸ್ಸಿನಲ್ಲೇ ಮಾರ್ಗದರ್ಶಿ ಸಂಸ್ಥೆಯನ್ನು ಮುನ್ನಡೆಸುವ ಅವಕಾಶ ಸಿಕ್ಕಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಿದರು. ಜೀವನದಲ್ಲಿ ಎಷ್ಟೇ ಕಷ್ಟಗಳು ಎದುರಾದರೂ ನಿಮ್ಮ ಗುರಿಯಿಂದ ಹಿಂದೆ ಸರಿಯಬೇಡಿ. ಮಹಿಳೆಯರು ದೃಢವಾಗಿ ನಿಂತು, ತಮ್ಮ ಆಕಾಂಕ್ಷೆಗಳನ್ನು ಸಾಕಾರಗೊಳಿಸಿಕೊಳ್ಳಬೇಕು. ಲಿಂಗ ಸಮಾನತೆಯನ್ನು ಕೇವಲ ಮಹಿಳೆಯರ ವಿಷಯವೆಂದು ಪರಿಗಣಿಸಬಾರದು. ಲಿಂಗ ಸಮಾನತೆಯು ಕೇವಲ ಮಹಿಳೆಯರಿಗೆ ಸಂಬಂಧಿಸಿದ್ದಲ್ಲ; ಮಹಿಳೆಯರು ಮತ್ತು ಪುರುಷರಿಬ್ಬರೂ ಅದನ್ನು ಬಯಸಿದರೆ ಮಾತ್ರ ಅದನ್ನು ಸಾಧಿಸಲು ಸಾಧ್ಯ ಶೈಲಜಾ ಕಿರಣ್ ತಿಳಿಸಿದರು.



## ಕ್ಯಾಪ್ಟನ್ ಸ್ಮಿತ್ ಮಚ್ಚರ್ ಭೇಟಿಯಾದ ಯುಎಇ ರಾಜಕುಮಾರ: ಪೈಲಟ್ ಆರೋಗ್ಯದಲ್ಲಿ ಚೇತರಿಕೆ

**ನವದೆಹಲಿ:** ದುಬೈನಿಂದ ಇಸ್ರೇಲ್‌ಗೆ ಹೊರಟಿದ್ದ ಫ್ಲೈದುಬೈ ವಿಮಾನದಲ್ಲಿ ಸಹ ಪೈಲಟ್‌ನಿಂದ ಮಾರಣಾಂತಿಕ ದಾಳಿಗೆ ತುತ್ತಾದರೂ, ಆತನ ವಿರುದ್ಧ ಹೋರಾಡಿ ಪ್ರಯಾಣಿಕರ ಪ್ರಾಣ ಉಳಿಸಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರನ್ನು ದುಬೈ ರಾಜಕುಮಾರ ಶೇಖ್ ಹಮ್ದಾನ್ ಬಿನ್ ಮೊಹಮದ್ ಬಿನ್ ರಶೀದ್ ಅಲ್ ಮಕ್ತೂಮ್ ಅವರು ಭೇಟಿಯಾಗಿ ಸಾಹಸವನ್ನು ಕೊಂಡಾಡಿದ್ದಾರೆ.

ಸ್ಮಿತ್ ಮಚ್ಚರ್ ಅವರನ್ನು ಚಿಕಿತ್ಸೆಗಾಗಿ ದಾಖಲಿಸಿರುವ ಆಸ್ಪತ್ರೆಗೆ ತೆರಳಿದ್ದ ರಾಜಕುಮಾರ ಪೈಲಟ್ ಜೊತೆ ಆತ್ಮೀಯವಾಗಿ ಮಾತನಾಡಿ ಬೇಗ ಚೇತರಿಸಿಕೊಳ್ಳುವಂತೆ ಧೈರ್ಯ ಹೇಳಿದ್ದಾರೆ. ಸ್ಮಿತ್ ಜೊತೆಗಿನ ಖಾಸಗಿ ಭೇಟಿಯ ಚಿತ್ರಗಳನ್ನು ಅವರು ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. "ಫ್ಲೈದುಬೈ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರನ್ನು ಭೇಟಿಯಾದ ಕ್ಷಣಗಳು. ಮಾನವ ಜೀವಗಳ ಮೇಲಿನ ಕಾಳಜಿ, ಜವಾಬ್ದಾರಿ ಮತ್ತು ಅತ್ಯುನ್ನತ ಧೈರ್ಯ ಪ್ರದರ್ಶಿಸಿದ ಪೈಲಟ್ ಇವರಾಗಿದ್ದಾರೆ. ನಮ್ಮ ಮತ್ತು ದೇಶದ ಪರವಾಗಿ ಅವರಿಗೆ ಸಂಪೂರ್ಣ ಮೆಚ್ಚುಗೆ ಮತ್ತು ಪ್ರಶಂಸೆ ಇದೆ. ಅವರು ನಮ್ಮ ತಂಡ, ನಮ್ಮ ರಾಷ್ಟ್ರದ ಯಶೋಗಾಥೆ, ಯುಎಇ ಪ್ರತಿನಿಧಿಸುವ ಕರುಣೆ, ಶಾಂತಿ, ಜೀವದ ರಾಷ್ಟ್ರದ ಮೌಲ್ಯಗಳ ಭಾಗವಾಗಿರುವುದಕ್ಕೆ ನಮಗೆ ಹೆಮ್ಮೆಯಿದೆ ಎಂದು ಶೇಖ್ ಹಮ್ದಾನ್ ಅವರು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.



**ಸ್ಮಿತ್‌ಗೆ ಅತ್ಯುತ್ತಮ ಚಿಕಿತ್ಸೆ, ಉತ್ತಮ ಚೇತರಿಕೆ:** ಸಹ ಪೈಲಟ್ ನಡೆಸಿದ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಮಚ್ಚರ್ ಅವರು ಉತ್ತಮವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಅವರಿಗೆ ಅತ್ಯುತ್ತಮ ವೈದ್ಯಕೀಯ ಚಿಕಿತ್ಸೆ ಒದಗಿಸಲಾಗುತ್ತಿದೆ ಎಂದು ಯುಎಇಯಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ನಾವು ಅವರ ಕುಟುಂಬ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ಮಚ್ಚರ್ ಅವರಿಗೆ ಉತ್ತಮ ವೈದ್ಯಕೀಯ ಚಿಕಿತ್ಸೆಗಾಗಿ ಬೆಂಬಲ ನೀಡಿದ್ದಕ್ಕೆ ಯುಎಇ ಸರ್ಕಾರಕ್ಕೆ ರಾಯಭಾರ ಕಚೇರಿ ಇದೇ ವೇಳೆ ಧನ್ಯವಾದ ಅರ್ಪಿಸಿದೆ.

---

## ಕಾಕ್‌ರೋಚ್ ಜನತಾ ಪಾರ್ಟಿ ಸಂಸ್ಥಾಪಕ Abhijeet Dipkeಗೆ ರಾಮದಾಸ್ ಅಠಾವಳೆ ಖಡಕ್ ವಾರ್ನಿಂಗ್!

# ಅಂಬೇಡ್ಕರ್ ಬಗ್ಗೆ ತಪ್ಪು–ತಪ್ಪು ಹೇಳಿಕೆ ನೀಡಬೇಡಿ, ಕ್ಷಮೆಯಾಚಿಸಿ

**ಮುಂಬೈ:** ಡಾ. ಬಿ.ಆರ್. ಅಂಬೇಡ್ಕರ್, ಪ್ರಧಾನಿ ನರೇಂದ್ರ ಮೋದಿ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎನ್ನಲಾದ 'ಕಾಕ್‌ರೋಚ್ ಜನತಾ ಪಾರ್ಟಿ' ಸಂಸ್ಥಾಪಕ ಅಭಿಜಿತ್ ದಿಪ್ಕೆ ವಿರುದ್ಧ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಅಠಾವಳೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಂಬೈನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಠಾವಳೆ, ದಿಪ್ಕೆ ಇಂತಹ ಹೇಳಿಕೆಗಳನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಡಾ. ಬಿ.ಆರ್. ಅಂಬೇಡ್ಕರ್ ಕುರಿತು ನೀಡಿರುವ ಹೇಳಿಕೆಗೆ ದಿಪ್ಕೆ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

**ಅಂಬೇಡ್ಕರ್ ಬಗ್ಗೆ ಹೇಳಿಕೆಗೆ ಅಠಾವಳೆ ಆಕ್ಷೇಪ:** ಜವಾಹರಲಾಲ್ ನೆಹರು ಅವರು ಅಂಬೇಡ್ಕರ್ ಅವರನ್ನು ಮುನ್ನೆಲೆಗೆ ತಂದರು ಎಂಬರ್ಥದ ಹೇಳಿಕೆಯನ್ನು ದಿಪ್ಕೆ ನೀಡಿದ್ದಾರೆ ಎನ್ನಲಾಗಿದ್ದು, ಇದಕ್ಕೆ ಅಠಾವಳೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

"ಅಭಿಜಿತ್ ದಿಪ್ಕೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬಗ್ಗೆ ತಪ್ಪು ಹೇಳಿಕೆ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಬಗ್ಗೆಯೂ ಅತ್ಯಂತ ಆಕ್ಷೇಪಾರ್ಹ ಮತ್ತು ಅಗೌರವದ ಹೇಳಿಕೆಗಳನ್ನು ನೀಡಿದ್ದಾರೆ. ಅವರು ಇಂತಹ ಹೇಳಿಕೆಗಳನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಆರ್‌ಪಿಐ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ" ಎಂದು ಅಠಾವಳೆ ಹೇಳಿದ್ದಾರೆ.

ಅಂಬೇಡ್ಕರ್ ಅವರು ಭಾರತದ ಸಂವಿಧಾನ ರಚನೆ ಸೇರಿದಂತೆ ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ಕೊಡುಗೆಯನ್ನು ಕಡೆಗಣಿಸುವ ರೀತಿಯಲ್ಲಿ ಹೇಳಿಕೆ ನೀಡುವುದು ಸರಿಯಲ್ಲ ಎಂದು ಅಠಾವಳೆ ಹೇಳಿದ್ದಾರೆ.



**1.** ಅಂಬೇಡ್ಕರ್, ಮೋದಿ ಹಾಗೂ ಫಡ್ನವೀಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ
**2.** ಅಭಿಜಿತ್ ದಿಪ್ಕೆ ವಿರುದ್ಧ ರಾಮದಾಸ್ ಅಠಾವಳೆ ಆಕ್ರೋಶ
**3.** ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಕಠಿಣ ಕ್ರಮದ ಎಚ್ಚರಿಕೆ

### ಆಗಸ್ಟ್‌ನಲ್ಲೂ ನಡೆದಿತ್ತು ವಾಕ್ಸಮರ

ಅಠಾವಳೆ ಮತ್ತು ದಿಪ್ಕೆ ನಡುವಿನ ವಾಕ್ಸಮರ ಇದೇ ಮೊದಲಲ್ಲ. ಆಗಸ್ಟ್ 17ರಂದು ಅಠಾವಳೆ ಅವರು ದಿಪ್ಕೆಯನ್ನು ತಮ್ಮ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠಾವಳೆ)ಗೆ ಸೇರುವಂತೆ ಆಹ್ವಾನಿಸಿದ್ದರು. ದಿಪ್ಕೆ ಅಂಬೇಡ್ಕರ್‌ವಾದಿ ಹಾಗೂ ಯುವ ನಾಯಕನಾಗಿದ್ದು, ಅವರು ತಮ್ಮ ಪಕ್ಷಕ್ಕೆ ಸೇರಿದರೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕನಸನ್ನು ಈಡೇರಿಸಲು ಹೆಚ್ಚು ಕೆಲಸ ಮಾಡಬಹುದು ಎಂದು ಅಠಾವಳೆ ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ದಿಪ್ಕೆ, ಅಠಾವಳೆ ಅವರ ನಿಲುವಿನ ಬದಲಾವಣೆಯನ್ನು ಪ್ರಶ್ನಿಸಿದ್ದರು.

ದಿಪ್ಕೆ ಅವರಿಗೆ ವಿದ್ಯಾರ್ಥಿಗಳು ಹಾಗೂ ಯುವಕರಲ್ಲಿ ಬೆಂಬಲವಿದೆ. ಆ ಬೆಂಬಲವನ್ನು ಸಾರ್ವಜನಿಕ ಸಮಸ್ಯೆಗಳನ್ನು ಎತ್ತಿಹಿಡಿಯಲು ಬಳಸಬೇಕು ಹೊರತು ಪ್ರಮುಖ ವ್ಯಕ್ತಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ವಿರುದ್ಧ ಅನಗತ್ಯ ಹೇಳಿಕೆಗಳನ್ನು ನೀಡಲು ಬಳಸಬಾರದು ಎಂದು ಅಠಾವಳೆ ಸಲಹೆ ನೀಡಿದ್ದಾರೆ.

**ಮೋದಿ, ಫಡ್ನವೀಸ್ ಬಗ್ಗೆಯೂ ಹೇಳಿಕೆಗೆ ವಿರೋಧ:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಸಮರ್ಥಿಸಿಕೊಂಡ ಅಠಾವಳೆ, ಮೋದಿ ಅವರು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ ಎಂದು ಹೇಳಿದ್ದಾರೆ.

**ಮಹಾರಾಷ್ಟ್ರದ ವಿವಿಧ ಭಾಗಗಳಿಗೆ ಭೇಟಿ ನೀಡುತ್ತಿರುವ ದಿಪ್ಕೆ, ರಾಜ್ಯದಲ್ಲಿ ನಡೆಯುತ್ತಿರುವ ಮೂಲಸೌಕರ್ಯ ಅಭಿವೃದ್ಧಿಯನ್ನೂ ಗಮನಿಸಬೇಕು. ಚುನಾಯಿತ ನಾಯಕರ ವಿರುದ್ಧ ಅಗೌರವದ ಹೇಳಿಕೆಗಳನ್ನು ನೀಡುವುದನ್ನು ಅವರು ನಿಲ್ಲಿಸಬೇಕು. ರಾಜಕೀಯ ನಾಯಕರನ್ನು ಟೀಕಿಸುವುದು ಪ್ರಜಾಪ್ರಭುತ್ವದಲ್ಲಿ ಸಹಜ. ಆದರೆ ಜವಾಬ್ದಾರಿಯುತ ಸಾರ್ವಜನಿಕ ಚರ್ಚೆಯ ಎಲ್ಲೆ ಮೀರಬಾರದು.**

– ರಾಮದಾಸ್ ಅಠಾವಳೆ, ಕೇಂದ್ರದ ರಾಜ್ಯ ಖಾತೆ ಸಚಿವ

**'ಸ್ಕೂಲ್ ಠೀಕ್ ಕರೋ' ಅಭಿಯಾನ:** ಇತ್ತ ಅಭಿಜಿತ್ ದಿಪ್ಕೆ ಮಹಾರಾಷ್ಟ್ರದ ಸರ್ಕಾರಿ ಶಾಲೆಗಳ ಸಮಸ್ಯೆಗಳನ್ನು ಮುಂದಿಟ್ಟುಕೊಂಡು 'ಸ್ಕೂಲ್ ಠೀಕ್ ಕರೋ' ಅಭಿಯಾನ ನಡೆಸುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿನ ಸಮಸ್ಯೆಗಳನ್ನು ತೋರಿಸುವ ವಿಡಿಯೋಗಳನ್ನು ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಜಿಲ್ಲಾ ಪಂಚಾಯತ್ ಶಾಲೆಯ ಮುಖ್ಯ ಶಿಕ್ಷಕರೊಬ್ಬರು ತರಗತಿ ಕೊಠಡಿಯಲ್ಲೇ ಮದ್ಯ ಸೇವಿಸಿ ಮಲಗಿದ್ದರು ಎಂದು ಆರೋಪಿಸಲಾದ ವಿಡಿಯೋವನ್ನು ದಿಪ್ಕೆ ಹಂಚಿಕೊಂಡ ಬಳಿಕ, ಮಹಾರಾಷ್ಟ್ರದ ಅಧಿಕಾರಿಗಳು ಶಿಕ್ಷಕರೊಬ್ಬರನ್ನು ಅಮಾನತುಗೊಳಿಸಿದ್ದರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದಿರುವ ಬಗ್ಗೆಯೂ ದಿಪ್ಕೆ ಸರ್ಕಾರವನ್ನು ಟೀಕಿಸಿದ್ದಾರೆ. ಮಕ್ಕಳು ಶಾಲೆಗೆ ತೆರಳಲು ಹಲವು ಕಿಲೋಮೀಟರ್ ನಡೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ ಎಂದು ಅವರು ಆರೋಪಿಸಿದ್ದಾರೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಲ್ಲೇ ಓದಿಸುವುದನ್ನು ಕಡ್ಡಾಯಗೊಳಿಸಬೇಕು ಹಾಗೂ ಸಚಿವರು ಮತ್ತು ರಾಜಕಾರಣಿಗಳು ಕನಿಷ್ಠ ಒಂದು ದಿನವಾದರೂ ತಮ್ಮ ಮಕ್ಕಳನ್ನು ಗ್ರಾಮೀಣ ಸರ್ಕಾರಿ ಶಾಲೆಗೆ ಕಳುಹಿಸಿ ಅಲ್ಲಿನ ಸಮಸ್ಯೆಗಳನ್ನು ಅರಿಯಬೇಕು ಎಂದು ದಿಪ್ಕೆ ಒತ್ತಾಯಿಸಿದ್ದಾರೆ.

# ಧ್ರುವ ಸರ್ಜಾ–ವಿಶಾಲ್ ಅತ್ರೇಯ ಸಿನಿಮಾ ಮೂಲಕ ಮತ್ತೆ ಕನ್ನಡಕ್ಕೆ ಮರಳಿದ ನಭಾ ನಟೇಶ್!



ತಮ್ಮ ಚೊಚ್ಚಲ ಚಿತ್ರ 'ತತ್ಸಮ ತದ್ಭವ'ದ ಮೂಲಕ ವಿಮರ್ಶಕರ ಮೆಚ್ಚುಗೆ ಗಳಿಸಿದ್ದ ನಿರ್ದೇಶಕ ವಿಶಾಲ್ ಆತ್ರೇಯ, 'ಆಕ್ಷನ್ ಪ್ರಿನ್ಸ್' ಧ್ರುವ ಸರ್ಜಾ ಅವರೊಂದಿಗೆ ಹೊಸ ಚಿತ್ರವೊಂದರ ಕುರಿತು ಮಾತುಕತೆ ನಡೆಸುತ್ತಿದ್ದಾರೆ ಎಂದು ನಾವು ಈ ಹಿಂದೆ ವರದಿ ಮಾಡಿದ್ದೆವು.

ಇದೀಗ ಈ ಪ್ಲಾನ್ ಫೈನಲ್ ಆಗಿದ್ದು ಇಬ್ಬರು ಸೇರಿ ಒಂದು ಪೂರ್ಣ ಪ್ರಮಾಣದ ಮನರಂಜನಾತ್ಮಕ ಚಿತ್ರವನ್ನು (complete entertainer) ನೀಡಲು ಸಜ್ಜಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಧ್ರುವ ಅವರ ಆಕ್ಷನ್ ಪಾತ್ರಗಳಿಂದ ಭಿನ್ನವಾಗಿ, ಈ ಚಿತ್ರದಲ್ಲಿ ಅವರನ್ನು ಹೊಸ ಶೈಲಿಯಲ್ಲಿ ತೋರಿಸಲು ಯೋಜಿಸಲಾಗಿದೆ. 'ಪೀಪಲ್ ಮೀಡಿಯಾ ಫ್ಯಾಕ್ಟರಿ' ಬ್ಯಾನರ್ ಅಡಿಯಲ್ಲಿ ಟಿ.ಜಿ. ವಿಶ್ವ ಪ್ರಸಾದ್ ನಿರ್ಮಿಸುತ್ತಿರುವ ಈ ಬೃಹತ್ ಯೋಜನೆಯ ಅಧಿಕೃತ ಘೋಷಣೆಯು ಧ್ರುವ ಸರ್ಜಾ ಅವರ ಹುಟ್ಟುಹಬ್ಬದಂದು ವಿಶೇಷ ಉಡುಗೊರೆಯಾಗಿ ಹೊರಬರಲಿದೆ.

ಈ ಸಿನಿಮಾ ಮೂಲಕ ನಭಾ ನಟೇಶ್ ಅವರ ಕನ್ನಡ ಚಿತ್ರರಂಗಕ್ಕೆ ಮರುಪ್ರವೇಶಿಸುತ್ತಿದ್ದಾರೆ. 2015ರಲ್ಲಿ ವಜ್ರಕಾಯದಲ್ಲಿ ಶಿವರಾಜ್‌ಕುಮಾರ್ ಅವರಿಗೆ ನಾಯಕಿಯಾಗಿ ನಟಿಸುವ ಮೂಲಕ ನಭಾ ನಟೇಶ್ ಚೊಚ್ಚಲ ಪ್ರವೇಶ ಮಾಡಿದ್ದರು.

ಎ. ಹರ್ಷ ನಿರ್ದೇಶನದ ಈ ಚಿತ್ರವು ಅವರಿಗೆ "ಪಟಾಕ ಹುಡುಗಿ" ಎಂಬ ಜನಪ್ರಿಯ ಹಣೆಪಟ್ಟಿಯನ್ನು ತಂದುಕೊಟ್ಟಿತ್ತು. ನಂತರ ಅವರು ಲೀ ಎಂಬ ಆಕ್ಷನ್ ಥ್ರಿಲ್ಲರ್ ಚಿತ್ರದಲ್ಲಿ ನಟಿಸಿದರು. ತದನಂತರ ತೆಲುಗು ಚಿತ್ರರಂಗದತ್ತ ಮುಖಮಾಡಿದ ಅವರು, 'ನನ್ನು ದೋಚುಕುಂದುವಟೆ' ಚಿತ್ರದ ಮೂಲಕ ದೊಡ್ಡ ಯಶಸ್ಸನ್ನು ಕಂಡರು.

ನಂತರ ಪುರಿ ಜಗನ್ನಾಥ್ ಅವರ ಇಸ್ಮಾರ್ಟ್ ಶಂಕರ್ ಚಿತ್ರದಲ್ಲಿ ನಟಿಸಿದರು. ನಭಾ ಅವರು ಸೋಲೋ ಬ್ರತುಕೆ ಸೋ ಬೆಟರ್, ಡಿಸ್ಕೋ ರಾಜ, ಅಲ್ಲುಡು ಅಧುರ್ಸ್, ಮೇಸ್ಟ್ರೋ ಮತ್ತು ಡಾರ್ಲಿಂಗ್ ಸೇರಿದಂತೆ ಹಲವು ತೆಲುಗು ಚಿತ್ರಗಳಲ್ಲಿ ನಟಿಸಿದ್ದಾರೆ.

**ಅವರ ಇತ್ತೀಚಿನ ಚಿತ್ರಗಳಲ್ಲಿ ನಗಬಂಧಮ್:** ದಿ ಸೀಕ್ರೆಟ್ ಟ್ರೆಷರ್ ಮತ್ತು ಸ್ವಯಂಭು ಸೇರಿವೆ. ಕಳೆದ ಕೆಲವು ವರ್ಷಗಳಲ್ಲಿ, ಅವರು ತೆಲುಗು ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದು, ವಿವಿಧ ಪ್ರಕಾರದ ಚಿತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ.



# ಪ್ರೇಮದ ಊರಲಿ ಕಲೆಕ್ಷನ್ ಜೋರು; ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸಿ, 10 ಕೋಟಿಯತ್ತ ದಾಪುಗಾಲು

ಕನ್ನಡ ಚಿತ್ರರಂಗದಲ್ಲಿ ಯಾವುದೇ ದೊಡ್ಡ ಆರ್ಭಟವಿಲ್ಲದೆ ಬಿಡುಗಡೆಯಾಗಿ, ಪ್ರೇಕ್ಷಕರ ಅದ್ಭುತ ಮೌತ್ ಪಬ್ಲಿಸಿಟಿಯಿಂದ ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸುತ್ತಿರುವ ಪ್ರೇಮದ ಊರಲಿ ಸಿನಿಮಾ 8ನೇ ದಿನದ ಕಲೆಕ್ಷನ್‌ನಲ್ಲಿ ಭಾರಿ ಜಿಗಿತ ಕಂಡಿದೆ. ಸೆಪ್ಟೆಂಬರ್ 25ರಂದು ಕೇವಲ 45 ರಿಂದ 60 ಪ್ರದರ್ಶನಗಳೊಂದಿಗೆ ಆರಂಭವಾದ ಈ ಸಿನಿಮಾ, ಪ್ರೇಕ್ಷಕರ ಭಾರಿ ಬೇಡಿಕೆಯಿಂದಾಗಿ 2ನೇ ವಾರದ ವೇಳೆಗೆ ಬರೋಬ್ಬರಿ 700ಕ್ಕೂ ಅಧಿಕ ಶೋಗಳನ್ನು ಪಡೆದುಕೊಂಡಿದೆ. ಆ ಕುರಿತ ವರದಿ ಇಲ್ಲಿದೆ:

**8ನೇ ದಿನದ ಕಲೆಕ್ಷನ್ ಧಮಾಕಾ**

ಕೇವಲ 2 ರಿಂದ 2.50 ಕೋಟಿ ಬಜೆಟ್‌ನಲ್ಲಿ ಯಾವುದೇ ದೊಡ್ಡ ಅಬ್ಬರವಿಲ್ಲದೆ ನಿರ್ಮಾಣವಾದ ಪ್ರೇಮದ ಊರಲಿ ಸಿನಿಮಾ, ಸೆಪ್ಟೆಂಬರ್ 25ರಂದು ಚಿತ್ರಮಂದಿರಗಳಿಗೆ ಲಗ್ಗೆಯಿಟ್ಟ ಚಿತ್ರಕ್ಕೆ ಆರಂಭದಲ್ಲಿ ದೊಡ್ಡ ಮಟ್ಟದ ಓಪನಿಂಗ್ ಸಿಕ್ಕಿರಲಿಲ್ಲ. ಕೇವಲ 13 ಲಕ್ಷ ರೂಪಾಯಿಯೊಂದಿಗೆ ತನ್ನ ಖಾತೆ ತೆರೆದಿತ್ತು, ಆದರೆ, ಚಿತ್ರಕ್ಕೆ ದೊಡ್ಡ ಬಲ ನೀಡಿದ್ದು ಪ್ರೇಕ್ಷಕರ ಮೆಚ್ಚುಗೆಯ ಮಾತುಗಳು. ಜನರಿಂದ ಜನರಿಗೆ ಹರಡಿದ ಸಕಾರಾತ್ಮಕ ವಿಮರ್ಶೆಗಳಿಂದಾಗಿ ವಾರದ ಕೆಲಸದ ದಿನಗಳಲ್ಲೂ ಚಿತ್ರದ ಗಳಿಕೆ ನಿರಂತರವಾಗಿ ಏರಿಕೆಯಾಗುತ್ತಾ ಹೋಯಿತು. ಸೆಪ್ಟೆಂಬರ್ 29 ರ ಮಂಗಳವಾರ 1.9ಕೋಟಿ ರೂಪಾಯಿ ಗಳಿಸಿದರೆ, ಬುಧವಾರ 1.28 ಕೋಟಿ ರೂಪಾಯಿ ಹಾಗೂ ಗುರುವಾರ 1.86 ಕೋಟಿ ರೂಪಾಯಿ ಸಂಗ್ರಹಿಸಿ ಅಚ್ಚರಿ ಮೂಡಿಸಿತು. ಆದರೆ, ಬಾಕ್ಸ್ ಆಫೀಸ್‌ನಲ್ಲಿ ಧಮಾಕಾ ಸೃಷ್ಟಿಸಿದ್ದು, ಅಕ್ಟೋಬರ್ 2ರ ಗಾಂಧಿ ಜಯಂತಿ ರಜಾದಿನದಂದು ಸಿನಿಮಾ ಬರೋಬ್ಬರಿ 3.16 ಕೋಟಿಗಿಂತಲೂ ಅಧಿಕ ಗ್ರಾಸ್ ಕಲೆಕ್ಷನ್ ಮಾಡಿದೆ. ಅದರಂತೆ, ಒಟ್ಟು 8 ದಿನಗಳ ಥಿಯೇಟರ್ ರನ್ ಮುಕ್ತಾಯದ ವೇಳೆಗೆ ಈ ಸಿನಿಮಾ ವಿಶ್ವಾದ್ಯಂತ ಒಟ್ಟು 9.82 ಕೋಟಿ ಗ್ರಾಸ್ ಕಲೆಕ್ಷನ್ (8.59 ಕೋಟಿ ನೆಟ್) ಬಾಚಿಕೊಳ್ಳುವ ಮೂಲಕ 10 ಕೋಟಿಯ ಬೃಹತ್ ಮೈಲಿಗಲ್ಲಿನ ಸಮೀಪದಲ್ಲಿದೆ.

**ಹಾಗಾದ್ರೆ, ಸಿನಿಮಾ ಯಶಸ್ಸಿಗೆ ಕಾರಣವೇನು?**

**ಶೋಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳ:** ಮೊದಲ ದಿನ ರಾಜ್ಯಾದ್ಯಂತ ಕೇವಲ 45 ರಿಂದ 60 ಶೋಗಳೊಂದಿಗೆ ಆರಂಭವಾಗಿದ್ದ ಈ ಚಿತ್ರ, ಪ್ರೇಕ್ಷಕರ ಅದ್ಭುತ ಪ್ರತಿಕ್ರಿಯೆಯಿಂದಾಗಿ ಪ್ರಸ್ತುತ ದಿನಕ್ಕೆ 486 ರಿಂದ 700 ಕ್ಕೂ ಹೆಚ್ಚು ಶೋಗಳಿಗೆ ಜಿಗಿತ ಕಂಡಿದೆ. ಹಳ್ಳಿಯ ಸೊಗಡಿನ ಸರಳ ಕೌಟುಂಬಿಕ ಕಥೆ, ಮುಗ್ಧ ಪ್ರೀತಿ ಮತ್ತು ಭಾವನಾತ್ಮಕ ನಿರೂಪಣೆಗೆ ಫ್ಯಾಮಿಲಿ ಆಡಿಯನ್ಸ್ ಫಿದಾ ಆಗಿದ್ದಾರೆ. ಚಿತ್ರವನ್ನು ನೋಡಿದವರು ನೀಡಿದ ಅತ್ಯುತ್ತಮ ವಿಮರ್ಶೆಗಳೇ ಚಿತ್ರಮಂದಿರಗಳತ್ತ ಜನಸಾಗರ ಹರಿದುಬರಲು ಕಾರಣವಾಗಿದೆ.

**ಸತತ ರಜೆಗಳ ಲಾಭ:** ಗಾಂಧಿ ಜಯಂತಿಯ ಸರ್ಕಾರಿ ರಜೆ ಹಾಗೂ ವೀಕೆಂಡ್ (ಶನಿವಾರ, ಭಾನುವಾರ) ಒಟ್ಟಿಗೆ ಬಂದಿರುವುದು ಚಿತ್ರದ ಕಲೆಕ್ಷನ್ ಗತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಒಟ್ಟಾರೆಯಾಗಿ, ಚಂದನವನದಲ್ಲಿ ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬರುತ್ತಿಲ್ಲ ಎಂಬ ಕೊರಗಿನ ನಡುವೆ, ಶ್ರೀರಾಮ್ ಹಾಗೂ ತಪಸ್ವಿನಿ ಪೂಣಚ್ಚ ನಟನೆಯ ಈ ಚಿತ್ರವು ಸಣ್ಣ ಬಜೆಟ್ ಸಿನಿಮಾಗಳ ಪವರ್ ಏನೆಂಬುದನ್ನು ಬಾಕ್ಸ್ ಆಫೀಸ್‌ನಲ್ಲಿ ಸಾಬೀತುಪಡಿಸುತ್ತಿದೆ. ಅದರಂತೆ, ಈ ಸಣ್ಣ ಬಜೆಟ್ ಸಿನಿಮಾದ ಯಶಸ್ಸು ಸ್ಯಾಂಡಲ್‌ವುಡ್‌ಗೆ ಹೊಸ ಭರವಸೆ ನೀಡಿದ್ದು, ಚಿತ್ರವು ಇದೀಗ ತೆಲುಗಿಗೂ ಡಬ್ ಆಗಿ ಬಿಡುಗಡೆಯಾಗಿದೆ.




# ಕನ್ನಡ ಚಿತ್ರರಂಗದಲ್ಲಿ ಖಳನಾಯಕಿಯಾಗಿ ಮಿಂಚಿದ್ದ ಹಿರಿಯ ನಟಿ ಲಲಿತಮ್ಮ ಇನ್ನಿಲ್ಲ..!

ಹಲವು ಸಿನಿಮಾ, ಧಾರಾವಾಹಿ ಹಾಗೂ ನಾಟಕಗಳಲ್ಲಿ ಅಭಿನಯಿಸಿ ಜನರ ಮನ ಗೆದ್ದಿದ್ದ ಹಿರಿಯ ಕಲಾವಿದೆ ಲಲಿತಮ್ಮ ಅವರು ಭಾನುವಾರ ನಿಧನರಾಗಿದ್ದಾರೆ.

ಕಳೆದ ಎರಡೂವರೆ ತಿಂಗಳಿನಿಂದ ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ ಲಲಿತಮ್ಮ ಅವರ ಆರೋಗ್ಯ ಸ್ಥಿತಿ ಇತ್ತೀಚೆಗೆ ಮತ್ತಷ್ಟು ಹದಗೆಟ್ಟಿತ್ತು.

ಅನಾರೋಗ್ಯದ ಸಂದರ್ಭದಲ್ಲಿ ಅವರನ್ನು ನೋಡಿಕೊಳ್ಳಲು ಯಾರೂ ಇಲ್ಲದ ಹಿನ್ನೆಲೆಯಲ್ಲಿ ಕಷ್ಟದ ಪರಿಸ್ಥಿತಿಯಲ್ಲಿದ್ದ ಅವರಿಗೆ 'ಅಮ್ಮನ ಮಡಿಲು ಟ್ರಸ್ಟ್' ಆಶ್ರಯ ನೀಡಿತ್ತು. ಕಳೆದ ಹತ್ತು ದಿನಗಳಿಂದ ವೃದ್ಧಾಶ್ರಮದಲ್ಲೇ ಅವರಿಗೆ ಚಿಕಿತ್ಸೆ ಹಾಗೂ ಆರೈಕೆ ನೀಡಲಾಗುತ್ತಿತ್ತು.

ಲಲಿತಮ್ಮ ಅವರ ನಿಧನವನ್ನು 'ಅಮ್ಮನ ಮಡಿಲು ಟ್ರಸ್ಟ್' ಖಚಿತಪಡಿಸಿದೆ. ಟ್ರಸ್ಟ್‌ನ ಶಶಿಕಲಾ ಅವರು ವಿಡಿಯೋ ಮೂಲಕ ಶ್ರದ್ಧಾಂಜಲಿ ಸಲ್ಲಿಸಿ, "ಲಲಿತಮ್ಮ ಅವರು 180ಕ್ಕೂ ಅಧಿಕ ನಾಟಕಗಳಲ್ಲಿ ಅಭಿನಯಿಸಿದ್ದರು. 'ರಂಗೋಲಿ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ಅವರು ನಟಿಸಿದ್ದರು. ಅವರು ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ" ಎಂದು ಸಂತಾಪ ಸೂಚಿಸಿದ್ದಾರೆ.

ನಟ ದರ್ಶನ್ ಅಭಿನಯದ 'ಸುಂಟರಗಾಳಿ' ಸಿನಿಮಾದಲ್ಲಿ ಲಲಿತಮ್ಮ ಅವರು ಖಳನಾಯಕಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈ ಸಿನಿಮಾದ ಮೂಲಕ ಅವರಿಗೆ ಅಪಾರ ಜನಪ್ರಿಯತೆ ದೊರೆತಿತ್ತು. ಬಳಿಕ 'ಜಂಗ್ಲಿ', 'ಲೈಫು ಇಷ್ಟೇನೆ' ಸೇರಿದಂತೆ ಹಲವು ಸಿನಿಮಾಗಳಲ್ಲೂ ಅವರು ಅಭಿನಯಿಸಿದ್ದರು. ರಂಗಭೂಮಿಯಲ್ಲೂ ಲಲಿತಮ್ಮ ಅವರಿಗೆ ಸುದೀರ್ಘ ಅನುಭವವಿತ್ತು. 180ಕ್ಕೂ ಅಧಿಕ ನಾಟಕಗಳಲ್ಲಿ ಅವರು ಅಭಿನಯಿಸಿದ್ದರು. 'ರಂಗೋಲಿ' ಸೇರಿದಂತೆ ಹಲವು ಜನಪ್ರಿಯ ಧಾರಾವಾಹಿಗಳಲ್ಲೂ ತಮ್ಮ ಅಭಿನಯದ ಮೂಲಕ ಗಮನ ಸೆಳೆದಿದ್ದರು.



# ಹುಟ್ಟುಹಬ್ಬದ ಸಂಭ್ರಮದಲ್ಲಿ ರಚಿತಾ ರಾಮ್ ಕೆನ್ನೆ ಗಿಂಡಿದ ಅಭಿಮಾನಿ! Video ವೈರಲ್

ಸ್ಯಾಂಡಲ್‌ವುಡ್ ಡ್ವಿಂಪಲ್ ಕ್ವೀನ್ ಗೆ ಹುಟ್ಟುಹಬ್ಬದ ಸಂಭ್ರಮ. 33ನೇ ವಸಂತಕ್ಕೆ ಕಾಲಿಟ್ಟಿರುವ ನಟಿ ರಚಿತಾ ರಾಮ್, ಈ ಬಾರಿ ತನ್ನ ಅಭಿಮಾನಿಗಳ ಜೊತೆಗೆ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ.

ಬರ್ತ್‌ಡೇ ಹಿನ್ನೆಲೆಯಲ್ಲಿ ರಾಜರಾಜೇಶ್ವರಿ ನಗರದ ತಮ್ಮ ನಿವಾಸದಲ್ಲಿ ಮಧ್ಯರಾತ್ರಿ ಅಭಿಮಾನಿಗಳ ದಂಡೆ ನೆರೆದಿತ್ತು. ತಮ್ಮ ನೆಚ್ಚಿನ ನಟಿಯನ್ನು ಕಣ್ತುಂಬಿಕೊಂಡು ಹುಟ್ಟುಹಬ್ಬದ ಶುಭಾಶಯ ಕೋರಿದರು.

ಈ ವೇಳೆ ರಚಿತಾ ರಾಮ್, ಪ್ರತಿ ಅಭಿಮಾನಿಗಳಿಗೂ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಅವಕಾಶ ನೀಡಿದರು. ಈ ವೇಳೆ ಅಭಿಮಾನಿಯೊಬ್ಬ ಅವರ ಹತ್ತಿರಕ್ಕೆ ಬಂದು ಸೆಲ್ಫಿ ಕ್ಲಿಕ್ಕಿಸಿಕೊಂಡಿದ್ದಾರೆ. ಸೆಲ್ಫಿ ಕ್ಲಿಕ್ಕಿಸಿ ವಾಪಸ್ ಹೋಗುವಾಗ ಪ್ರೀತಿಯಿಂದ ಅವರ ಕೆನ್ನೆಯನ್ನ ಗಿಂಡಿದ್ದಾನೆ. ಆಗ ಒಂದು ಕ್ಷಣ ಶಾಕ್ ಆದ ರಚಿತಾ ರಾಮ್, ಇವನ್ಯಾರೋ ಎಂದು ತುಸು ಕೋಪದಲ್ಲಿ ನಕ್ಕು ಸುಮ್ಮನಾಗಿದ್ದಾರೆ. ಸದ್ಯ ಈ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗುತ್ತಿದೆ. ವಿಡಿಯೋ ನೋಡಿದ ರಚಿತಾ ಅಭಿಮಾನಿಗಳು, ಕೋಪದಲ್ಲೂ ನಮ್ಮ ಡಿಂಪಲ್ಲು ತುಂಬಾ ಮುದ್ದಾಗಿ ಕಾಣ್ತಿದ್ದಾರೆ ಎಂದು ಕಾಮೆಂಟ್ ಮಾಡುತ್ತಿದ್ದಾರೆ. ಜೊತೆಗೆ ಆ ವಿಡಿಯೋ ನೋಡಿ ಎಲ್ಲರೂ ಹುಟ್ಟುಹಬ್ಬದ ಶುಭಾಶಯಗಳನ್ನ ತಿಳಿಸುತ್ತಿದ್ದಾರೆ. ಇದೇ ವೇಳೆ ನಟ ದರ್ಶನ್ ಅವರನ್ನು ನೆನಪಿಸಿಕೊಂಡು ರಚಿತಾ ರಾಮ್ ಭಾವುಕರಾಗಿದ್ದಾರೆ. ನನ್ನ ಹುಟ್ಟುಹಬ್ಬದ ಅಂಗವಾಗಿ ದರ್ಶನ್ ಅವರ ಆಶೀರ್ವಾದ ಪಡೆಯಲು ನಾನು ಹೋಗಿದ್ದೆ. ಆದರೆ ವಾರಕ್ಕೆ ಕೇವಲ ಎರಡು ಭೇಟಿಗಳಿಗೆ ಮಾತ್ರ ಅವಕಾಶವಿದ್ದು, ಕುಟುಂಬದವರು ಭೇಟಿಯಾಗಬೇಕಿದ್ದ ಕಾರಣ ಮುಖಾಮುಖಿ ಭೇಟಿ ಮಾಡಲು ಸಾಧ್ಯವಾಗಲಿಲ್ಲ. ಸುಮಾರು ಎರಡೂವರೆ ಗಂಟೆ ಕಾದು ವಾಪಸ್ ಬಂದೆ. ಅವರ ಆಶೀರ್ವಾದ ಸದಾ ನನ್ನ ಮೇಲಿದೆ, ಮುಂದಿನ ದಿನಗಳಲ್ಲಿ ಖಂಡಿತ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯುತ್ತೇನೆ ಎಂದು ತಿಳಿಸಿದರು.



## 15 ವರ್ಷಕ್ಕೆ ಇತಿಹಾಸ ಸೃಷ್ಟಿಸಿದ ವೈಭವ್

# ಚಿನ್ನದ ಪದಕಕ್ಕೆ ಕೊರಳೊಡ್ಡಿದ ಯುವ ಕ್ರಿಕೆಟರ್!

ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತಕ್ಕೆ ಚಿನ್ನದ ಪದಕ ಗೆದ್ದ ಅತ್ಯಂತ ಕಿರಿಯ ಆಟಗಾರ ವೈಭವ್ ಸೂರ್ಯವಂಶಿ.' ನಡೆದ ಫೈನಲ್‌ನಲ್ಲಿ ಪಾಕಿಸ್ತಾನವನ್ನು ಸೋಲಿಸುವ ಮೂಲಕ ಭಾರತ ತಂಡ ಚಿನ್ನದ ಪದಕ ಗೆದ್ದಿತು. ಮೊದಲು ಬ್ಯಾಟಿಂಗ್ ಮಾಡಿದ ಭಾರತ 211 ರನ್‌ಗಳ ಬೃಹತ್ ಮೊತ್ತವನ್ನು ಗಳಿಸಿತು. ನಿಗದಿತ ಓವರ್ ನಲ್ಲಿ 196 ರನ್ ಗಳಿಸಲಷ್ಟೇ ಶಕ್ತವಾಗಿದ್ದು 19 ರನ್ ಗಳಿಂದ ಸೋಲು ಕಂಡಿತು.



ಅಕ್ಟೋಬರ್ 3ರಂದು ನಡೆದ ಏಷ್ಯನ್ ಕ್ರೀಡಾಕೂಟದ ಫೈನಲ್‌ನಲ್ಲಿ ಭಾರತೀಯ ಕ್ರಿಕೆಟ್ ತಂಡ ಪಾಕಿಸ್ತಾನವನ್ನು 19 ರನ್‌ಗಳಿಂದ ಸೋಲಿಸಿತು. ಈ ದಿನ ವೈಭವ್‌ಗೆ 15 ವರ್ಷ 190 ದಿನಗಳು. ಅವರು 2011ರ ಮಾರ್ಚ್ 27ರಂದು ಬಿಹಾರದಲ್ಲಿ ಜನಿಸಿದ್ದನು. ವೈಭವ್ ಭಾರತಕ್ಕಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಆಡಿದ ಅತ್ಯಂತ ಕಿರಿಯ ಆಟಗಾರರಾಗಿದ್ದು, ಈ ವರ್ಷದ ಚೊಚ್ಚಲ ಪಂದ್ಯದಲ್ಲೇ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಮುರಿದಿದ್ದಾರೆ.

ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಚಿನ್ನದ ಪದಕ ಗೆದ್ದ ಅತ್ಯಂತ ಕಿರಿಯ ಭಾರತೀಯ ಎಂಬ ದಾಖಲೆಯನ್ನು ಈ ಹಿಂದೆ ಶೂಟರ್ ಸೌರಭ್ ಚೌಧರಿ ಹೊಂದಿದ್ದರು. 2015ರ ಏಷ್ಯನ್ ಕ್ರೀಡಾಕೂಟದಲ್ಲಿ ಅವರು 16 ವರ್ಷದವರಾಗಿದ್ದಾಗ ಚಿನ್ನದ ಪದಕ ಗೆದ್ದರು.

ಏಷ್ಯನ್ ಕ್ರೀಡಾಕೂಟದ ಫೈನಲ್ ಪಂದ್ಯದ ನಂತರ ತೆಗೆದ ವೈಭವ್ ಸೂರ್ಯವಂಶಿ ಅವರ ವಿಡಿಯೋ ವೈರಲ್ ಆಗುತ್ತಿದೆ. ವೀಡಿಯೊದಲ್ಲಿ, ಅವರು ಐಸಿಸಿ ಅಧ್ಯಕ್ಷ ಜಯ್ ಶಾ ಅವರನ್ನು ಭೇಟಿಯಾಗಿ ಅವರ ಪಾದಗಳನ್ನು ಮುಟ್ಟುವುದನ್ನು ಕಾಣಬಹುದು. ಜಯ್ ಶಾ ಸ್ವತಃ ಚಾಂಪಿಯನ್ ಭಾರತೀಯ ತಂಡದ ಆಟಗಾರರಿಗೆ ಪದಕಗಳನ್ನು ಪ್ರದಾನ ಮಾಡಿದರು.

ಫೈನಲ್ ಪಂದ್ಯಕ್ಕೆ ಸಂಬಂಧಿಸಿದಂತೆ ಭಾರತ ಮೊದಲು ಬ್ಯಾಟ್ ಮಾಡಿ 211 ರನ್ ಗಳಿಸಿತು. ಅಭಿಷೇಕ್ ಶರ್ಮಾ 61 ರನ್ ಗಳಿಸಿದರು ಮತ್ತು ತಿಲಕ್ ವರ್ಮಾ ಅಜೇಯ 51 ರನ್ ಗಳಿಸಿದರು. ಗುರಿಯನ್ನು ಬೆನ್ನಟ್ಟಿದ ಹಸನ್ ನವಾಜ್ 96 ರನ್ ಗಳಿಸಿ ಕೊನೆಯ ಕ್ಷಣದವರೆಗೂ ಪಾಕಿಸ್ತಾನದ ಭರವಸೆಯನ್ನು ಜೀವಂತವಾಗಿಸಿದರು. ಆದರೆ ತಂಡವು 19 ರನ್ ನಿಂದ ಸೋಲು ಕಂಡಿತು. ಭಾರತದ ಪರ ಶಿವಂ ದುಬೆ, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ತಲಾ ಎರಡು ವಿಕೆಟ್ ಪಡೆದರು.

## ಪದಕ ಗೆದ್ದ ಬಳಿಕ ಜಯ್ ಶಾ ಪಾದ ಮುಟ್ಟಿ ಆಶೀರ್ವಾದ ಪಡೆದ ವೈಭವ್!



**ನಿಶಿನ್:** 2026ರ ಏಷ್ಯನ್ ಗೇಮ್ಸ್ ಪುರುಷರ ಕ್ರಿಕೆಟ್ ಫೈನಲ್‌ನಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ಭಾರತ 19 ರನ್‌ಗಳ ರೋಚಕ ಜಯ ಸಾಧಿಸಿದ ನಂತರ, ಪ್ರತಿಭಾವಂತ ಆಟಗಾರ ವೈಭವ್ ಸೂರ್ಯವಂಶಿ ಮತ್ತು ಐಸಿಸಿ ಅಧ್ಯಕ್ಷ ಜಯ್ ಶಾ ಅವರ ನಡುವಿನ ಹೃದಯಸ್ಪರ್ಶಿ ಕ್ಷಣವೊಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸದ್ದು ಮಾಡುತ್ತಿದೆ.

ನಿಶಿನ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ ಚಿನ್ನದ ಪದಕ ಗೆದ್ದ ಬಳಿಕ ಐಸಿಸಿ ಅಧ್ಯಕ್ಷ ಮತ್ತು ಬಿಸಿಸಿಐ (ಃಅಅಋ) ಮಾಜಿ ಕಾರ್ಯದರ್ಶಿ ಜಯ್ ಶಾ ಅವರು ಆಟಗಾರರಿಗೆ ಅಭಿನಂದನೆ ಸಲ್ಲಿಸಲು ಮೈದಾನಕ್ಕೆ ಬಂದಾಗ 15 ವರ್ಷದ ಬ್ಯಾಟಿಂಗ್ ಪ್ರತಿಭೆ ವೈಭವ್ ಸೂರ್ಯವಂಶಿ, ಜಯ್ ಶಾ ಅವರ ಆಶೀರ್ವಾದ ಪಡೆಯಲು ಅವರ ಪಾದ ಮುಟ್ಟುವ ಮೂಲಕ ಅಪಾರ ವಿನಯವನ್ನು ಪ್ರದರ್ಶಿಸಿದರು. ವೈಭವ್ ಸೂರ್ಯವಂಶಿಯ ಈ ಗೌರವಯುತ ನಡೆಯ ವಿಡಿಯೋ ಕೂಡಲೇ ಆನ್‌ಲೈನ್ ವೇದಿಕೆಗಳಲ್ಲಿ ವೈರಲ್ ಆಯಿತು. ವೈಭವ್ ಸೂರ್ಯವಂಶಿ ತೋರಿದ ಗೌರವಯುತ ನಡೆ, ಭಾರತದ ಅತ್ಯಂತ ಕಿರಿಯ ಆಟಗಾರರ ಪ್ರಬುದ್ಧತೆಯನ್ನು ಎತ್ತಿ ತೋರಿಸಿದ್ದಲ್ಲದೆ, ತಂಡದ ಅಸ್ಮಿತೆಯ ಮೂಲವಾಗಿರುವ ಬಲವಾದ ಸಾಂಸ್ಕೃತಿಕ ಮೌಲ್ಯಗಳನ್ನೂ ಪ್ರತಿಬಿಂಬಿಸಿತು.

# ವಿಂಡೀಸ್ ವಿರುದ್ಧದ ಪಂದ್ಯದಲ್ಲಿ 9ನೇ ಶತಕ ಸಿಡಿಸಿದ KL Rahul: 10,000 ಅಂತಾರಾಷ್ಟ್ರೀಯ ರನ್!

ಭಾರತೀಯ ಕ್ರಿಕೆಟ್ ತಂಡದ ವಿಕೆಟ್ ಕೀಪರ್–ಬ್ಯಾಟ್ಸ್‌ಮನ್ ಕೆಎಲ್ ರಾಹುಲ್ ವೆಸ್ಟ್ ಇಂಡೀಸ್ ವಿರುದ್ಧದ ಮೂರನೇ ಏಕದಿನ ಪಂದ್ಯದಲ್ಲಿ ಸ್ಫೋಟಕ ಶತಕ ಗಳಿಸಿದರು. ಇದು ಅವರ ಒಟ್ಟಾರೆ 9ನೇ ಏಕದಿನ ಶತಕ ಮತ್ತು ವೆಸ್ಟ್ ಇಂಡೀಸ್ ವಿರುದ್ಧದ ಅವರ ಎರಡನೇ ಶತಕ. ಅವರ ಇನ್ನಿಂಗ್ಸ್ ಭಾರತ ಮೊದಲು ಬ್ಯಾಟಿಂಗ್ ಮಾಡುವಾಗ 300+ ಸ್ಕೋರ್ ಗಳಿಸಲು ಸಹಾಯ ಮಾಡಿತು. ಇನ್ನು ಕೆಎಲ್ ರಾಹುಲ್ 10,000 ಅಂತರರಾಷ್ಟ್ರೀಯ ರನ್‌ಗಳನ್ನು ಸಹ ಪೂರ್ಣಗೊಳಿಸಿದರು. ಭಾರತ 141 ರನ್‌ಗಳಲ್ಲಿ ಮೂರನೇ ವಿಕೆಟ್ ಕಳೆದುಕೊಂಡಾಗ ರಾಹುಲ್ ಕ್ರೀಸ್‌ಗೆ ಬಂದರು. ನಮನ್ ಧೀರ್ ಅವರೊಂದಿಗೆ ಐದನೇ ವಿಕೆಟ್‌ಗೆ 65 ರನ್‌ಗಳ ಜೊತೆಯಾಟವಾಡಿದರು. ರಾಹುಲ್ 41 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು.

ಉತ್ತಮ ಫಾರ್ಮ್‌ನಲ್ಲಿರುವ ರಾಹುಲ್, ಕೆಳ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳೊಂದಿಗೆ ತಂಡವು 300 ರನ್‌ಗಳ ಗಡಿ ದಾಟಲು ಸಹಾಯ ಮಾಡಲು ಉಪಯುಕ್ತ ರನ್‌ಗಳನ್ನು ಸಂಗ್ರಹಿಸಿದರು. ರಾಹುಲ್ 2016ರಲ್ಲಿ ಜಿಂಬಾಬ್ವೆ ಕ್ರಿಕೆಟ್ ತಂಡದ ವಿರುದ್ಧ ಏಕದಿನ ಪಂದ್ಯಕ್ಕೆ ಪಾದಾರ್ಪಣೆ ಮಾಡಿದರು. ಇಲ್ಲಿಯವರೆಗೆ 101 ಏಕದಿನ ಪಂದ್ಯಗಳನ್ನು ಆಡಿದ್ದು 91 ಇನ್ನಿಂಗ್ಸ್‌ಗಳಲ್ಲಿ ಸುಮಾರು 50 ಸರಾಸರಿಯಲ್ಲಿ 3,500ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಒಂಬತ್ತು ಶತಕಗಳ ಜೊತೆಗೆ, ಅವರು ಈ ಸ್ವರೂಪದಲ್ಲಿ 20 ಅರ್ಧಶತಕಗಳನ್ನು ಹೊಂದಿದ್ದಾರೆ.



# ಬೆಂಗಳೂರಲ್ಲಿ 2ನೇ ಆವೃತ್ತಿಯ ಏಷ್ಯನ್ ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್: 9 ದೇಶಗಳ ಸ್ಪರ್ಧಿಗಳು ಭಾಗಿ

ಎರಡನೇ ಆವೃತ್ತಿಯ ಏಷ್ಯನ್ ಮಾಸ್ಟರ್ಸ್ ಈಜು ಚಾಂಪಿಯನ್ ಶಿಪ್ –2026 ಭಾನುವಾರದಿಂದ ಬೆಂಗಳೂರಿನಲ್ಲಿ ಆರಂಭವಾಗಲಿದೆ. ನಗರದ ಪಡುಕೋಣೆ – ದ್ರಾವಿಡ್ ಸೆಂಟರ್ ಫಾರ್ ಎಕ್ಸಲೆನ್ಸ್ ಸೆಂಟರ್ ಈ ಕ್ರೀಡಾಕೂಟಕ್ಕೆ ವೇದಿಕೆಯಾಗಲಿದ್ದು, ಅಕ್ಟೋಬರ್ 10ರವರೆಗೆ ಸ್ಪರ್ಧೆಗಳು ನಡೆಯಲಿವೆ.

ಈ ಕ್ರೀಡಾಕೂಟದ ಮೂಲಕ ಏಷ್ಯಾದ 9 ಪ್ರಮುಖ ದೇಶಗಳ ಸ್ಪರ್ಧಿಗಳು ಒಂದೇ ವೇದಿಕೆಯಲ್ಲಿ ಮುಖಾಮುಖಿಯಾಗುತ್ತಿದ್ದು, ಒಟ್ಟು ಸುಮಾರು 1500ಕ್ಕೂ ಹೆಚ್ಚು ಈಜುಪಟುಗಳು ಹಾಗೂ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

2016ರಲ್ಲಿ ಜಪಾನ್‌ನಲ್ಲಿ ನಡೆದ ಉದ್ಘಾಟನಾ ಆವೃತ್ತಿಯ ನಂತರ, ಸತತ ಹತ್ತು ವರ್ಷಗಳ ಬಳಿಕ ಏಷ್ಯನ್ ಮಾಸ್ಟರ್ಸ್ ಈಜು ಚಾಂಪಿಯನ್ ಶಿಪ್ ಮತ್ತೆ ಮರಳಿದೆ. ಏಷ್ಯಾ ಅಕ್ವಾಟಿಕ್ಸ್ ಮಾರ್ಗದರ್ಶನದಲ್ಲಿ ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾ ಈ ಕೂಟವನ್ನು ಆಯೋಜಿಸುತ್ತಿದ್ದು, 'ಕರ್ನಾಟಕ ಈಜು ಸಂಸ್ಥೆ' ಸ್ಥಳೀಯ ಆಯೋಜಕ ಪಾಲುದಾರನಾಗಿ ಕೈಜೋಡಿಸಿದೆ.

ಸತತ ಏಳು ದಿನಗಳ ಕಾಲ ನಡೆಯಲಿರುವ ಈ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ, ಶ್ರೀಲಂಕಾ, ಇರಾನ್, ಥೈಲ್ಯಾಂಡ್, ಜಪಾನ್, ಚೀನಾ, ಒಮನ್, ಮಲೇಷ್ಯಾ ಮತ್ತು ದಕ್ಷಿಣ ಕೊರಿಯಾ ಸೇರಿದಂತೆ ಒಟ್ಟು ಒಂಬತ್ತು ದೇಶಗಳ ಈಜುಪಟುಗಳು ತಮ್ಮ ಕೌಶಲ್ಯ ಪ್ರದರ್ಶಿಸಲಿದ್ದಾರೆ. ಆತಿಥೇಯ ಭಾರತದ ಸುಮಾರು 1,000ಕ್ಕೂ ಹೆಚ್ಚು ಈಜುಪಟುಗಳು ಸ್ಪರ್ಧಿಸಲಿದ್ದಾರೆ.

ಇತ್ತೀಚೆಗೆ ಹರಿಯಾಣದಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್ ಶಿಪ್ ಹಾಗೂ ವಿವಿಧ ರಾಜ್ಯಗಳ ಮಾಸ್ಟರ್ಸ್ ಚಾಂಪಿಯನ್‌ಶಿಪ್ ಗಳ ಮೂಲಕ ಇವರನ್ನು ಆಯ್ಕೆ ಮಾಡಲಾಗಿದೆ. ಭಾರತದ ಪ್ರಮುಖ ಈಜುಪಟುಗಳಾದ ಪಾರ್ಥ ವಾರಣಾಸಿ, ಅರವಿಂದ್ ನೈನಾರ್, ರೋಹಿತ್ ಹವಲ್ದಾರ್ ಮತ್ತು ಡಾ.ಭಾವನಾ ಆನಂದ್ ಸೇರಿದಂತೆ ಚೀನಾದ ಗ್ಯಾಂಗ್ ಲೇ ಅವರಂತಹ ಜಾಗತಿಕ ತಾರೆಯರು ಈ ಪಂದ್ಯಾವಳಿಯ ಪ್ರಮುಖ ಆಕರ್ಷಣೆಯಾಗಿದ್ದಾರೆ. ಈ ಕ್ರೀಡಾಕೂಟದ ಕುರಿತು ಮಾತನಾಡಿರುವ ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಮೊನಾಲ್ ಚೋಕ್ಸಿ, "ಜಪಾನ್‌ನಲ್ಲಿ ನಡೆದ ಮೊದಲ ಆವೃತ್ತಿಯ ನಂತರ ಭಾರತದಲ್ಲಿ ಎರಡನೇ ಆವೃತ್ತಿಯನ್ನು ಆಯೋಜಿಸುತ್ತಿರುವುದು ನಮಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ ಎಂದರು. 1,500ಕ್ಕೂ ಅಧಿಕ ಹೆಚ್ಚು ಜನರ ಭಾಗವಹಿಸುವಿಕೆ ಹಾಗೂ ಸಾವಿರಕ್ಕೂ ಹೆಚ್ಚು ಭಾರತೀಯ ಸ್ಪರ್ಧಿಗಳ ಉಪಸ್ಥಿತಿಯು ಏಷ್ಯಾದಾದ್ಯಂತ ಮಾಸ್ಟರ್ಸ್ ಈಜಿನ ಜನಪ್ರಿಯತೆಯನ್ನು ಎತ್ತಿಹಿಡಿಯುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news